ನಾಡೋಜ

ಡಾ. ವೂಡೇ ಪಿ. ಕೃಷ್ಣ

ಮುಖಾಮುಖಿ

ಸಂದರ್ಶನ-ಅಂತರಂಗ ದರ್ಶನ

ವಿನಯ್ ಭಟ್

50 ಪ್ರಶ್ನೆ ಉತ್ತರ

ಬಾಲ್ಯ - ಮೌಲ್ಯ - ಆದರ್ಶ

ಪಟೇಲ್

ನಾಡೋಜ ಡಾ. ವೂಡೇ ಪಿ. ಕೃಷ್ಣ

ಮುಖಾಮುಖಿ

ಸಂದರ್ಶನ-ಅಂತರಂಗ ದರ್ಶನ

ಬಾಲ್ಯ - ಮೌಲ್ಯ - ಆದರ್ಶ

ವಿನಯ್ ಭಟ್

ಪಟೇಲ್ ಪಬ್ಲಿಕೇಷನ್ಸ್
ಬೆಂಗಳೂರು

MUKHAMUKHI

A face to face conversation with Nadoja Dr. Wooday P. Krishna with 50 Questions and Answers.

Narration by
Vinay Bhat

Published by
Patel Publications
#27, 2nd Floor, 5th Cross
Shantivana, Sahakaranagara Post
Bengaluru - 560 092.
Mobile: 94485 66928

Gandhiji Line Drawing by M.S. Murthy
Line Drawings by Zabiulla M. Asad
Cover & Inner Page Design by Shwetha B S

© Nadoja Dr. Wooday P. Krishna

Pages: 4+108 =112
First Edition : 2023
Size : Crown 1/8th
Copies : 1000
Paper Used : 80 GSM NS Maplitho
Price: 100/-

ಸ್ವಾನ್ ಪ್ರಿಂಟರ್ಸ್
svanprint@gmail.com
☎ 080-26742233



ಅರ್ಪಣೆ

ನನ್ನನ್ನು ಸಾಹಿತ್ಯಲೋಕಕ್ಕೆ

ಪರಿಚಯಿಸಿದ ಹಿರಿಯರೂ, ಆಪ್ತರೂ

ಜಾನಪದ ವಿದ್ವಾಂಸರೂ ಆದ

ಡಾ. ಮೀರಾಸಾಬಿಹಳ್ಳಿ ಶಿವಣ್ಣ

ಅವರಿಗೆ

ಪ್ರೀತಿಯಿಂದ

ನನ್ನ ನುಡಿ

'ಮುಖಾಮುಖಿ'ಯ 50 ಪ್ರಶ್ನೋತ್ತರಗಳಿಗೆ ಕಾರಣ- 'ಚಂದನ', 'ಟಿವಿ 5' ಹಾಗೂ ಇತರ ಮಾಧ್ಯಮಗಳಲ್ಲಿ ಪ್ರಸಾರವಾದ ಸಂದರ್ಶನಗಳು. ಅವುಗಳನ್ನು ಗಮನಿಸಿದ ಮಿತ್ರ ವಿನಯ್‌ಭಟ್ ಅವರು ಇಡೀ ನನ್ನ ಬದುಕು-ವೃತ್ತಿ-ಸಾಧನೆಗಳನ್ನು ಅನಾವರಣ ಮಾಡುವಂತೆ ಸಂಕಥನವಾಗಿ ಸಂಯೋಜಿಸಿದುದಲ್ಲದೆ, ಅದಕ್ಕೆ ಅಕ್ಷರ ರೂಪ ನೀಡಿದ್ದರಿಂದ ಅದು ಕೃತಿಯಾಗಿ ನಿಮ್ಮ ಮುಂದಿದೆ.

ಈ ಅಕ್ಷರ ಕೃತಿ ಸಂದರ್ಶನವನ್ನು ತಮ್ಮ ಬೆನ್ನುಡಿಯ ಮೂಲಕ ಇನ್ನಷ್ಟು ಅರ್ಥಪೂರ್ಣ ಗೊಳಿಸಿದವರು ನಾಡಿನ ಪ್ರಖ್ಯಾತ ಅನುವಾದಕರೂ, ಸಂಸ್ಕೃತಿ ಚಿಂತಕರೂ ಆದ ಪ್ರೊ. ಎಂ.ಜಿ. ರಂಗಸ್ವಾಮಿ ಅವರು.

ನನ್ನನ್ನು ಸಾಹಿತ್ಯಲೋಕಕ್ಕೆ ಪರಿಚಯಿಸಿದ ಆಪ್ತರಾದ ಡಾ. ಮೀರಾಸಾಬಿಹಳ್ಳಿ ಶಿವಣ್ಣನವರಿಗೆ ಈ ಕೃತಿಯನ್ನು ಅರ್ಪಿಸಲು ಸಂತೋಷವಾಗುತ್ತಿದೆ.

ಇಡೀ ಕೃತಿಯನ್ನು ತಮ್ಮ ಸೃಜನಶೀಲ ಪುಟ ವಿನ್ಯಾಸದಿಂದ ಮತ್ತಷ್ಟು ಮೆರುಗು ತುಂಬಿದವರು ಶ್ರೀಮತಿ ಬಿ.ಎಸ್. ಶ್ವೇತಾ ಅವರು. ಹಾಗೂ ಸೂಕ್ತ ರೇಖಾಚಿತ್ರಗಳಿಂದ ಜೀವ ತುಂಬಿದವರು ತರುಣ ಕವಿ, ವಿಮರ್ಶಕ, ಕಲಾವಿದ ಜ಼ಬಿವುಲ್ಲಾ ಎಂ. ಅಸದ್ ಅವರು; ಈ ಕೃತಿಯುನ್ನು ಕಲಾತ್ಮಕವಾಗಿ ಮುದ್ರಿಸಿದವರು ಸ್ವ್ಯಾನ್ ಕೃಷ್ಣಮೂರ್ತಿ ಅವರು. ಈ ಎಲ್ಲರಿಗೂ ನನ್ನ ಮನದಾಳದ ನಮನಗಳು.

ನಾಡೋಜ ಡಾ. ವೂಡೇ ಪಿ. ಕೃಷ್ಣ

ರಥಸಪ್ತಮಿ
28-1-2023
ಬೆಂಗಳೂರು



ನಾಡೋಜ ಡಾ. ವೂಡೇ ಪಿ. ಕೃಷ್ಣ

ಬೆಂಗಳೂರಿನ ಪ್ರತಿಷ್ಠಿತ ವೂಡೇ ಕುಟುಂಬದಲ್ಲಿ 1-2-1963ರಲ್ಲಿ ಜನನ. ತಾತ ದಿ. ಡಬ್ಲ್ಯೂ.ಹೆಚ್. ಹನುಮಂತಪ್ಪ (ಸೀನಿಯರ್), ತಂದೆ ದಿ. ಡಬ್ಲ್ಯೂ.ಹೆಚ್. ಪುಟ್ಟಯ್ಯ, ತಾಯಿ ದಿ. ದೊಡ್ಡಮ್ಮಯ್ಯ. ತಾತ, ತಂದೆ ಉದ್ಯಮಿಗಳು, ಸ್ವಾತಂತ್ರ್ಯ ಹೋರಾಟಗಾರರು ಹಾಗೂ ಸಮಾಜ ಸೇವಕರು.

ಬೆಂಗಳೂರಿನ ಪೂರ್ಣಪ್ರಜ್ಞ ಶಾಲೆ, ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾ ಶಾಲೆಯಲ್ಲಿ ಓದಿದ ಕೃಷ್ಣ ಅವರು ನಂತರದ ದಿನಗಳಲ್ಲಿ ಪಡೆದುಕೊಂಡ ಪದವಿಗಳು ಹಲವಾರು. ಮೆಕಾನಿಕಲ್ ಇಂಜಿನಿಯರಿಂಗ್‌ನಲ್ಲಿ ಬಿ.ಇ., ಎಂ.ಎಸ್. ಪದವಿಗಳು, ಕಾನೂನಿನಲ್ಲಿ ಎಲ್‌ಎಲ್.ಬಿ., ಎಂ.ಎಲ್. ಪದವಿಗಳು, ಸಮಾಜಶಾಸ್ತ್ರದಲ್ಲಿ ಎಂ.ಎ. ಪದವಿ, ಪತ್ರಿಕೋದ್ಯಮದಲ್ಲಿ ಡಿಪ್ಲೋಮಾ, ಮ್ಯಾನೇಜ್‌ಮೆಂಟ್‌ನಲ್ಲಿ ಪಿಎಚ್.ಡಿ ಪದವಿ.

ಬಿ.ಎಂ.ಎಸ್. ಇಂಜಿನಿಯರಿಂಗ್ ಕಾಲೇಜಿನಲ್ಲಿ ಉಪನ್ಯಾಸಕರಾಗಿ ವೃತ್ತಿ ಜೀವನ ಪ್ರಾರಂಭಿಸಿದ ಕೃಷ್ಣ ಅವರು

ಭಾರತ ಸರ್ಕಾರದ ಅನುಮೋದಿತ ವಾಲ್ಯುಯರ್ ಹಾಗೂ ಟೆಕ್ನಿಕಲ್ ಆರ್ಬಿಟ್ರೇಟರ್ ಆಗಿ 30ಕ್ಕೂ ಹೆಚ್ಚು ವರ್ಷಗಳ ಸೇವೆ. ಕರ್ನಾಟಕ ಸರ್ಕಾರದ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರಾಗಿ ರಾಜ್ಯ ಸಚಿವ ದರ್ಜೆಯಲ್ಲಿ (2009–2011) ಸೇವೆ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಭಾರತೀಯ ಇಂಜಿನಿಯರುಗಳ ಸಂಸ್ಥೆಯಲ್ಲಿ ವಿವಿಧ ಹುದ್ದೆಗಳಲ್ಲಿ ಕಾರ್ಯನಿರ್ವಹಣೆ. ಇಂಜಿನಿಯರಿಂಗ್ ವಿಷಯಕ್ಕೆ ಸಂಬಂಧಿಸಿದಂತೆ ಅಂತಾರಾಷ್ಟ್ರೀಯ, ರಾಷ್ಟ್ರೀಯ, ರಾಜ್ಯಮಟ್ಟದ ಅನೇಕ ವಿಚಾರ ಗೋಷ್ಠಿ, ಸಮ್ಮೇಳನ, ಕಾರ್ಯಾಗಾರಗಳ ಸಂಘಟನೆ, ಪ್ರಬಂಧಗಳ ಮಂಡನೆ ಹಾಗೂ ಪ್ರಕಟಣೆ. ಸರ್. ಎಂ. ವಿಶ್ವೇಶ್ವರಯ್ಯ ಜೀವನ– ಸಾಧನೆ ಕುರಿತ ಕೃತಿ ರಚನೆ (2012), ನದಿಯಂತೆ ನೆನಪು (ಆತ್ಮಕಥನ), ಬೆಳ್ಳಕ್ಕಿ ಸಾಲು (ವ್ಯಕ್ತಿಚಿತ್ರಗಳು) 2016.

ಅಲಂಕರಿಸಿದ ಸ್ಥಾನಮಾನಗಳು

ಸದಸ್ಯರು, ಕರ್ನಾಟಕ ವಿಪತ್ತು ನಿರ್ವಹಣಾ ಪ್ರಾಧಿಕಾರ; ಗೌ. ಪ್ರಧಾನ ಕಾರ್ಯದರ್ಶಿಗಳು, ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ; ರಾಷ್ಟ್ರೀಯ ಕಾರ್ಯಕಾರಿಣಿ ಸದಸ್ಯರು, ಭಾರತೀಯ ರೆಡ್‌ಕ್ರಾಸ್ ಸಂಸ್ಥೆ, ನವದೆಹಲಿ; ಅಧ್ಯಕ್ಷರು, ಕರ್ನಾಟಕ ರಾಜ್ಯ ಕೇಂದ್ರ, ಭಾರತೀಯ ಇಂಜಿನಿಯರುಗಳ ಸಂಸ್ಥೆ; ಅಧ್ಯಕ್ಷರು, ಗಾಂಧೀ ಶಾಂತಿ ಪ್ರತಿಷ್ಠಾನ, ಬೆಂಗಳೂರು ಕೇಂದ್ರ; ಅಧ್ಯಕ್ಷರು, ಕರ್ನಾಟಕ ಗಾಂಧಿ ಸ್ಮಾರಕ ನಿಧಿ; ಗೌ. ಕೋಶಾಧ್ಯಕ್ಷರು, ಭಾರತ ಸೇವಾದಲ ಕೇಂದ್ರ ಸಮಿತಿ; ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರು, ಭಾರತೀಯ ಕ್ಷಯರೋಗ ಸಂಸ್ಥೆ, ನವದೆಹಲಿ; ಆಡಳಿತ ಮಂಡಲಿ ಸದಸ್ಯರು, ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾ, ಹೈದರಾಬಾದ್; ಉಪಾಧ್ಯಕ್ಷರು, ವ್ಯಾಲ್ಯುಯರ್ ಸಂಸ್ಥೆ, ಬೆಂಗಳೂರು ಶಾಖೆ; ಅಧ್ಯಕ್ಷರು, ಕರ್ನಾಟಕ ರಾಜ್ಯ ಕೇಂದ್ರ, ಭಾರತೀಯ ಆರ್ಬಿಟ್ರೇಟರುಗಳ ಸಂಸ್ಥೆ; ಅಧ್ಯಕ್ಷರು, ಯೂತ್ ಹಾಸ್ಟೆಲ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಬೆಂಗಳೂರು ದಕ್ಷಿಣ ಘಟಕ; ಅಧ್ಯಕ್ಷರು, ಅಂತಾರಾಷ್ಟ್ರೀಯ ಧಾರ್ಮಿಕ ಸ್ವಾತಂತ್ರ್ಯ ಸಂಘ, ಕರ್ನಾಟಕ ಅಧ್ಯಾಯ; ಅಧ್ಯಕ್ಷರು, ಕರ್ನಾಟಕ ಖಾಸಗಿ

ಸ್ನಾತಕೋತ್ತರ ಕಾಲೇಜುಗಳ ಸಂಘ; ರಾಷ್ಟ್ರೀಯ ಅಧ್ಯಕ್ಷರು, ಭಾರತೀಯ ಉತ್ಪಾದನಾ ಇಂಜಿನಿಯರುಗಳ ಸಂಸ್ಥೆ; ವ್ಯವಸ್ಥಾಪಕ ಧರ್ಮದರ್ಶಿ, ಆಚಾರ್ಯ ವಿನೋಬಾ ಭಾವೆ ಸ್ಥಾಪಿತ ವಿಶ್ವನೀಡಂ ಟ್ರಸ್ಟ್; ಕಾರ್ಯದರ್ಶಿಗಳು, ಕರ್ನಾಟಕ ಖಾಸಗಿ ಕಾಲೇಜು ಆಡಳಿತ ಮಂಡಳಿಗಳ ಸಂಘ; ಗೌ. ವ್ಯವಸ್ಥಾಪಕ ನಿರ್ದೇಶಕರು, ನೆಹರೂನಗರ ಸಹಕಾರಿ ಬ್ಯಾಂಕ್ ನಿಯಮಿತ; ಅಧ್ಯಕ್ಷರು, ಆಡಳಿತ ಮಂಡಳಿ, ಸದಾಶಿವನಗರ ವಿದ್ಯಾಸಂಸ್ಥೆಗಳು; ಉಪಾಧ್ಯಕ್ಷರು, ನವಜೀವನ ವ್ಯಾಯಾಮಶಾಲಾ ಟ್ರಸ್ಟ್; ಉಪಾಧ್ಯಕ್ಷರು, ಶ್ರೀ ಶೇಷಾದ್ರಿಪುರಂ ರಾಮಸೇವಾ ಸಮಿತಿ; ಕರ್ನಾಟಕ ಸರ್ಕಾರದ ನಾಮನಿರ್ದೇಶಿತ ಧರ್ಮದರ್ಶಿ, ಬಳೇಪೇಟೆ ಶ್ರೀನಿವಾಸ ಮಂದಿರಂ ಮತ್ತು ಚಾರಿಟೀಸ್; ಕಾರ್ಯಕಾರಿ ಸಮಿತಿ ಸದಸ್ಯರು, ಕರ್ನಾಟಕ ಸರ್ವೋದಯ ಮಂಡಲ ಹಾಗೂ ಭಾರತೀಯ ವಿದ್ಯಾಭವನದ ವಿಜ್ಞಾನ ಮತ್ತು ಮಾನವೀಯ ಮೌಲ್ಯಗಳ ಗಾಂಧಿ ಕೇಂದ್ರ; ಪಟೇಲ್ ಪ್ರತಿಷ್ಠಾನದ ಗೌರವ ಅಧ್ಯಕ್ಷರು; ಸ್ಥಾಪಕ ಧರ್ಮದರ್ಶಿ, ವೂಡೇ ಪ್ರತಿಷ್ಠಾನ. ಸದಸ್ಯರು, ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಗಾಂಧಿ ಸುಸ್ಥಿರ ಅಭಿವೃದ್ಧಿ ಕೇಂದ್ರದ ಸಲಹಾ ಸಮಿತಿ: ಸದಸ್ಯರು, ಯೋಜನಾ ನಿಯಂತ್ರಣ ಹಾಗೂ ಮೌಲ್ಯಮಾಪನ ಮಂಡಳಿ, ಆದಿ ಚುಂಚನಗಿರಿ ವಿಶ್ವವಿದ್ಯಾಲಯ.

ಸಂದ ಪ್ರಶಸ್ತಿ ಗೌರವಗಳು

ಇಂಡಿಯನ್ ರೆಡ್‌ಕ್ರಾಸ್ ಸಂಸ್ಥೆಯ ರಾಷ್ಟ್ರಪತಿಗಳ ಚಿನ್ನದ ಪದಕ(2012), ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ (2004), ವಿಕಲಚೇತನರ ಸಬಲೀಕರಣ ರಾಜ್ಯ ಪ್ರಶಸ್ತಿ (2008), ಕರ್ನಾಟಕ ರಾಜ್ಯ ಯುವ ಪ್ರಶಸ್ತಿ (1992), ಬೆಂಗಳೂರು ಮೆಟ್ರೊ ರೋಟರಿಯ ಗೌರವ ಸದಸ್ಯತ್ವ (2012), ಕೆನಡಾದ ವಿಶ್ವ ಉತ್ಪಾದಕತ್ವ ವಿಜ್ಞಾನ ಅಕಾಡೆಮಿಯ ಫೆಲೋ ಗೌರವ (2016), ಇಂಗ್ಲೆಂಡಿನ ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ಮತ್ತು ಟೆಕ್ನಾಲಜಿಯ ಫೆಲೋ ಗೌರವ (2012), ಶ್ರೇಷ್ಠ ಇಂಜಿನಿಯರ್ ಪ್ರಶಸ್ತಿ (2011), ಕರ್ನಾಟಕ ರಾಜ್ಯಪಾಲರಿಂದ ರೆಡ್‌ಕ್ರಾಸ್ ಪ್ರಶಸ್ತಿ (2005),

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕೆಂಪೇಗೌಡ ಪ್ರಶಸ್ತಿ (2002), ಭಾರತೀಯ ವಿದ್ಯಾ ಭವನದಿಂದ ಭಾರತೀಯ ವಿದ್ಯಾ ವಿಶಾರದ ಗೌರವ (1990), ವಿವೇಕಾನಂದ ಕಲಾ ಕೇಂದ್ರದಿಂದ ಸೇವಾಶ್ರೀ ಪ್ರಶಸ್ತಿ (1999), ಡಿ.ವಿ.ಜಿ. ಪುರಸ್ಕಾರ (2005), ನ್ಯೂಯಾರ್ಕ್‌ನ ಬಸವ ಇಂಟರ್‌ನ್ಯಾಷನಲ್ ವತಿಯಿಂದ ಸೈಟೇಷನ್ ಪ್ರಶಸ್ತಿ (2008), ಆಂಧ್ರ ಗಡಿನಾಡ ಕನ್ನಡ ಸಾಹಿತ್ಯ ಸಮ್ಮೇಳನಾಧ್ಯಕ್ಷ ಗೌರವ(2014). ಕಿರಿಯ ವಯಸ್ಸಿನಲ್ಲೇ ಹಿರಿಯ ಸಾಧನೆ ಮಾಡಿದ ಇವರಿಗೆ 2016ರಲ್ಲಿ 'ಕೃಷ್ಣಸಿರಿ' ಎಂಬ ಗೌರವ ಗ್ರಂಥವನ್ನು ಅರ್ಪಿಸಲಾಗಿದೆ. ಎಸ್. ವಿಶ್ವನಾಥ್ ಸ್ಮಾರಕ ಪ್ರಶಸ್ತಿ, ಮಂಡ್ಯ(2017), ದಿ ಹಿಂದೂ ಗ್ರೂಪ್‌ನಿಂದ ಶಿಕ್ಷಣ ಕ್ಷೇತ್ರದ ಸೇವೆಗಾಗಿ 'ಡಾಯನ್ಸ್' ಪ್ರಶಸ್ತಿ(2017), ಸಮಾಜಸೇವೆಗಾಗಿ ಮಂಡ್ಯದ ಡಾ.ಜಿ.ಮಾದೇಗೌಡ ಪ್ರತಿಷ್ಠಾನ ಪ್ರಶಸ್ತಿ(2020), ಉದಯಭಾನು ಕಲಾ ಸಂಘದ ಆಜೀವ ಸದಸ್ಯತ್ವ ಗೌರವ (2020), ಶಿಕ್ಷಣ ಕ್ಷೇತ್ರದ ಅನುಪಮ ಸೇವೆಗಾಗಿ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಗೌರವ ಡಿ.ಲಿಟ್‌ಗೆ ತತ್ಸಮಾನವಾದ ಪ್ರತಿಷ್ಠಿತ ನಾಡೋಜ ಗೌರವ ಪದವಿ(2020), ಬೆಂಗಳೂರು ಮ್ಯಾನೇಜ್‌ಮೆಂಟ್ ಸಂಸ್ಥೆಯ ವರ್ಷದ ಶಿಕ್ಷಣ ತಜ್ಞ ಪ್ರಶಸ್ತಿ (2022), ಲಯನ್ಸ್ ಅಂತಾರಾಷ್ಟ್ರೀಯ ಸಂಸ್ಥೆಯ ಡಾ. ಎಂ.ಸಿ. ಮೋದಿ ಮಾನವೀಯ ಪ್ರಶಸ್ತಿ (2022), ವ್ಯಾಲ್ಯುಯರ್ಸ್ ಸಂಸ್ಥೆಯ ಶ್ರೇಷ್ಠ ವ್ಯಾಲ್ಯುಯರ್ಸ್ ಪ್ರಶಸ್ತಿ (2022), ಕರ್ನಾಟಕ ರಾಜ್ಯ ಸ್ವಯಂ ಸೇವಾ ಸಂಸ್ಥೆಗಳ ಒಕ್ಕೂಟದ ಸೇವಾ ಪ್ರಶಸ್ತಿ (2022)- ಹೀಗೆ ಹಲವು ಗೌರವಗಳು ಇವರಿಗೆ ಸಂದಿವೆ.

ಪ್ರಸ್ತುತ ಅವರು ಶೇಷಾದ್ರಿಪುರಂ ಸಮೂಹ ಶಿಕ್ಷಣ ಸಂಸ್ಥೆಗಳ ಗೌರವ ಪ್ರಧಾನ ಕಾರ್ಯದರ್ಶಿಗಳಾಗಿ ಹಾಗೂ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

❑

ಪರಿವಿಡಿ

ಗಾಂಧಿ–ಅಂಬೇಡ್ಕರ್–ವಿವೇಕಾನಂದ / 27

ಶಿಕ್ಷಣ ಕ್ಷೇತ್ರ / 57

ವೈವಿಧ್ಯಮಯ ಜವಾಬ್ದಾರಿಗಳು / 76

ವೈಯಕ್ತಿಕ ಜೀವನ / 98



ಮನುಷ್ಯ ಅವನ ಯೋಚನೆಗಳ
ಉತ್ಪನ್ನವಾಗಿದ್ದಾನೆ, ಅವನ ಯೋಚನೆಯಂತೆ
ಅವನಾಗುತ್ತಾನೆ.

* * * *

ಮೊದಲು ಬೇರೆಯವರು ನಿಮ್ಮನ್ನು
ನಿರ್ಲಕ್ಷಿಸುತ್ತಾರೆ, ನಂತರ ನಿಮ್ಮನ್ನು ನೋಡಿ
ನಗುತ್ತಾರೆ, ಆನಂತರ ನಿಮ್ಮೊಂದಿಗೆ
ಹೋರಾಡುತ್ತಾರೆ, ನಂತರ ನೀವು ಗೆಲ್ಲುತ್ತೀರಿ.

* * * *

ನಿಮ್ಮನ್ನು ನೀವು ಕಂಡುಕೊಳ್ಳಲು
ಇರುವ ಉತ್ತಮ ಮಾರ್ಗವೆಂದರೆ
ಬೇರೆಯವರ ಸೇವೆಯಲ್ಲಿ ನಿಮ್ಮನ್ನು
ಕಳೆದುಕೊಂಡು ಬಿಡುವುದು.

1 ತಮ್ಮ ಹೆಸರಾದ ವೂಡೇ ಪಿ. ಕೃಷ್ಣ ಸ್ವಲ್ಪ ವಿಶಿಷ್ಟವಾಗಿದೆ ಹಾಗೂ ಕುತೂಹಲ ಹುಟ್ಟಿಸುವಂತಿದೆ. ಇದರ ಅರ್ಥವನ್ನು ತಿಳಿಸಬಹುದಾ?

ವೂಡೇ ಎನ್ನುವುದು ಒಂದು ಗ್ರಾಮ. ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕಿನಲ್ಲಿರುವ ಆಂಧ್ರಪ್ರದೇಶಕ್ಕೆ ಹೊಂದಿಕೊಂಡಿರುವ ಗಡಿ ಗ್ರಾಮ ಇದು. 200 ವರ್ಷದ ಹಿಂದೆಯೇ ನಮ್ಮ ಹಿರಿಯರೆಲ್ಲ ಅಲ್ಲಿಂದ ಬೆಂಗಳೂರಿಗೆ ವಲಸೆ ಬಂದರು. ಆ ಗ್ರಾಮ ಈಗಿಲ್ಲ, ಅದು ನಶಿಸಿಹೋಗಿದೆ. ಆದರೆ 'ನಡುವೂಡೇ', 'ಕಡೆವೂಡೇ' ಅಂತಾ ಎರಡು ಗ್ರಾಮಗಳು ಈಗಲೂ ಇವೆ. ಒಂದು ಆಂಧ್ರದಲ್ಲಿದೆ, ಒಂದು ಕರ್ನಾಟಕದಲ್ಲಿದೆ. ನಮ್ಮ ಹಿರಿಯರೆಲ್ಲ ಬೆಂಗಳೂರಿಗೆ ಬಂದು ಇಲ್ಲಿ ವಾಸ ಮಾಡಿದ ಕಾರಣ, ವೂಡೇ ಬದಲು ಇಂಗ್ಲಿಷ್‌ನ

ಇನ್ಷಿಯಲ್ ಬಂತು. 'ವೂಡೇ' ಹೋಗಿ 'ಡಬ್ಲ್ಯೂ' ಆಯಿತು. ನಮ್ಮ ಅಜ್ಜ ಡಬ್ಲ್ಯು. ಹೆಚ್. ಹನುಮಂತಪ್ಪ ಹಾಗೂ ನಮ್ಮ ತಂದೆ ಡಬ್ಲ್ಯೂ. ಹೆಚ್. ಪುಟ್ಟಯ್ಯ. ಅದೇ ರೀತಿ ನನ್ನ ಹೆಸರೂ ಸಹ ಡಬ್ಲ್ಯೂ. ಪಿ. ಕೃಷ್ಣ ಅಂತ ಆಯಿತು. 'ಏನಿದು ಡಬ್ಲ್ಯೂ? ಒಂಥರಾ ವಿಚಿತ್ರ ಇದೆಯಲ್ಲ?' ಅಂತ ಕೆಲವರು ಕೇಳುತ್ತಿದ್ದರು. ನನಗೂ ಸಹ ಆಗಾಗ ಒಂದು ವಿಷಯ ತಲೆಯನ್ನು ಕೊರೆಯುತ್ತಿತ್ತು. ವೂಡೇ ಅನ್ನುವುದು ಅಚ್ಚ ಕನ್ನಡ ಪದ. ಆ ಕನ್ನಡ ಪದ ಹೊರಟು ಹೋಗುತ್ತಲ್ಲಾ ಅಂತ ನನಗೆ ಬೇಸರವಾಗುತ್ತಿತ್ತು. ಜೊತೆಗೆ, ಆ ಗ್ರಾಮವೂ ನಶಿಸಿಹೋದ ಕಾರಣ ಮುಂದಿನ ದಿನಗಳಲ್ಲಿ ಆ ಹೆಸರೂ ನಶಿಸಿಹೋಗುತ್ತದೆ ಎನ್ನುವ ಆತಂಕವೂ ಉಂಟಾಯಿತು. ಆದ್ದರಿಂದಲೇ 'ವೂಡೇ' ಹೆಸರನ್ನು ನಾನು ನನ್ನ ಹೆಸರಿನಲ್ಲಿ ಉಳಿಸಿಕೊಂಡೆ.

ಕುತೂಹಲಕಾರಿ ವಿಷಯವೆಂದರೆ ನನ್ನ ಹೆಸರನ್ನು ಜನರು ಸರಿಯಾಗಿ ಉಚ್ಚಾರಣೆ ಮಾಡಲಿ ಎಂದು ಇವತ್ತಿನವರೆಗೂ ಹೋರಾಟ ಮಾಡುತ್ತಲೇ ಇದ್ದೇನೆ. ಆದರೂ ಪೂರ್ತಿ ಯಶಸ್ವಿಯಾಗಿಲ್ಲ. ಕೆಲವರು 'ವಾಡೆ' ಅನ್ನುತ್ತಾರೆ, ಕೆಲವರು 'ಉಂಡೆ', 'ಉಡ್ಡೀ', 'ಊಡೇ', 'ಉದಯ್', 'ಓಡೋ', 'ಒಡೆಯರ್', 'ಹೂಡಿ', 'ಉಡೈ', 'ವಡೆ' ಅನ್ನುತ್ತಾರೆ, ಕೆಲವರು 'ಉಡುಪಿ' ಅನ್ನುತ್ತಾರೆ. ಆದರೆ ನಾನು ಇವೆಲ್ಲವನ್ನೂ ತಮಾಷೆಯಾಗಿ ತೆಗೆದುಕೊಳ್ಳುತ್ತೇನೆ. ಏಕೆಂದರೆ ಹೆಸರು ಮುಖ್ಯವಲ್ಲ ಮನುಷ್ಯನಿಗೆ. ನಾವು ನಮ್ಮ ಕೆಲಸದಿಂದ ಗುರುತಿಸಿಕೊಳ್ಳಬೇಕೇ ಹೊರತು ಹೆಸರಿನಿಂದಲ್ಲ.

❑

2 ತಾವು ಚಿಕ್ಕವರಿದ್ದಾಗ ಒಮ್ಮೆ ಹಿರಿಯರಿಗೆ ಸಹಾಯಮಾಡಲು ಹೋದಾಗ ಒಂದು ಕುತೂಹಲಕಾರಿ ಘಟನೆ ನಡೆದಿತ್ತು ಅಂತ ಕೇಳಿದೆವು. ಅದರ ಬಗ್ಗೆ ಹೇಳಬಹುದಾ?

ಹೌದು, ಆ ಘಟನೆ ನಡೆದದ್ದು ನಾನು ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಒಂಬತ್ತನೇ ತರಗತಿ ಓದುತ್ತಿದ್ದಾಗ. ನಮ್ಮ ಶಾಲಾ ಸಮವಸ್ತ್ರ ಖಾಕಿ ಪ್ಯಾಂಟ್ ಮತ್ತು ನೀಲಿ ಅಂಗಿ. ಒಮ್ಮೆ ನಾವು ರೈಲಿನ ಮೂಲಕ ಬೆಂಗಳೂರಿಗೆ ಬರುವುದೆಂದು ಏರ್ಪಾಟಾಗಿತ್ತು. ಅದಕ್ಕಾಗಿ ಮೈಸೂರು ರೈಲ್ವೇ ಸ್ಟೇಶನ್‌ಗೆ ಬಂದೆವು. ಅಲ್ಲಿಗೆ ಅವಸರವಸರವಾಗಿ ಯಾರೋ ಇಬ್ಬರು ವಯಸ್ಸಾದ ದಂಪತಿ ಬಂದರು. ನಾನು ಫ್ಲಾಟ್‌ಫಾರ್ಮ್‌ನಲ್ಲಿದ್ದೆ. ಟ್ರೈನ್ ಬಂತು. ನಾನು ಖಾಕಿ ಪ್ಯಾಂಟ್ ಹಾಕಿದ್ದು

ನೋಡಿ ಪ್ರಾಯಶಃ ಪೋರ್ಟರ್ ಇರಬೇಕೆಂದು ಅವರು ತಿಳಿದುಕೊಂಡರು. 'ಬಾ, ಬ್ಯಾಗ್ ತೆಗೆದುಕೋ' ಎಂದು ನನ್ನ ಹತ್ತಿರ ಹೇಳಿದರು. ನಾನು ಅವರ ಬ್ಯಾಗ್‌ನ್ನು ತೆಗೆದುಕೊಂಡು ಅವರ ಬೋಗಿಯ ಸೀಟಿನಲ್ಲಿ ಇಟ್ಟೆ. ಅವರು ಕೂರೋವರೆಗೂ ನಾನು ಅಲ್ಲಿದ್ದು, ನಂತರ ಅಲ್ಲಿಂದ ಹೊರಟೆ. ಆಗ ಅವರು ಕೂಲಿ ರೂಪದಲ್ಲಿ ನನಗೆ ಹಣ ಕೊಡಲು ಬಂದರು. 'ನಾನು ಕೂಲಿಯಲ್ಲ. ರಾಮಕೃಷ್ಣ ಆಶ್ರಮದ ವಿದ್ಯಾರ್ಥಿ. ನಾನು ನಿಮ್ಮ ಜೊತೆಯಲ್ಲೇ ಬೆಂಗಳೂರಿಗೆ ಪ್ರಯಾಣ ಮಾಡ್ತಿದ್ದೀನಿ. ನಮ್ಮ ಯೂನಿಫಾರಂ ಇದು' ಎಂದು ನಾನು ಅವರಿಗೆ ಹೇಳಿದೆ. ಆಗ ಅವರು ಬಹಳ ಪಶ್ಚಾತ್ತಾಪ ಪಟ್ಟು, 'ಗೊತ್ತಾಗಲಿಲ್ಲ, ಎಂಥಾ ತಪ್ಪು ಮಾಡಿಬಿಟ್ಟೆ, ವಿದ್ಯಾರ್ಥಿನಾ ನೀವು? ನಾನು ಪೋರ್ಟರ್ ಎಂದು ತಿಳಿದು ಕರೆದು ಬಿಟ್ಟೆ' ಎಂದರು!

❑



3 ಅಂದರೆ ಜನರಿಗೆ ಸಹಾಯ ಮಾಡುವ ಆದರ್ಶದ ಗುಣ ತವುಗೆ ಬಹಳ ಚಿಕ್ಕಂದಿನಿಂದಲೇ ಬಂದಿತ್ತು ಎಂದಾಯಿತು. ಚಿಕ್ಕವನಿರುವಾಗಲೇ ಈ ಆದರ್ಶ ಬೆಳೆಯಲು ಏನು ಕಾರಣ ?

ಇದಕ್ಕೆ ಮುಖ್ಯ ಕಾರಣ ನಾನು ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಓದಿದ್ದು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ನನ್ನ ಇಡೀ ಜೀವನ ಬದಲಾಗಿದ್ದೇ ನಾನು ರಾಮಕೃಷ್ಣ ಆಶ್ರಮ ಸೇರಿದ ಮೇಲೆ. ಯಾವ ಪುಣ್ಯವೋ ಗೊತ್ತಿಲ್ಲ, ಶ್ರೀ ರಾಮಕೃಷ್ಣರ, ಶ್ರೀಮಾತೆ ಶಾರದಾ ದೇವಿಯವರ, ಸ್ವಾಮಿ ವಿವೇಕಾನಂದರ ಬದುಕು ಚಿಂತನೆ ಇದರೊಳಗೆ ನಾವು ಬೆಳೆಯುವಂತಹ ಒಂದು ಅವಕಾಶ ನಮಗೆ ದೊರೆಯಿತು. ನಾನು ಪ್ರೌಢ ಶಾಲೆಗೆ ಅಲ್ಲಿಗೆ ಹೋದೆ.

ನಾನು ಅಲ್ಲಿಗೆ ಹೋದ ಸಂದರ್ಭದಲ್ಲಿ ಸ್ವಾಮಿ ಸುರೇಶಾನಂದರು ಅಲ್ಲಿದ್ದರು. ಅವರು ಬಹಳ ದೊಡ್ಡ ಸಂತರು. ಹಾಗೆಯೇ ಸ್ವಾಮಿ ಜಗದಾತ್ಮಾನಂದರು ಅಲ್ಲಿದ್ದರು. ಅವರು ನಮ್ಮ ವಾರ್ಡನ್ ಆಗಿದ್ದರು. ಅವರು ಬರೆದಿರುವ 'ಬದುಕಲು ಕಲಿಯಿರಿ' ಪುಸ್ತಕದ ಬಗ್ಗೆ ತಾವೆಲ್ಲ ಕೇಳಿರಬಹುದು. ಬಹಳ ಹೆಸರುವಾಸಿಯಾದ ಪುಸ್ತಕವದು. ನಾವು ವಿದ್ಯಾರ್ಥಿಯಾಗಿದ್ದ ಸಮಯದಲ್ಲಿ ಅವರು ಆ ಪುಸ್ತಕವನ್ನು ಬರೆಯುತ್ತಿದ್ದರು. ಅದರ ಹಸ್ತಪ್ರತಿಯನ್ನು ನಾವೆಲ್ಲ ನೋಡಿದ್ದೀವಿ. ಅವರು ತನ್ಮಯತೆಯಿಂದ ಬರೆಯುವುದನ್ನು, ಪುಸ್ತಕದ ಬಗ್ಗೆ ಇತರರ ಹತ್ತಿರ ಚರ್ಚಿಸುವುದನ್ನು, ಆಕರ ಗ್ರಂಥಗಳನ್ನು ಓದುವುದನ್ನು ನಾವು ಕಣ್ಣಾರೆ ನೋಡಿದ್ದೆವು. ಅವರ ಜೊತೆಯಲ್ಲಿದ್ದು, ಅವರ ಸಹವಾಸದಲ್ಲಿ ಕಲಿಯುವಂತಹದ್ದಿದೆಯಲ್ಲ ಅದು ಯಾವ ಪುಸ್ತಕದಿಂದಲೂ ಬರಲು ಸಾಧ್ಯವಿಲ್ಲ. ಯಾವ ವಿಶ್ವವಿದ್ಯಾನಿಲಯದಿಂದಲೂ ಬರಲು ಸಾಧ್ಯವಿಲ್ಲ. ಹಾಗಾಗಿ ಸಾಧುಸಂತರ ಸಹವಾಸವೇ ನಮ್ಮಲ್ಲಿ ವಿಶೇಷ ಬದಲಾವಣೆಗೆ ಕಾರಣವಾಯಿತು ಎನ್ನಬಹುದು.

❑

4 ಹಾಗಾದರೆ ನಿಮ್ಮ ಇಂದಿನ ಶಿಸ್ತುಬದ್ಧ ಜೀವನಕ್ಕೆ ರಾಮಕೃಷ್ಣ ಆಶ್ರಮವೇ ಕಾರಣ ಎನ್ನಬಹುದು.

ಖಂಡಿತವಾಗಿ. ರಾಮಕೃಷ್ಣ ಆಶ್ರಮದಲ್ಲಿ ನಮ್ಮ ದಿನನಿತ್ಯದ ಚಟುವಟಿಕೆಗಳನ್ನು ಯಾವ ರೀತಿ ರೂಪಿಸಿದ್ದರು ಎಂದರೆ, ದಿನದ ಒಂದು ಕ್ಷಣ ಕೂಡ ಹಾಳಾಗುತ್ತಿರಲಿಲ್ಲ. ಅಷ್ಟು ಚೆನ್ನಾಗಿ ನಮ್ಮ ದಿನಚರಿಯನ್ನು ವಿನ್ಯಾಸ ಮಾಡಲಾಗಿತ್ತು. ಬೆಳಿಗ್ಗೆ ಐದು ಗಂಟೆರೀ ಹದಿನೈದು ನಿಮಿಷಕ್ಕೆ ಏಳುವಾಗಿನಿಂದ ಹಿಡಿದು, ರಾತ್ರಿ ಮಲಗುವವರೆಗಿನ ಚಟುವಟಿಕೆಗಳನ್ನು ಶಿಸ್ತುಬದ್ಧವಾಗಿ, ಕ್ರಮಬದ್ಧವಾಗಿ ರೂಪಿಸಿದ್ದರು. ಅದನ್ನು ನಾವೆಲ್ಲರೂ ಪಾಲಿಸಲೇಬೇಕಿತ್ತು. ಅದು ನಮ್ಮ ಬದುಕನ್ನು ರೂಪಿಸಿತು ಅಂತ ನಾನು ಅಂದುಕೊಳ್ಳುತ್ತೇನೆ. ಆ ಶಿಸ್ತಿನ ಹಿಂದೆ ಒಂದು ದೊಡ್ಡ ಧ್ಯೇಯವಿತ್ತು. ನಿರಂತರ ಚಟುವಟಿಕೆಯಲ್ಲಿ ತೊಡಗಿರಬೇಕು ಎನ್ನುವ ಪ್ರಾಥಮಿಕ ಶಿಕ್ಷಣ ನಮಗೆ ದೊರಕಿದ್ದೇ ರಾಮಕೃಷ್ಣ ಆಶ್ರಮದಿಂದ. □

5 ನಿಮ್ಮ ತಾತನವರು ನಿಮ್ಮ ಮೇಲೆ ಗಾಢವಾದ ಪ್ರಭಾವವನ್ನು ಬೀರಿದರು ಎಂದು ಕೆಲವರು ಹೇಳುತ್ತಾರೆ. ನಿಮ್ಮ ತಾತನವರ ಬಗ್ಗೆ ಹಾಗೂ ಅವರು ನಿಮ್ಮ ಮೇಲೆ ಬೀರಿದ ಪ್ರಭಾವದ ಬಗ್ಗೆ ದಯವಿಟ್ಟು ಹೇಳುತ್ತೀರಾ?

ಹೌದು, ನಮ್ಮ ತಾತನವರು ನನ್ನ ಮೇಲೆ ಪ್ರಬಲವಾದ ಪ್ರಭಾವವನ್ನು ಬೀರಿದ್ದಾರೆ. ನಮ್ಮ ತಾತನವರು ಬೆಂಗಳೂರಿನ ಮೇಯರ್ ಆಗಿದ್ದರು. ಮೈಸೂರು ಪ್ರಜಾಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ಸ್ವಾತಂತ್ರ ಪೂರ್ವದಲ್ಲಿ ಅಂದರೆ 30–40ರ ದಶಕದಲ್ಲಿ ಅವರೆಲ್ಲ ಬೆಂಗಳೂರಿನ ಬಹಳ ದೊಡ್ಡ ನಾಯಕರು. ನಮ್ಮ ತಾತನವರು ಗಾಂಧಿಯವರ ಚಿಂತನೆಯನ್ನು ಒಪ್ಪಿಕೊಂಡು ಪಾಲಿಸಿದವರು. 1943ರಲ್ಲೇ ಅವರು 'ಠಕ್ಕರ್ ಬಾಪಾ ಹರಿಜನ್ ಗರ್ಲ್ಸ್ ಹಾಸ್ಟೆಲ'ನ್ನು ಬೆಂಗಳೂರಿನಲ್ಲಿ ಪ್ರಾರಂಭ ಮಾಡಿದ್ದರು. ನಂತರ ಗಾಂಧೀಜೀ ಕೊಟ್ಟಂತಹ ರಚನಾತ್ಮಕ ಕಾರ್ಯಕ್ರಮಗಳ

ಅನ್ವಯ ಅವರು ವಯಸ್ಕರ ಶಿಕ್ಷಣ ಪ್ರಾರಂಭಿಸುತ್ತಾರೆ. ಮೈಸೂರ್ ಸ್ಟೇಟ್ ಅಡಲ್ಟ್ ಎಜ್ಯುಕೇಶನ್ ಕೌನ್ಸಿಲ್ ಸ್ಥಾಪನೆ ಮಾಡುತ್ತಾರೆ. ಅದರ ಮೂಲಕ ವಯಸ್ಕರ ಶಿಕ್ಷಣವನ್ನು ಬೆಳೆಸುವ ಕೆಲಸ ಮಾಡುತ್ತಾರೆ. ಅವರಿಗೆ ಗಾಂಧಿ ವಿಚಾರದಲ್ಲಿ, ಗಾಂಧಿ ತತ್ವದಲ್ಲಿ ಬದ್ಧತೆ ಹೆಚ್ಚಿತ್ತು. ಅವರ ಜೀವನ, ಉಡುಪು, ಆಹಾರ ಎಲ್ಲವೂ ಸರಳವಾಗಿತ್ತು. ಅವರು ದೀರ್ಘಾಯುಷಿಗಳಾಗಿದ್ದರು. 92 ವರ್ಷಗಳ ಕಾಲ ಬದುಕಿದ್ದರು. ಅಷ್ಟೇ ಅಲ್ಲ, ನಮ್ಮ ಅಜ್ಜಿಯವರು, ತಾಯಿಯವರು, ಚಿಕ್ಕಮ್ಮ, ದೊಡ್ಡಮ್ಮ ಎಲ್ಲರೂ ಕೂಡ ಸರಳ ಜೀವನವನ್ನು ನಡೆಸಿಕೊಂಡು ಬಂದವರು. ಯಾವುದಕ್ಕೂ ಸೋತು ಹೋಗದೆ, ನಮಗೆ ಇದು ಬೇಕು, ಅದು ಬೇಕು ಎನ್ನುತ್ತ ಕಂಫರ್ಟ್ಸ್, ಲಕ್ಸುರಿ ಹುಡುಕಿಕೊಂಡು ಹೋಗದೆ, ಸಮಾಜಕ್ಕೆ ಒಳ್ಳೆಯದು ಮಾಡುತ್ತ ಬದುಕುವುದಿದೆಯಲ್ಲ, ಅದನ್ನು ಇಂದಿನ ಕಾಲಘಟ್ಟದಲ್ಲಿ ನೋಡಿದರೆ ಆಶ್ಚರ್ಯ ಅನ್ನಿಸುತ್ತೆ. ಇವತ್ತು ಕೊಳ್ಳುಬಾಕುತನ ಒಂದು ದೊಡ್ಡ ರೋಗವಾಗಿದೆ. ಎಲ್ಲರೂ ನನಗೆ ಅದು ಬೇಕು, ಇದು ಬೇಕು ಅಂತ ಅನ್ನುವವರೇ. ಆದರೆ ನನಗೆ ಏನೂ ಬೇಡ, ಇರೋದರಲ್ಲೇ ಸಂತೋಷವಾಗಿ ಇರೋಣ ಅನ್ನೋದು ಇದೆಯಲ್ಲ ಅದೇ ನಮಗೆಲ್ಲ ಒಂದು ದೊಡ್ಡ ಜೀವನದ ಪಾಠ.

ಈ ಅಂಶಗಳೆಲ್ಲ ನನಗೆ ಪ್ರೇರಣೆಯಾಯಿತು. ನಾನೂ ಕೂಡ ಚಿಕ್ಕವಯಸ್ಸಿನಿಂದಲೇ ಯಾವತ್ತೂ ಕೂಡ ದುಂದು ವೆಚ್ಚ ಮಾಡಿಲ್ಲ. ಇವತ್ತಿನವರೆಗೆ ಕೂಡ ಒಂದು ರೂಪಾಯಿ ಕೂಡ ಸಾಲ ಮಾಡಿಲ್ಲ, ಒಬ್ಬರಿಗೆ ಒಂದು ರೂಪಾಯಿ ಕೂಡ ಸಾಲ ಕೊಟ್ಟಿಲ್ಲ. ಸ್ವಚ್ಛವಾಗಿ ನಾನು ಹಣಕಾಸಿನ ವ್ಯವಹಾರ ನಡೆಸಿಕೊಂಡು ಹೋಗುತ್ತಿದ್ದೇನೆ. ನನ್ನ ಅನಿಸಿಕೆಯ ಪ್ರಕಾರ ನಮ್ಮ ಜೀವನದಲ್ಲಿ ನಮ್ಮ ಕೌಟುಂಬಿಕ ಹಿನ್ನೆಲೆ ಬಹಳ ಮುಖ್ಯ ಪಾತ್ರ ವಹಿಸುತ್ತದೆ. ನಮ್ಮ ಚಿಂತನೆಗಳನ್ನು, ನಮ್ಮ ಆಲೋಚನೆಗಳನ್ನು, ನಮ್ಮ ಕೆಲಸ ಕಾರ್ಯಗಳನ್ನು ರೂಪಿಸುವಲ್ಲಿ ನಮ್ಮ ಕೌಟುಂಬಿಕ ಹಿನ್ನೆಲೆ ಬಹಳ ಮಹತ್ತರವಾದದ್ದು. ❑

6 ನಿಮ್ಮ ಜೀವನದ ಟರ್ನಿಂಗ್ ಪಾಯಿಂಟ್ ಅಥವಾ ಪ್ರಮುಖ ಘಟ್ಟ ಅಂತ ಯಾವುದನ್ನು ನೀವು ಭಾವಿಸುತ್ತೀರಿ?

1983ರಲ್ಲಿ ನಾನು ಬಿ.ಇ. ಮೂರನೇ ವರ್ಷದಲ್ಲಿ ಓದುತ್ತಿರುವಾಗ ನಮಗೆ ಎರಡು ತಿಂಗಳು ರಜಾ ಬಂತು. ಆ ರಜೆಯಲ್ಲಿ ನಾನು ಮಲ್ಲೇಶ್ವರಂ ಸಾರ್ವಜನಿಕ ಗ್ರಂಥಾಲಯಕ್ಕೆ ಹೋಗಿ ಓದಲು ಪ್ರಾರಂಭಿಸಿದೆ. ಪ್ರತಿ ದಿನವೂ ಬೆಳಿಗ್ಗೆ 8.30ರಿಂದ ಸಂಜೆ 6 ಗಂಟೆಯವರೆಗೆ ಕುಳಿತು ಓದುತ್ತಿದ್ದೆ. ಅದೊಂದು ಹಳೆಯ ಕಟ್ಟಡ. ಅದರ ಮೊದಲನೇ ಮಹಡಿಯಲ್ಲಿ ಕುಳಿತು ನಾನು ಓದುತ್ತಿದ್ದೆ. ಅಲ್ಲಿಗೆ ಯಾರೂ ಬರುತ್ತಿರಲಿಲ್ಲ. ಪ್ರಶಾಂತವಾದ ವಾತಾವರಣ ಇತ್ತು. ನಾನು ಕೇಳಿದ ಪುಸ್ತಕಗಳೆಲ್ಲವನ್ನೂ ಗ್ರಂಥಪಾಲಕರು ಒದಗಿಸುತ್ತಿದ್ದರು. ನಾನು ಓದುತ್ತಾ ಹೋದೆ. ಕೆಲವು ಅತ್ಯಂತ ಪ್ರಮುಖ ಗ್ರಂಥಗಳನ್ನು

ಓದುವ ಅವಕಾಶ ಅಲ್ಲಿ ನನಗೆ ಸಿಕ್ಕಿತು. ಅದರಲ್ಲಿ ಪ್ರಮುಖವಾದದ್ದು 'The Complete works of Swami Vivekananda' ಮತ್ತು 'The 100 Collected Works of Mahatma Gandhi'. ಮಹಾತ್ಮಾ ಗಾಂಧೀಯವರ ಸಮಗ್ರ ಜೀವನ ಚರಿತ್ರೆಯನ್ನು ಭಾರತ ಸರ್ಕಾರದವರು 100 ಸಂಪುಟಗಳಲ್ಲಿ ಹೊರತಂದಿದ್ದರು. ಅಷ್ಟೂ ಪುಸ್ತಕಗಳನ್ನು ಓದುವ ಅವಕಾಶ ನನ್ನದಾಯಿತು. ಅದೇ ಅವಧಿಯಲ್ಲಿ ಭಾರತ ಸರ್ಕಾರವೇ ಪ್ರಕಟ ಮಾಡಿದ 18 ಮಾಲಿಕೆಗಳ ಗ್ರಂಥ 'The History of Indian Freedom Struggle' ಸಹ ನಾನು ಓದಿದೆ. ಜೊತೆಗೆ ಮೀಸಲಾತಿಯ ಬಗೆಗಿನ 'ಹಾವನೂರು ಹಿಂದುಳಿದ ವರ್ಗಗಳ ಆಯೋಗದ ವರದಿ' ಸಹ ಓದಿದೆ. ನಮ್ಮ ಭಾರತದ ಸಂವಿಧಾನದ ರಚನಾ ಸಂದರ್ಭದಲ್ಲಿ ನಡೆದ ಸಭೆಯ ಎಲ್ಲಾ ಚರ್ಚೆಗಳನ್ನು ದಾಖಲು ಮಾಡಿದ ಪುಸ್ತಕ, 'The Constitutional Debates' ಸಹ ನಾನು ಓದಿದೆ.

ಇವಷ್ಟನ್ನೂ ಓದುವ ಅವಕಾಶ ನನಗೆ ಆ ಎರಡು ತಿಂಗಳಲ್ಲಿ ಸಿಕ್ಕಿತು. ಈ ಓದು ನನ್ನನ್ನು ಸಮಾಜಮುಖಿಯಾಗಿ ಆಲೋಚಿಸುವಂತೆ ಮಾಡಿತು. ಒಂದು ಕಡೆ ವಿವೇಕಾನಂದರ ದೇಶಪ್ರೇಮ, ಇನ್ನೊಂದು ಕಡೆ ಗಾಂಧೀಜಿಯವರ ರಾಜನೀತಿಯ ಹೋರಾಟಗಳು, ಅದ್ಭುತ ದೇಶ ಕಟ್ಟಬೇಕೆನ್ನುವ ಪರಿಕಲ್ಪನೆ, ಜೊತೆ ಜೊತೆಗೆ ನಮ್ಮ ಸಂವಿಧಾನದ ರಚನೆಕಾರರು, ಅವರು ಈ ದೇಶದ ಬಗ್ಗೆ ಕಂಡಂತಹ ಕನಸು, ಉತ್ತಮ ಸಮಾಜ ನಿರ್ಮಾಣ ಮಾಡಬೇಕೆನ್ನುವ ದೂರದೃಷ್ಟಿ, ಇವೆಲ್ಲ ನನ್ನನ್ನು ಬಹಳ ಚಿಂತೆಗೀಡುಮಾಡಿತು. ಇನ್ನೊಂದು ಕಡೆ ಹಾವನೂರು ಆಯೋಗದ ವರದಿ, ಸಾಮಾಜಿಕ ನ್ಯಾಯದ ಬಗ್ಗೆ ಒಂದು ಹೊಸ ಪ್ರಜ್ಞೆ, ಒಂದು ಹೊಸ ದೃಷ್ಟಿಕೋನ. ಇವೆಲ್ಲವುಗಳ ನೇರ

ಪರಿಚಯವಾಗುವಂತಹ ಒಂದು ಅವಕಾಶ ನನಗೆ ಚಿಕ್ಕ ವಯಸ್ಸಿನಲ್ಲಿಯೇ ಸಿಕ್ಕಿತು. ಆ ಎರಡು ತಿಂಗಳ ಅಧ್ಯಯನದ ಕಾಲ ನನ್ನ ಜೀವನದ ಒಂದು ಮುಖ್ಯವಾದ ಘಟ್ಟ ಎಂದು ನಾನು ಭಾವಿಸುತ್ತೇನೆ. ಅದು ನನ್ನ ಬದುಕು ಮತ್ತು ಆಲೋಚನೆಗಳನ್ನೂ ಸಹ ಸಂಪೂರ್ಣವಾಗಿ ಬದಲಾಯಿಸಿತ್ತು. ಮುಂದೆ ಬರುವಂತಹ ಯುವ ಪೀಳಿಗೆ ಗಾಂಧಿಯನ್ನ, ವಿವೇಕಾನಂದರನ್ನು ಮರೆತರೆ ಈ ದೇಶಕ್ಕೆ ಭವಿಷ್ಯವೇ ಇಲ್ಲ ಎಂದರಿತ ನಾನು ಯುವಕರಲ್ಲಿ ಗಾಂಧಿ ವಿಚಾರ, ಸ್ವಾಮಿ ವಿವೇಕಾನಂದರ ವಿಚಾರಗಳನ್ನು ಬೆಳೆಸಬೇಕು ಎಂದು ನಿರಂತರವಾದ ಪ್ರಯತ್ನ ಮಾಡುವುದಕ್ಕೆ ಸಹಾಯವಾಯಿತು.

❑

7 ತಾವು ಇಂಜಿನಿಯರಿಂಗ್ ಪದವೀಧರರು. ಕುತೂಹಲಕಾರಿ ವಿಷಯ ಎಂದರೆ ತಾಂತ್ರಿಕ ಶಿಕ್ಷಣದ ಜೊತೆ ಕಾನೂನನ್ನು ಸಹ ಅಭ್ಯಾಸ ಮಾಡಿದ್ದೀರ? ಈ ಒಂದು ಸಮ್ಮಿಲನ ತುಂಬಾ ಕುತೂಹಲಕಾರಿ ಆಗಿದೆಯಲ್ಲ...

ನಾನು ಕಾನೂನನ್ನು ಓದಲು ಸಹ ಪ್ರೇರಣೆಯಾದದ್ದು ಮಲ್ಲೇಶ್ವರಂ ಲೈಬ್ರರಿಯಲ್ಲಿನ ಆ ನನ್ನ ಓದು. ಏಕೆಂದರೆ ಕಾನೂನನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದಿದ್ದರೆ ನಾವು ಮುಂದಿನ ಕೆಲಸ ಕಾರ್ಯಗಳನ್ನು ಚೆನ್ನಾಗಿ ಮಾಡಲು ಆಗೋದಿಲ್ಲ ಎನ್ನುವ ಭಾವನೆ ನನಗೆ ಬಂತು. ಆದ್ದರಿಂದ ಇಂಜಿನಿಯರಿಂಗ್ ಮುಗಿದ ಮೇಲೆ ಸಂಜೆ ಕಾಲೇಜಿನಲ್ಲಿ ಲಾ ಮಾಡಿದೆ. ಆ ನಂತರ ಎಂ.ಎಲ್.

ಕೂಡ ಪಾಸ್ ಮಾಡಿದೆ. ಇವತ್ತು ನನಗೆ ಅದು ಬಹಳ ಸಹಕಾರಿ ಕೂಡ ಆಗಿದೆ. ಇವತ್ತು ನಾನು ಟೆಕ್ನೋ ಲೀಗಲ್ ವರ್ಕ್ ಮಾಡೋದಿಕ್ಕೆ ಇದೇ ಕಾರಣ. ಕಾನೂನಿನ ಜ್ಞಾನ ಹಾಗೂ ಇಂಜಿನಿಯರಿಂಗ್ ಜ್ಞಾನ, ಇವೆರಡೂ ಸೇರಿಕೊಂಡು ನನ್ನ ವೃತ್ತಿಯಲ್ಲೂ ನಾನು ಬೆಳೆಯಲು ಸಾಧ್ಯವಾಗಿದೆ. ಇಲ್ಲಿ ಮುಖ್ಯವಾಗಿ ನಾನು ಹೇಳೋದು ಏನೆಂದರೆ, ಒಳ್ಳೆಯ ಜನರ ಸಹವಾಸ, ಒಳ್ಳೆಯ ಸಂಘಟನೆಗಳ ಸಂಪರ್ಕ ಇದು ಜೀವನದಲ್ಲಿ ಬಹಳ ಮುಖ್ಯವಾಗುತ್ತದೆ. ಸಾಮಾಜಿಕ ಕೆಲಸ ಮಾಡುವುದು ಅಂದರೆ ನಮ್ಮ ಒಬ್ಬರಿಂದಲೇ ಏನೂ ಆಗೋದಿಲ್ಲ. ತಂಡವಾಗಿ ಕೆಲಸ ಮಾಡುವುದು ಅತ್ಯವಶ್ಯ. ಹತ್ತಾರು ಜನ ಕೈಜೋಡಿಸಿ ಮಾಡಬೇಕು. ಸಾವಿರಾರು ಜನರ ಆಲೋಚನೆಗಳಿಗೆ ನೀವು ನಿಮ್ಮ ಮನಸ್ಸಿನಲ್ಲಿ ಸ್ಥಳಾವಕಾಶ ಕೊಟ್ಟರೆ ಮಾತ್ರ ಸಾರ್ವಜನಿಕ ಕೆಲಸ ಮಾಡಲು ಸಾಧ್ಯ ಎನ್ನುವ ಮಾತನ್ನು ವಿವೇಕಾನಂದರು ಹೇಳುತ್ತಾರೆ. ಸಾಮಾಜಿಕ ಕೆಲಸ ಮಾಡೋದು ಅಷ್ಟು ಸುಲಭದ ಕೆಲಸವಲ್ಲ. ಎಷ್ಟೊಂದು ಮನಸ್ಸುಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಕೆಲಸಗಳನ್ನು ಮಾಡಬೇಕು.

❑

ಗಾಂಧಿ-ಅಂಬೇಡ್ಕರ್
ವಿವೇಕಾನಂದ

8 ತಾವು ನಿಭಾಯಿಸುತ್ತಿರುವ ಇನ್ನೊಂದು ಮಹತ್ವದ ಜವಾಬ್ದಾರಿ ಎಂದರೆ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ಸ್ಥಾನ. ಗಾಂಧಿಯವರ ಚಿಂತನೆಗಳ ಪ್ರಚಾರಕ್ಕೆ ಗಾಂಧಿ ಭವನದ ಕಾರ್ಯ ಯಾವ ರೀತಿಯಲ್ಲಿ ಸಹಕಾರಿಯಾಗಿದೆ?

ಕರ್ನಾಟಕ ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷನಾಗಿರುವುದು ನನಗೆ ದೊರೆತ ಅತ್ಯಂತ ದೊಡ್ಡ ಗೌರವ ಎಂದು ನಾನು ಭಾವಿಸುತ್ತೇನೆ. ಏಕೆಂದರೆ ಬಾಲ್ಯದಿಂದಲೇ ಗಾಂಧಿಯವರ ಚಿಂತನೆಗಳಿಂದ ಪ್ರಭಾವಿತನಾದ ನನಗೆ ಮುಂದೊಂದು ದಿನ ಅದೇ ಕ್ಷೇತ್ರದಲ್ಲಿ ಇಂತಹದೊಂದು ಮಹತ್ವದ ಜವಾಬ್ದಾರಿ ದೊರಕುತ್ತದೆ ಎಂದು ಕನಸು ಮನಸಿನಲ್ಲೂ ಎಣಿಸಿರಲಿಲ್ಲ. ಆದ್ದರಿಂದ ಇದು ನನ್ನ ಸುದೈವ ಎಂದು ಭಾವಿಸುತ್ತೇನೆ.

ನಾವು ಗಾಂಧಿ ಭವನದ ಮೂಲಕ ಗಾಂಧಿಯವರನ್ನು ನೆನಪಿಸಿಕೊಳ್ಳುವ ಕೆಲಸ ಮಾಡುತ್ತಿದ್ದೇವೆ. ಅವರ ವಿಚಾರಗಳನ್ನು ನಮ್ಮ ಮಕ್ಕಳಿಗೆ ಮುಟ್ಟಿಸುವಂತಹ ಕೆಲಸ ಮಾಡುತ್ತಿದ್ದೇವೆ. ಪ್ರಕಟಣೆಗಳು, ಮಕ್ಕಳಿಗೆ ಶಿಬಿರವನ್ನು ಆಯೋಜಿಸುವುದು, ಗಾಂಧಿಯವರಿಗೆ ಸಂಬಂಧಪಟ್ಟ ಸಿನಿಮಾವನ್ನ ತೋರಿಸುವುದು, ಗಾಂಧಿ ವಿಚಾರಗಳ ಬಗ್ಗೆ ಪರೀಕ್ಷೆಗಳನ್ನು ನಡೆಸುವುದು– ಹೀಗೆ ಹಲವಾರು ಕಾರ್ಯಕ್ರಮಗಳ ಮೂಲಕ ಯುವ ಮನಸ್ಸನ್ನು ಕಟ್ಟುವ, ಯುವ ಮನಸ್ಸನ್ನು ಮುಟ್ಟುವ ಕೆಲಸವನ್ನು ನಾವು ನಿರಂತರವಾಗಿ ಮಾಡುತ್ತಾ ಬಂದಿದ್ದೇವೆ. ಜೊತೆಗೆ ನಮ್ಮ ಚೆನ್ನಮ್ಮ ಹಳ್ಳಿಕೇರಿಯವರು ಉತ್ತರ ಕರ್ನಾಟಕದಲ್ಲೆಲ್ಲ ಗಾಂಧಿ ವಿಚಾರವನ್ನು ಪ್ರಚಾರ ಮಾಡಿದ್ದಾರೆ. ಆ ವಯಸ್ಸಿನಲ್ಲಿಯೂ ಅವರು ಶಾಲಾ ಮಕ್ಕಳನ್ನು ಉದ್ದೇಶಿಸಿ, ಕಾಲೇಜು ಮಕ್ಕಳನ್ನು ಉದ್ದೇಶಿಸಿ ವಿಸ್ತೃತವಾಗಿ ಗಾಂಧಿ ವಿಚಾರವನ್ನು ಪ್ರಚಾರ ಮಾಡುತ್ತಿದ್ದಾರೆ. ಇದರಿಂದ ಕರ್ನಾಟಕ ಗಾಂಧಿ ಸ್ಮಾರಕ ನಿಧಿಗೆ ಸಮಾಧಾನವಿದೆ. ನಮಗೆ ಕೊಟ್ಟಂತಹ ಸಮಯದಲ್ಲಿ ನಮಗೆ ಇರುವ ಸಂಪನ್ಮೂಲದಲ್ಲಿ ನಾವು ಸಾಕಷ್ಟು ಗಾಂಧಿ ವಿಚಾರವನ್ನು ಮುಟ್ಟಿಸುವ, ಯುವಕರನ್ನು ಮುಟ್ಟುವ ಪ್ರಯತ್ನವನ್ನು ಮಾಡಿದ್ದೇವೆ. ಯುವಕರಿಗೆ ಗಾಂಧಿ ವಿಚಾರ ಬೇಕು ಎನ್ನುವ ಹಂಬಲ ಇದೆ, ಕೊಡುವುದಕ್ಕೆ ನಾವು ಮುಂದಾಗಬೇಕು ಅಷ್ಟೇ.

19ನೇ ಶತಮಾನದ ಏಷಿಯಾದ ಅತ್ಯದ್ಭುತ ವ್ಯಕ್ತಿ ಎಂದು ಗುರುತಿಸಲಾಗಿದೆ. ಆದರೆ ಗಾಂಧಿ ಯಾಕೋ ನಮ್ಮ ಸಾರ್ವಜನಿಕ ಜೀವನದಲ್ಲಿ ಅಷ್ಟು ಪ್ರಭಾವ ಬೀರಲಿಲ್ಲವಲ್ಲ ಎನ್ನುವ ದುಃಖ ನನಗಿದೆ. ಈ ಮೌಲ್ಯಗಳನ್ನು ನಾವು ಯುವಕರಿಗೆ ಹೆಚ್ಚೆಚ್ಚು ಮುಟ್ಟಿಸುವಂತಹ ಕೆಲಸ ಮಾಡಬೇಕು. ಇವತ್ತು ಗಾಂಧಿ ಭವನ ಅದೇ ಕೆಲಸ ಮಾಡ್ತಾ ಇದೆ.

❑

9 ಸಾಮಾನ್ಯವಾಗಿ ಗಾಂಧಿಯವರನ್ನು ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಅರ್ಥೈಸಿಕೊಳ್ಳುತ್ತಾರೆ. ನಿಮ್ಮ ದೃಷ್ಟಿಕೋನದ ಪ್ರಕಾರ ಗಾಂಧಿ ಅಂದರೆ ಯಾರು ?

ನನ್ನ ಪ್ರಕಾರ ಗಾಂಧಿ ಒಬ್ಬ ವ್ಯಕ್ತಿಯಲ್ಲ. ವ್ಯಕ್ತಿಗೂ ಮೀರಿದ ಶಕ್ತಿ ಅವರು. ಗಾಂಧಿ ಎನ್ನುವುದು ನಮ್ಮ ಭಾರತದಲ್ಲಿ ಸಂಭವಿಸಿದ ಒಂದು ಅದ್ಭುತ ಘಟನೆ. ಮಹಾತ್ಮಾ ಗಾಂಧೀಜಿಯವರು 1915ರಲ್ಲಿ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಹಿಂದಿರುಗುತ್ತಾರೆ. ದೇಶಕ್ಕೆ ಸ್ವಾತಂತ್ರ್ಯ ಕೊಡಿಸಬೇಕು ಅಂತ ಅವರು ಭಾರತಕ್ಕೆ ಹಿಂತಿರುಗಲಿಲ್ಲ. ನಾನು ನನ್ನ ತಾಯಿನಾಡಿಗೆ ಏನಾದರೂ ಸೇವೆ ಮಾಡಬೇಕು ಎಂದು ಅವರು ಹಿಂತಿರುಗಿ ಬರುತ್ತಾರೆ. ಬಂದ ತಕ್ಷಣ ಅವರು ತಮ್ಮ ರಾಜಕೀಯ ಗುರುಗಳಾದ ಗೋಪಾಲಕೃಷ್ಣ ಗೋಖಲೆಯವರನ್ನು ಭೇಟಿ ಮಾಡುತ್ತಾರೆ.

'ನಾನು ನನ್ನ ಮಾತೃದೇಶಕ್ಕೆ ಹಿಂತಿರುಗುತ್ತಿದ್ದೇನೆ. ದೇಶಕ್ಕಾಗಿ ನಾನು ಸೇವೆ ಮಾಡಬೇಕು ಅಂದುಕೊಂಡಿದ್ದೇನೆ. ನಾನು ಏನು ಮಾಡಬೇಕೆಂದು ಮಾರ್ಗದರ್ಶನ ನೀಡಿ' ಎಂದು ಗೋಪಾಲಕೃಷ್ಣ ಗೋಖಲೆಯವರ ಹತ್ತಿರ ಗಾಂಧಿಯವರು ಕೇಳಿಕೊಳ್ಳುತ್ತಾರೆ. ಆಗ ಗೋಪಾಲಕೃಷ್ಣ ಗೋಖಲೆಯವರು 'ನೀವು ದೇಶದ ಸೇವೆ ಮಾಡಬೇಕೆಂದರೆ ಮೊದಲು ದೇಶವನ್ನು ಅರ್ಥ ಮಾಡಿಕೊಳ್ಳಿ. ಭಾರತವನ್ನು ಅರಿತುಕೊಳ್ಳಿ. ಜನರ ಬಳಿಗೆ ಹೋಗಿ, ಅವರೊಂದಿಗೆ ಬದುಕಿ, ಅವರಿಂದ ಕಲಿತುಕೊಳ್ಳಿ, ಆನಂತರ ಅವರ ಸೇವೆ ಮಾಡಿ' ಎನ್ನುವ ಮಾತನ್ನು ಹೇಳುತ್ತಾರೆ. ಗಾಂಧಿಯವರು ಈ ಮಾತನ್ನು ದೀಕ್ಷಾ ರೂಪದಲ್ಲಿ ಪಡೆದುಕೊಂಡು, ಒಂದು ವರ್ಷಗಳ ಕಾಲ ಅಖಂಡ ಭಾರತ ಪ್ರವಾಸ ಕೈಗೊಳ್ಳುತ್ತಾರೆ. 'ನೀವು ಒಂದು ವರ್ಷ ಏನು ಪ್ರವಾಸ ಮಾಡುತ್ತೀರೋ, ಆ ಸಮಯ ನೀವು ಯಾರ ಹತ್ತಿರವೂ ಮಾತಾಡಬೇಡಿ. ಕೇವಲ ಗಮನಿಸುವ ಕೆಲಸ ಮಾಡಿ' ಎಂದು ಗೋಖಲೆಯವರೇ ಗಾಂಧಿಜಿಯವರಿಗೆ ಹೇಳಿದ್ದರು. ಅದರಂತೆ ಒಂದು ವರ್ಷಗಳ ತಮ್ಮ ಪ್ರವಾಸದಲ್ಲಿ ಗಾಂಧಿಯವರು ಯಾರ ಹತ್ತಿರವೂ ಮಾತಾಡುವುದಿಲ್ಲ. ಒಬ್ಬ ಶ್ರೀಸಾಮಾನ್ಯನ ತರಹ ಶ್ರೀಸಾಮಾನ್ಯನಂತೆ ಥರ್ಡ್ ಕ್ಲಾಸ್ ರೈಲ್ವೆ ಕಂಪಾರ್ಟ್ಮೆಂಟ್‌ನಲ್ಲಿ ಪ್ರವಾಸ ಮಾಡಿ, ಭಾರತದ ಜನಮಾನಸವನ್ನು, ಭಾರತದ ಜನಸಾಮಾನ್ಯನನ್ನು ಅರ್ಥಮಾಡಿಕೊಳ್ಳುವ ಪ್ರಯತ್ನ ಮಾಡುತ್ತಾರೆ.

ಇಡೀ ದೇಶವನ್ನು ಪರ್ಯಟನೆ ಮಾಡಿ ಬಂದಾಗ ಅವರಿಗೆ ಒಂದು ಸತ್ಯ ಗೊತ್ತಾಗುತ್ತದೆ. ಈ ನಮ್ಮ ದೇಶವನ್ನು ಕಿತ್ತು ತಿನ್ನುತ್ತಿರುವುದು ಬಡತನ. ಈ ಬಡತನದ ವಿರುದ್ಧ ನಾನು ಹೋರಾಟ ನಡೆಸಬೇಕು ಎಂದು ಅವರು ಅಂದುಕೊಳ್ಳುತ್ತಾರೆ. ಇದರ ಜೊತೆಗೆ ಅವರು ಕಂಡುಕೊಂಡ ಇನ್ನೊಂದು ಸತ್ಯವೆಂದರೆ

ಈ ಬಡತನಕ್ಕೆ ಕಾರಣ ಬ್ರಿಟಿಷರು. ಅವರು ನಮ್ಮನ್ನು ಶೋಷಣೆ ಮಾಡಿದ್ದಕ್ಕೇ ನಮ್ಮಲ್ಲಿ ಈ ಪ್ರಕಾರದ ಬಡತನ ಕಾಡುತ್ತಿರುವುದು. ಹಾಗಾಗಿ ಗಾಂಧಿಯವರು ಬ್ರಿಟಿಷರ ವಿರುದ್ಧ ಹೋರಾಟಕ್ಕೆ ಒಪ್ಪಿಕೊಳ್ಳುತ್ತಾರೆ, ಸ್ವಾತಂತ್ರ್ಯ ಸಂಗ್ರಾಮವನ್ನು ರೂಪಿಸುತ್ತಾರೆ. ಸ್ವಾತಂತ್ರ್ಯ ಸಂಗ್ರಾಮ, ಗಾಂಧಿಯವರ ವಿಶಾಲ ಕಾರ್ಯಕ್ರಮಗಳಲ್ಲಿ ಒಂದು ಕಾರ್ಯಕ್ರಮವಾಗಿತ್ತು. ತಮ್ಮ ಬದುಕಿನಲ್ಲಿ ಸ್ವಾತಂತ್ರ್ಯ ಸಿಗುತ್ತದೆ ಎಂದು ಅವರು ಯಾವತ್ತೂ ಅಂದುಕೊಂಡಿರಲಿಲ್ಲ. ಹಾಗಾಗಿ ಗಾಂಧೀಜಿಯವರನ್ನು ನಾವು ಬರೀ ಒಬ್ಬ ಸ್ವಾತಂತ್ರ್ಯ ಹೋರಾಟಗಾರನನ್ನಾಗಿ ನೋಡಿದರೆ ಅದು ಸಂಕುಚಿತವಾಗಿ ಬಿಡುತ್ತದೆ. ಅವರ ಜೀವನದ ಕ್ಯಾನ್ವಾಸ್ ತುಂಬಾ ವಿಶಾಲವಾದುದು.

❑

10 ಸ್ವಲ್ಪ ವೈಚಾರಿಕವಾಗಿ ನೋಡುವುದಾದರೆ, ಗಾಂಧೀಜಿಯವರ ಕಲ್ಪನೆಯ ಸಮಾಜ ನಿರ್ಮಾಣ ಯಾವ ರೀತಿ ಭಿನ್ನವಾಗಿತ್ತು ?

ಗಾಂಧೀಜಿಯವರು ನಮಗೆ ಅಹಿಂಸಾತ್ಮಕ ಸಮಾಜ ನಿರ್ಮಾಣದ ಕಲ್ಪನೆಯನ್ನು ಕೊಟ್ಟರು. ಎಲ್ಲರೂ ನೆಮ್ಮದಿಯಿಂದ, ಸುಖದಿಂದ ಬಾಳಬೇಕು ಎನ್ನುವುದೇ ಅಹಿಂಸಾತ್ಮಕ ಸಮಾಜದ ಕಲ್ಪನೆ. ಅವರು ನಮಗೆ ಕೊಟ್ಟ ಇನ್ನೊಂದು ಪ್ರಮುಖ ಕಲ್ಪನೆ ಎಂದರೆ, ಸಮುದಾಯಿಕ ಸಮಾಜ ನಿರ್ಮಾಣ. ನಮ್ಮಲ್ಲಿ ಹಲವಾರು ಸಮುದಾಯಗಳು, ಧರ್ಮಗಳು ಸಾವಿರಾರು ವರ್ಷಗಳಿಂದ ನೆಮ್ಮದಿಯಿಂದ, ಸೌಹಾರ್ದತೆಯಿಂದ ಬಾಳುತ್ತ ಬಂದಿವೆ. ಈ ದೇಶ ಚೆನ್ನಾಗಿರಬೇಕು ಅಂದರೆ ಎಲ್ಲಾ ಸಮುದಾಯದವರು ನೆಮ್ಮದಿಯಿಂದ ಬದುಕಬೇಕು. ಆ ಒಂದು ಸಮುದಾಯಿಕ ಚಿಂತನೆಯನ್ನು ಗಾಂಧೀಜಿಯವರು

ನಮಗೆ ಕೊಟ್ಟರು. ಶಾಂತಿಯುತ ಸಮಾಜ ಮತ್ತು ಸಮುದಾಯಿಕ ಸಮಾಜದ ಕಲ್ಪನೆ ಇದೆಯಲ್ಲ– ಇವು ಗಾಂಧೀಜಿಯವರ ಬಹಳ ದೊಡ್ಡ ಕೊಡುಗೆಗಳು ಎಂದು ನಾನು ಭಾವಿಸುತ್ತೇನೆ. ಕೇವಲ ಸ್ವಾತಂತ್ರ ಹೋರಾಟಕ್ಕೆ ಬಂದರು, ಧುಮುಕಿದರು, ಸ್ವಾತಂತ್ರ್ಯ ಕೊಡಿಸಿದರು ಎನ್ನುವ ಸೀಮಿತ ದೃಷ್ಟಿಯಿಂದ ನಾವು ಗಾಂಧೀಜಿಯವರನ್ನು ನೋಡಬಾರದು. ಯಾಕೆಂದರೆ ಅವರ ಇಡೀ ಹೋರಾಟ ಒಂದು ರಾಜಕೀಯ ಚಳವಳಿ ಆಗಿತ್ತು. ರಾಜಕೀಯ ಎನ್ನುವುದು ಒಂದು ಆಧ್ಯಾತ್ಮಿಕ ಪ್ರಕ್ರಿಯೆ ಎನ್ನುವ ಮಹೋನ್ನತ ಮಾತನ್ನು ಅವರು ಹೇಳುತ್ತಾರೆ. ನಾವು ಆಲೋಚನೆ ಮಾಡೋದು, ನಾವು ಹೇಳೋದು ಮತ್ತು ನಾವು ಮಾಡೋದು ಈ ಮೂರೂ ಸಹ ಒಂದೇ ಆದಾಗ ಅದು ನಮಗೆ ಆಧ್ಯಾತ್ಮಿಕ ಎನಿಸುತ್ತದೆ. ಗಾಂಧೀಜಿ ಅವರ ಬದುಕಿನಲ್ಲಿ ನೀವು ಅದನ್ನ ಕಾಣಬಹುದು. ಅವರ ಎಲ್ಲ ಸಾರ್ವಜನಿಕ ಹೋರಾಟಗಳಲ್ಲಿ ಅವರು ಏನನ್ನು ಆಲೋಚನೆ ಮಾಡಿದರೋ ಅದನ್ನೇ ಹೇಳಿದರು. ಏನನ್ನು ಹೇಳಿದರೋ ಅದನ್ನೇ ಮಾಡಿದರು. ಹಾಗಾಗಿ ಅವರಲ್ಲಿ ಒಂದು ಆಧ್ಯಾತ್ಮಿಕ ಶಕ್ತಿ ಇತ್ತು. ಗಾಂಧಿಯವರಿಗೆ ಭಾರತದ ಎಲ್ಲ ಭಾಷೆಗಳು ಬರುತ್ತಿರಲಿಲ್ಲ. ಅವರೇನೂ ಸ್ಪುರದ್ರೂಪಿ ಅಲ್ಲ. ಅಂತಹ ಆಕರ್ಷಕ ಭಾಷಣಕಾರರೂ ಅಲ್ಲ. ಆದರೂ ಸಹ ಲಕ್ಷೋಪಲಕ್ಷ ಜನ ಗಾಂಧಿ ಹಿಂದೆ ಬಂದು ನಿಂತರು ಅಂದರೆ, ಆ ಶಕ್ತಿಯೇ ಆಧ್ಯಾತ್ಮಿಕ ಶಕ್ತಿ. ಈ ದೇಶದ ಬಹಳ ದೊಡ್ಡ ಶಕ್ತಿ ಆಧ್ಯಾತ್ಮ. ಅದನ್ನು ಬಳಸಿಯೇ ಸಾರ್ವಜನಿಕ ಹೋರಾಟವನ್ನು ರೂಪಿಸಿದ್ದು ಗಾಂಧೀಜಿಯವರ ಒಂದು ದೊಡ್ಡ ಕೊಡುಗೆ ಎಂದು ನಾನು ಭಾವಿಸುತ್ತೇನೆ. ಇತ್ತೀಚಿನ ಭಾರತದಲ್ಲಿ ಅದರಲ್ಲೂ ಸ್ವಾತಂತ್ರ್ಯಾನಂತರದ ಭಾರತದಲ್ಲಿ ಆಧ್ಯಾತ್ಮವನ್ನು ಸಾರ್ವಜನಿಕ ಜೀವನದಲ್ಲಿ ನಾವು ಕಾಣುವುದೇ ಇಲ್ಲ.

❑

11 ಗಾಂಧಿಯವರ ವ್ಯಕ್ತಿತ್ವವನ್ನು ಒಬ್ಬ ಸಂತನ ವ್ಯಕ್ತಿತ್ವಕ್ಕೆ ಕೆಲವರು ಹೋಲಿಕೆ ಮಾಡುತ್ತಾರೆ. ತಾವು ಈ ವಿಷಯದಲ್ಲಿ ಏನು ಹೇಳುತ್ತೀರಿ?

ಖಂಡಿತವಾಗಿ ಗಾಂಧಿಯವರು ಒಬ್ಬ ಸಂತನ ರೀತಿಯಲ್ಲೇ ಬದುಕಿದವರು. ಮೌಲ್ಯಗಳನ್ನು ತುಂಬಿಕೊಂಡ ಸಂತನ ರೀತಿಯಲ್ಲಿ ಬದುಕಿದರು. ಗಾಂಧಿಯವರು ಪುಟ್ಟ ಬಾಲಕನಾಗಿದ್ದಾಗ ಹರಿಶ್ಚಂದ್ರ ನಾಟಕ ಅವರ ಮೇಲೆ ಬಹಳ ಪರಿಣಾಮ ಬೀರುತ್ತದೆ. ಎಷ್ಟು ಸಾವಿರ ಜನ, ಕೋಟ್ಯಾಂತರ ಜನ, ಹರಿಶ್ಚಂದ್ರರ ನಾಟಕ ಕೇಳಿದ್ದಾರೆ, ನೋಡಿದ್ದಾರೆ. ಗಾಂಧಿಯವರಿಗೆ ಆದ ಪರಿಣಾಮ ಯಾಕೆ ಬೇರೆಯವರ ಮೇಲೆ ಆಗಲಿಲ್ಲ? ಆ ಪುಟ್ಟ ವಯಸ್ಸಿನಲ್ಲಿಯೇ ಗಾಂಧಿಯವರು ಸುಳ್ಳು ಹೇಳಬಾರದು ಅಂತ

ನಿರ್ಣಯ ಮಾಡಿ, ತಮ್ಮ ಕಡೆ ಉಸಿರಿರುವವರೆಗೆ ಅವರು ಒಂದು ಸುಳ್ಳನ್ನೂ ಹೇಳಲಿಲ್ಲ. ಎಂಥ ತಪಸ್ವಿ ಬದುಕು ಅದು. ಇವೆಲ್ಲವೂ ಚಿಕ್ಕದು ಅನಿಸಿದರೂ ಕೂಡ ಅವರ ವ್ಯಕ್ತಿತ್ವಕ್ಕೆ ದೊಡ್ಡ ಶಕ್ತಿಯನ್ನು ತುಂಬಿದವು. ಇಂಥ ಮೌಲ್ಯಗಳನ್ನು ನಾವು ಗುರುತಿಸಬೇಕು. ಅವರು ಮೌಲ್ಯಗಳನ್ನು ಬೆರೆಸ್ತಾ ಬೆರೆಸ್ತಾ ತಮ್ಮ ಇಡೀ ಬದುಕನ್ನು ನಡೆಸಿದರು. ಅವರು ಬ್ರಿಟಿಷರನ್ನು ಯಾವತ್ತೂ ಕೂಡ ದ್ವೇಷಿಸಲಿಲ್ಲ, ದ್ವೇಷಿಸಿದವರನ್ನೂ ಪ್ರೀತಿಸಿದರು. ಅದು ಗಾಂಧಿ ವಿಶೇಷತೆ. ಇದು ನಮಗೆ ಸಾಧ್ಯವಾ? ಆಲೋಚನೆ ಮಾಡಿ. ನಮಗೆ ಯಾರಾದ್ರೂ ಕಟುವಾಗಿ ಒಂದು ಶಬ್ದ ಆಡಿದ್ರೂ ಕೂಡ ನಮ್ಮ ಮನಸ್ಸು ಎಷ್ಟು ಬೇಗ ರಿಯಾಕ್ಟ್ ಮಾಡುತ್ತೆ. ಗಾಂಧಿಯವರು ತಮ್ಮ ಸಾರ್ವಜನಿಕ ಬದುಕಿನಲ್ಲಿ ಒಬ್ಬರನ್ನು ಕೂಡ ಒಂದು ದಿನವೂ ಟೀಕೆ ಮಾಡಲಿಲ್ಲ. ಟೀಕೆ ಮಾಡಿದವರನ್ನು ಹಿಂತಿರುಗಿ ಬೈಯ್ಯಲಿಲ್ಲ. ಸಾರ್ವಜನಿಕ ಜೀವನದ ಎಲ್ಲ ನಾಯಕರಿಗೆ ಎಂಥ ಪಾಠ ಇದು. ಪ್ರಪಂಚಕ್ಕೆ ಈಗ ಗಾಂಧಿ ಬೇಕು. ಪ್ರಪಂಚದ ಬಹುತೇಕ ನಾಯಕರು ಈಗ ಗಾಂಧಿಯವರ ಬಗ್ಗೆ ಮಾತಾಡುತ್ತಿದ್ದಾರೆ. ಸತ್ಯ ಮತ್ತು ಅಹಿಂಸೆಯ ಬಗ್ಗೆ ಮಾತಾಡುತ್ತಿದ್ದಾರೆ. ಈ ಮೌಲ್ಯಗಳನ್ನು, ತತ್ವಗಳನ್ನು ಇಡೀ ಪ್ರಪಂಚವೇ ಗುರುತಿಸುತ್ತಿದೆ.

❑



12 ಗಾಂಧಿಯವರು ಅಂದ ತಕ್ಷಣ ನಮಗೆ ನೆನಪಾಗುವುದು ಅವರ ಸರಳತೆ. ಭಾರತದ ಜನ ಅವರನ್ನು ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಒಪ್ಪಲು ಸರಳತೆಯೂ ಒಂದು ಪ್ರಮುಖ ಕಾರಣ ಎನ್ನುತ್ತಾರೆ. ಈ ಬಗ್ಗೆ ತಮ್ಮ ಅಭಿಪ್ರಾಯ...

ಖಂಡಿತ ಹೌದು. ನಮ್ಮ ಕೆಲಸವನ್ನು ನಾವೇ ಮಾಡಿಕೊಳ್ಳಬೇಕು ಎನ್ನುವುದು ಗಾಂಧೀಜಿ ಕಲ್ಪನೆ. ಅವರು ತಮ್ಮ ಜೀವನವನ್ನು ಎಷ್ಟು ಸರಳ ಮಾಡಿಕೊಂಡಿದ್ದರು ಎಂದರೆ ಯಾರನ್ನೂ ಅವರು ಅವಲಂಬಿಸುತ್ತಿರಲಿಲ್ಲ. ಅವರ ಬಟ್ಟೆಯನ್ನು ಅವರೇ ಒಗೆಯುತ್ತಿದ್ದರು. ಅವರ ಪಾಯಖಾನೆಯನ್ನು ಅವರೇ ಸ್ವಚ್ಛ ಮಾಡಿಕೊಳ್ಳುತ್ತಿದ್ದರು. ಅವರ ಸ್ನಾನದ ಮನೆಯನ್ನು ಅವರೇ ತೊಳೆದುಕೊಳ್ಳುತ್ತಿದ್ದರು. ತಮಗೆ

ತಿಳಿದಿರುವ ಹಾಗೆ ಗಾಂಧೀಜಿಯವರ ಬಟ್ಟೆ ಎಂದರೆ ಎರಡು ಅಂಗವಸ್ತ್ರ, ಮೇಲೊಂದು ಕೆಳಗೊಂದು ಉಡುತ್ತಿದ್ದರು. ಅದನ್ನೂ ಕೂಡ ಟೇಲರ್ ಹತ್ತಿರ ಹೊಲಿಸುತ್ತಿರಲಿಲ್ಲ. ಅವರು ಇಡೀ ಬದುಕಿನಲ್ಲಿ ಒಂದು ಬಾಚಣಿಕೆಯನ್ನು ಬಳಸಿಲ್ಲ. ಅವರ ಆಶ್ರಮದಲ್ಲಿ ಒಂದು ಕನ್ನಡಿ ಸಹ ಇಟ್ಟುಕೊಂಡಿರಲಿಲ್ಲ. ಆಶ್ರಮದಲ್ಲಿ ಕನ್ನಡಿ ಯಾಕಿಲ್ಲ ಎನ್ನುವುದಕ್ಕೆ ಗಾಂಧಿಯವರು ಮಾರ್ಮಿಕವಾಗಿ ಉತ್ತರಿಸುತ್ತಿದ್ದರು– "ಕನ್ನಡಿ ಬಳಸುವುದರಿಂದ 'ನಾನು' ಎನ್ನುವುದು ಹೆಚ್ಚಾಗುತ್ತದೆ" ಎನ್ನುವ ಮಾತನ್ನು ಹೇಳಿದರು. ಸರಳತೆಯ ಜೊತೆಗೆ ಅವರು ಶ್ರೀಸಾಮಾನ್ಯರ ಜೀವನವನ್ನು ಅಳವಡಿಸಿಕೊಂಡರು. ಆಗಿನ ಕಾಲದಲ್ಲಿ ಹಸುವಿನ ಹಾಲನ್ನು ಶ್ರೀಮಂತರು ಮತ್ತು ಉಳ್ಳವರು ಕುಡಿಯುತ್ತಿದ್ದರು. ಬಡವರು ಕುಡಿಯುತ್ತಿದ್ದದ್ದು ಮೇಕೆ ಹಾಲು. ಆದ್ದರಿಂದ ಗಾಂಧಿಯವರು ತಾನೂ ಕೂಡ ಮೇಕೆ ಹಾಲು ಕುಡಿಯುತ್ತೇನೆ ಎಂದು ಹೇಳಿ ಮೇಕೆ ಹಾಲು ಕುಡಿಯಲು ಪ್ರಾರಂಭಿಸಿದರು. ಬ್ಯಾರಿಸ್ಟರ್ ಆಗಿದ್ದವರು, ಇಂಗ್ಲೆಂಡಿನಲ್ಲಿ ಓದಿದ್ದವರು, ಎಷ್ಟೆಲ್ಲ ಐಷಾರಾಮಿ ಜೀವನ ಕಂಡವರು, ಅಂಥವರು ಇಷ್ಟು ಸರಳತೆಯನ್ನು ಅಳವಡಿಸಿಕೊಳ್ಳುವುದು ಸುಲಭದ ಮಾತಲ್ಲ. ಇಂತಹ ದೀಕ್ಷೆಯನ್ನು ಅವರು ಪಡೆದುಕೊಂಡಿದ್ದರಿಂದಲೇ ಜನರು ಅವರನ್ನು ಒಪ್ಪಿಕೊಂಡರು. ಜನರು ಅವರಲ್ಲಿ ತಮ್ಮನ್ನು ಕಂಡರು, ತಮ್ಮ ಜೊತೆ ಸಮೀಕರಿಸಿಕೊಂಡರು. ಗಾಂಧಿಯವರಲ್ಲಿ ಭಾರತದ ಭವಿಷ್ಯವನ್ನು ಕಂಡರು. ಅವರ ಹಿಂದೆ ಲಕ್ಷಾಂತರ ಜನ, ಕೋಟ್ಯಾಂತರ ಜನ ನಿಂತರು.

❑

13 ಸ್ವಚ್ಛತಾ ಆಂದೋಲನ ಸಹ ಗಾಂಧಿಯವರ ಕಾರ್ಯಕ್ರಮಗಳ ಬಹುಮುಖ್ಯ ಭಾಗವಾಗಿತ್ತು. ಈ ವಿಷಯವನ್ನು ತಾವು ಹೇಗೆ ವ್ಯಾಖ್ಯಾನಿಸುತ್ತೀರಿ?

ಗಾಂಧೀಜಿಯವರ ದೃಷ್ಟಿಯಲ್ಲಿ ಸ್ವಚ್ಛತೆ ಎಂದರೆ ಕೇವಲ ನಮ್ಮ ಸುತ್ತಮುತ್ತಲಿನ ಆವರಣವನ್ನು ಸ್ವಚ್ಛ ಮಾಡುವುದಲ್ಲ. ಅವರ ಪ್ರಕಾರ ಸ್ವಚ್ಛತೆ ಎಂದರೆ ಮೊದಲು ಸಾಧಿಸಬೇಕಾಗಿದ್ದು ಮನಸ್ಸಿನ ಸ್ವಚ್ಛತೆ. ಮನಸ್ಸಿನ ಕಸ ಗುಡಿಸಬೇಕು ಎಂದು ಅವರು ಹೇಳಿದ್ದರು. ಗಾಂಧಿಯವರಿಗೆ ಸ್ವಚ್ಛತೆ ಎನ್ನುವಂತಹದ್ದು ಒಂದು ಆಧ್ಯಾತ್ಮಿಕ ಪ್ರಕ್ರಿಯೆ. ಅದು ನಮ್ಮ ಮನಸ್ಸಿನ ಮೇಲೆ ಅಗಾಧವಾದ ಪರಿಣಾಮವನ್ನು ಬೀರುತ್ತದೆ. ತನ್ಮೂಲಕ ನಾವು ಮಾಡುವ ಕೆಲಸದಲ್ಲಿ ಹೆಚ್ಚಿನ ಶಕ್ತಿ ಬರುತ್ತದೆ ಎನ್ನುವುದು ಗಾಂಧಿಯವರ ಸಿದ್ಧಾಂತ.

“ನೀವು ಎಲ್ಲಿಯವರೆಗೆ ಕಸಬರಿಗೆ ಮತ್ತು ಬುಟ್ಟಿಯನ್ನು ಕೈಯಲ್ಲಿ ಹಿಡಿಯುವುದಿಲ್ಲವೋ ಅಲ್ಲಿಯವರೆಗೆ ನಿಮ್ಮ ನಗರವನ್ನು ಸ್ವಚ್ಛವಾಗಿಡಲು ಸಾಧ್ಯವಿಲ್ಲ” ಎಂದು ಗಾಂಧೀಜಿ ಹೇಳುತ್ತಿದ್ದರು. ಒಮ್ಮೆ ಶಾಲೆಯೊಂದಕ್ಕೆ ಗಾಂಧಿಯವರು ಭೇಟಿ ನೀಡಿದಾಗ ಅಲ್ಲಿನ ಶಿಕ್ಷಕರಿಗೆ ಹೀಗೆ ಹೇಳಿದ್ದರು- “ನೀವು ನಿಮ್ಮ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಬೇಕೆಂದರೆ ಮಕ್ಕಳಿಗೆ ಕೇವಲ ಅಕ್ಷರಾಭ್ಯಾಸ ಮಾಡಿಸಿದರೆ ಮಾತ್ರ ಸಾಕಾಗುವುದಿಲ್ಲ. ಜೊತೆಗೆ ಅವರನ್ನು ಅಡುಗೆ ಮಾಡುವವರು ಹಾಗೂ ಕಸ ಗುಡಿಸುವವರನ್ನಾಗಿ ಸಹ ಮಾಡಬೇಕು”. ವಿದ್ಯಾರ್ಥಿಗಳಿಗೆ ಅವರ ಉಪದೇಶ ಹೀಗಿತ್ತು- “ನೀವೇ ಸ್ವಂತ ಕಸ ಗುಡಿಸುವವರಾದರೆ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿ ಇಡಬಹುದು. ವಿಕ್ಟೋರಿಯಾ ಕ್ರಾಸ್ ಗೆಲ್ಲುವುದಕ್ಕಿಂತ ಹೆಚ್ಚು ಧೈರ್ಯ, ಒಬ್ಬ ಪರಿಣಿತ ಕಸ ಗುಡಿಸುವವನಿಗೆ ಬೇಕು.”

ಅವರ ಆಶ್ರಮದಲ್ಲಿ ಎಲ್ಲರೂ ತಮ್ಮ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳಬೇಕಾಗಿತ್ತು. ಅದು ಗಾಂಧಿಯವರ ಶಿಸ್ತು ಹಾಗೂ ಆಶ್ರಮದ ಕಾನೂನಾಗಿತ್ತು. ಆಶ್ರಮದ ವಾಸಿಗಳಾಗಿರಲಿ ಅಥವಾ ಹೊರಗಿನಿಂದ ಬಂದವರಾಗಿರಲಿ ಅವರ ಕೆಲಸವನ್ನು ಅವರೇ ಮಾಡಬೇಕಾಗಿತ್ತು. ಅತ್ಯಂತ ಶ್ರೀಮಂತ ಮನೆತನದಿಂದ ಬಂದ ನೆಹರು ಅವರು ಸಹ ಆಶ್ರಮಕ್ಕೆ ಭೇಟಿ ನೀಡಿದಾಗ ತಮ್ಮ ಬಾತ್‌ರೂಮನ್ನು ತಾವೇ ಸ್ವಚ್ಛ ಮಾಡುತ್ತಿದ್ದರು. ನಾವು ನಮ್ಮ ಕೆಲಸಕ್ಕೆ ಇನ್ನೊಬ್ಬರನ್ನು ಅವಲಂಬಿಸಿದರೆ ಶೋಷಣೆ, ಆ ಕ್ಷಣದಿಂದಲೇ ಪ್ರಾರಂಭ. ಕೆಲಸದವರನ್ನು ‘ಏ ಮಾಡಿಲ್ಲಿ ಅನ್ನೋದು, ಏ ಬಾ ಇಲ್ಲಿ ಅನ್ನೋದು’ ಅಲ್ಲಿಂದಲೇ ಶೋಷಣೆ ಪ್ರಾರಂಭವಾಗುತ್ತದೆ.

❑

14 ಇತ್ತೀಚಿನ ದಿನಗಳಲ್ಲಿ ಗಾಂಧಿಯವರ ಕೆಲಸ ಜನಮಾನಸದಿಂದ ದೂರವಾಗುತ್ತಿದೆ, ಗಾಂಧಿ ತತ್ವಗಳನ್ನು ಅಳವಡಿಸಿಕೊಳ್ಳುವವರ ಸಂಖ್ಯೆ ವಿರಳವಾಗುತ್ತಿದೆ ಎನ್ನುವ ಅಳುಕನ್ನು ಎಲ್ಲರೂ ವ್ಯಕ್ತಪಡಿಸುತ್ತಿದ್ದಾರೆ. ತಮಗೂ ಹಾಗೇ ಅನ್ನಿಸುತ್ತಿದೆಯಾ?

ನಿಜ, ನಾನು ಅದನ್ನು ಒಪ್ಪುತ್ತೇನೆ. ದುರಾದೃಷ್ಟ ಅಂದರೆ ಸ್ವಾತಂತ್ರ್ಯಾನಂತರ ಗಾಂಧಿಯುವರ ಪರಿಣಾಮ ಬಹುತೇಕ ನಮ್ಮ ಸಾರ್ವಜನಿಕ ಜೀವನದ ಮೇಲೆ ಬಹಳ ಕಡಿಮೆ ಆಯಿತು ಅಂತ ನನಗೆ ಅನಿಸುತ್ತದೆ. ಇದು ಈ ದೇಶದ ದುರಂತವೇ. ಗಾಂಧಿಯವರು ನವ ಭಾರತದ ನಿರ್ಮಾಣದ ಕನಸನ್ನು ಕಂಡರು. ಅವರು ಎಂತಹ ಕನಸನ್ನು ಕಂಡರು ಅಂದರೆ ರಚನಾತ್ಮಕ ಕಾರ್ಯಕ್ರಮಗಳ

ಮೂಲಕ ಹಳ್ಳಿಗಾಡಿನಲ್ಲಿ ಜನರನ್ನು ಆ ಸ್ತರದಿಂದ ಮೇಲೆತ್ತುವ ದೊಡ್ಡ ಕನಸನ್ನು ಕಂಡರು. ಗ್ರಾಮ ಸ್ವರಾಜ್ಯದ ಕಲ್ಪನೆಯನ್ನು ನಮಗೆ ಕೊಟ್ಟರು. ಅಂದರೆ ಈ ದೇಶದ ಕಟ್ಟಕಡೆಯ ಮನುಷ್ಯನ ಬದುಕು ಹಸನಾದರೆ ದೇಶ ಹಸನಾದೀತು ಎಂಬ ಕಲ್ಪನೆಯನ್ನು ಕೊಟ್ಟರಲ್ಲ, ಅದು ಗಾಂಧಿಯ ಮಹಾನ್ ಕೊಡುಗೆ ಎಂದು ನಾನು ಅಂದುಕೊಳ್ಳುತ್ತೇನೆ. ಗಾಂಧಿಯವರು ಬಹಳ ದೊಡ್ಡ ಆಧ್ಯಾತ್ಮಿಕ ಜೀವಿಯಾಗಿದ್ದರು. ಸತ್ಯ ಮತ್ತು ಅಹಿಂಸೆಯ ಮಾರ್ಗದಲ್ಲಿ ರಾಜಕೀಯ ಆಂದೋಲನ ಮಾಡುತ್ತೇನೆ ಎಂದು ಧೈರ್ಯಪಟ್ಟು ಮುಂದೆ ಬಂದವರು ಎಷ್ಟು ಜನ ಅವರನ್ನು ನೋಡಿ ನಕ್ಕಿದ್ದರು. ಅವರನ್ನು ನೋಡಿ ಅಸೂಯೆ ಪಟ್ಟಿದ್ದರು. ಅವರನ್ನ ಟೀಕೆ ಮಾಡಿದ್ದರು. ಬಹಳ ನಿಕೃಷ್ಟವಾಗಿ ಕಂಡರು. ಉಡಾಫೆ ಮಾತುಗಳನ್ನು ಆಡಿದರು. ಆದರೆ ಗಾಂಧಿಯವರು ಅದೆಲ್ಲವನ್ನೂ ಮೆಟ್ಟಿ ನಿಂತು ತಮ್ಮ ಚಳವಳಿಯನ್ನು ಕಟ್ಟಿದರು. ತಾನೇ ಎಲ್ಲವನ್ನೂ ಮಾಡಿಬಿಟ್ಟಿದ್ದೇನೆ ಎಂದು ಅವರು ಎಲ್ಲಿಯೂ ಹೇಳಿಕೊಳ್ಳಲಿಲ್ಲ. ತನ್ನ ಜೀವನವೇ ಸತ್ಯ ಶೋಧನೆಯ ಪ್ರಯೋಗ ಅಂತ ಅವರು ಹೇಳಿದರು. ನನಗೆ ಗಾಂಧಿ ಯಾಕೆ ಬಹಳ ಖುಷಿ ಕೊಡುತ್ತಾರೆ ಅಂದರೆ ನಮ್ಮ ನಿಮ್ಮ ಹಾಗೆ ಸರಳ ವ್ಯಕ್ತಿ. ಅನೇಕ ತಪ್ಪುಗಳನ್ನು ಮಾಡಿದಂತಹ ವ್ಯಕ್ತಿ. ಆದರೂ ಕೂಡ ಬೇಗ ಎಚ್ಚೆತ್ತುಕೊಂಡು ತಿದ್ದಿಕೊಂಡು ಬೆಳೆದ ಆ ಪ್ರಕ್ರಿಯೆ ಇದೆಯಲ್ಲ, ಆಂತರಿಕವಾಗಿ ಬಾಹ್ಯವಾಗಿ ಬೆಳೆಯುವುದು ಇದೆಯಲ್ಲ, ಇದು ಗಾಂಧಿಯವರ ವಿಶೇಷತೆ. ಅಂತಹ ಮನುಷ್ಯನ ಪರಿಣಾಮ ನಮ್ಮ ಸಾರ್ವಜನಿಕ ಜೀವನದ ಮೇಲೆ ಕಡಿಮೆ ಆಗುತ್ತಿರುವುದು ನಿಜಕ್ಕೂ ದುರಾದೃಷ್ಟಕರ ಅಂತ ನನಗೆ ಅನಿಸುತ್ತದೆ.

❑

15 ಇಂದು ನಮ್ಮ ದೇಶ ಸಾಗುತ್ತಿರುವ ಪಥವನ್ನು ಗಮನಿಸಿದಾಗ ತಮಗೆ ಏನನ್ನಿಸುತ್ತದೆ? ಗಾಂಧಿಯವರ ಚಿಂತನೆಗಳು ಹಾಗೂ ಇಂದಿನ ಆಧುನಿಕ ಭಾರತದ ಅಭಿವೃದ್ಧಿಯ ಸೂತ್ರಗಳಲ್ಲಿ ಏನಾದರೂ ಸಾಮ್ಯತೆ ಕಾಣುತ್ತಿದೆಯಾ?

ಇತ್ತೀಚೆಗೆ ನನಗೆ ಒಂದು ಸಂತೋಷ ಏನೆಂದರೆ ಗಾಂಧೀಜಿಯವರು ಕೊಟ್ಟ ಸ್ವಾವಲಂಬನೆ ಕಲ್ಪನೆಯನ್ನು ಈಗ ಆತ್ಮನಿರ್ಭರತೆ ಎನ್ನುವ ಕಲ್ಪನೆಯಲ್ಲಿ ದೇಶದಲ್ಲಿ ಅಳವಡಿಸಲಾಗುತ್ತಿದೆ. ಇದು ಸ್ವಾಗತ ಮಾಡುವಂತಹ ವಿಚಾರ. ಯಾವುದೇ ಪದ ಬಳಕೆಯಾದರೂ ತೊಂದರೆಯಿಲ್ಲ, ಆದರೆ ಆಶಯ ಮುಖ್ಯ. ಇದೊಂದು ಬಹಳ ಒಳ್ಳೆಯ ಚಿಂತನೆ, ಆಲೋಚನೆ. ಇವತ್ತು ದೇಶದ ಪ್ರಧಾನಿಗಳು ಹಳೆ

ಚಿಂತನೆಗೆ ಆಧುನಿಕ ಸ್ಪರ್ಶ ಕೊಟ್ಟಿದ್ದಾರೆ. ಒಳ್ಳೆಯ ಚಿಂತನೆಯನ್ನು ನಮ್ಮ ಮುಂದೆ ಇಟ್ಟಿದ್ದಾರೆ. ಕೋವಿಡ್-19 ನಮಗೆ ದೊಡ್ಡ ಪಾಠವನ್ನೇ ಕಲಿಸಿದೆ. ನಾವು ಎಲ್ಲ ಕ್ಷೇತ್ರದಲ್ಲೂ ಸ್ವಾವಲಂಬಿ ಗಳಾಗಬೇಕು. ಬೇರೆ ದೇಶಗಳ ಮೇಲೆ ಅವಲಂಬನೆ ಕಡಿಮೆ ಮಾಡಿಕೊಳ್ಳಬೇಕು. ನಾವು ರಫ್ತು ಹೆಚ್ಚು ಮಾಡಿ, ಆಮದು ಕಡಿಮೆ ಮಾಡುವುದು ಆರ್ಥಿಕತೆಯ ದೃಷ್ಟಿಯಿಂದ ಬಹಳ ಮುಖ್ಯ

ಎರಡನೆಯದು ನನಗನಿಸಿದ್ದು ಸ್ವಾತಂತ್ರ್ಯಾ ನಂತರ ರೈತರಿಗೆ ಕೊಡಬೇಕಾದಷ್ಟು ಬೆಲೆಯನ್ನು ನಾವು ಕೊಡಲಿಲ್ಲ ಅಂತ ಕಾಣಿಸುತ್ತದೆ. ಸ್ವಾತಂತ್ರ್ಯಾ ನಂತರ ನಾವು ಬೃಹತ್ ಕೈಗಾರಿಕೆಗಳಿಗೆ ಮಹತ್ವವನ್ನು ಕೊಟ್ಟೆವು, ಅದು ಕೂಡ ಬೇಕಾಗಿತ್ತು. ಆದರೆ ಎಲ್ಲೋ ಒಂದು ಕಡೆ ರೈತರ ಹಿತದೃಷ್ಟಿಯನ್ನು ಕಾಯ್ದುಕೊಂಡು ಬರದೇ ಇರುವುದು ಒಂದು ಸಮಸ್ಯೆ ಎನ್ನಿಸುತ್ತದೆ. ಈಗ ಅದರ ಬಗ್ಗೆ ಆಲೋಚನೆ ಆಗುತ್ತಿರುವುದು ಬಹಳ ಒಳ್ಳೆಯದು. ನಾವು ಸ್ವಾವಲಂಬಿ ಭಾರತವಾದರೆ ಗಾಂಧಿಯವರ ಚಿಂತನೆ ಮತ್ತೆ ಮರುಸ್ಥಾಪನೆ ಆದಂತೆ. ಇದಕ್ಕೆ ಯಾವುದೇ ಪಕ್ಷದ ಲೇಪ ಬೇಡ. ಯಾವ ಒಂದು ಸಿದ್ಧಾಂತದ ಲೇಪವೂ ಬೇಡ. ನಿಜಕ್ಕೂ ನಾವು ಎಷ್ಟು ಸ್ವಾವಲಂಬಿಗಳಾಗಿ ಬದುಕುತ್ತೇವೆಯೋ ಅಷ್ಟು ನಮಗೆ ವಿಶ್ವದಲ್ಲಿ ಗೌರವ ಸಿಗಲಿಕ್ಕೆ ಸಾಧ್ಯವಾಗುತ್ತದೆ. ಇವತ್ತು ಆಹಾರ ಉತ್ಪಾದನೆಯಲ್ಲಿ ನಾವು ಸ್ವಾವಲಂಬಿಗಳಾಗಿದ್ದೇವೆ. ಜರ್ಮನಿಯಂತಹ ದೇಶದಲ್ಲಿ ಆಹಾರಕ್ಕೋಸ್ಕರ ಕ್ರಾಂತಿಯೇ ನಡೆದಿದ್ದನ್ನು ನೀವು ನೋಡಿದ್ದೀರಿ. ಯುದ್ಧದ ಸಮಯದಲ್ಲಿ ಬ್ರೆಡ್‌ಗೋಸ್ಕರ ಕ್ಯೂನಲ್ಲಿ ನಿಲ್ಲುವುದನ್ನು ನಾವು ನೋಡಿದ್ದೇವೆ. ಆದ್ರೆ ನಮ್ಮ ದೇಶದಲ್ಲಿ ಆ ಸ್ಥಿತಿ ಇಲ್ಲ. ಇದು ನಮ್ಮ ಸೌಭಾಗ್ಯ. ಈ ದೇಶಕ್ಕೆ ಒಳ್ಳೆಯ ಭವಿಷ್ಯವಿದೆ. ಆದ್ದರಿಂದ ಕೈಗಾರಿಕಾ

ನೀತಿಗಳನ್ನೂ ರೂಪಿಸಿಕೊಂಡು, ಜೊತೆ ಜೊತೆಯಲ್ಲಿ ನಮ್ಮ ರೈತನಿಗೆ ಶಕ್ತಿ ತುಂಬುವ ಕೆಲಸವಾದರೆ, ಸ್ವಾತಂತ್ರ್ಯ ಹೋರಾಟಗಾರರ ಕನಸು ನನಸಾಗುತ್ತದೆ. ನಮ್ಮೆಲ್ಲ ಸ್ವಾತಂತ್ರ್ಯ ಹೋರಾಟಗಾರರ ಕನಸೆಂದರೆ ಎಲ್ಲರಿಗೂ ಬೆಳೆಯಲು ಸಮಾನ ಅವಕಾಶ ಸಿಗಬೇಕು ಎನ್ನುವುದು. ಆ ನಿಟ್ಟಿನಲ್ಲಿ ನಮ್ಮ ಭಾರತ ಮುಂದುವರೆಯುತ್ತಿರುವುದು ನನಗಂತೂ ಬಹಳ ಸಂತೋಷ ಕೊಡುತ್ತಿದೆ.

16 ತಮ್ಮ ಅಭಿಪ್ರಾಯದಂತೆ ಒಂದು ದೇಶವಾಗಿ ಭಾರತದ ಭವಿಷ್ಯ ಹೇಗಿದೆ? ಅಥವಾ ಭವಿಷ್ಯದ ಭಾರತಕ್ಕೆ ತಮ್ಮ ಕಲ್ಪನೆಗಳೇನು?

ಗಾಂಧಿಯವರು ನಮಗೆ ಕೊಟ್ಟಂತಹ ಬಹಳ ದೊಡ್ಡ ಕಲ್ಪನೆ ಎಂದರೆ ರಚನಾತ್ಮಕ ಕಾರ್ಯಕ್ರಮಗಳು. ಜನಗಳ ನಡುವೆ ಇದ್ದು ಕೆಲಸ ಮಾಡುವಂತಹದ್ದು. ಗ್ರಾಮ ನೈರ್ಮಲ್ಯ ಇರಬಹುದು, ನಮ್ಮ ಮೂಲಭೂತ ಶಿಕ್ಷಣ ಇರಬಹುದು, ವೈದ್ಯಕೀಯ ಸೇವೆಗಳು ಇರಬಹುದು, ವಿದ್ಯಾರ್ಥಿಗಳ ಸೇವೆ, ಎಲ್ಲಕ್ಕಿಂತ ಹೆಚ್ಚಾಗಿ ಸಾಮಾಜಿಕ ಪಿಡುಗುಗಳ ನಿವಾರಣೆ, ಅಸ್ಪೃಶ್ಯತೆ ನಿವಾರಣೆ ಇವೆಲ್ಲವೂ ಗಾಂಧಿಯವರ ರಚನಾತ್ಮಕ ಕಾರ್ಯಕ್ರಮಗಳ ಭಾಗಗಳಾಗಿದ್ದವು. ಇವು ಇಂದಿನ ಅಗತ್ಯಗಳೂ ಹೌದು. ಆದ್ದರಿಂದ ಗಾಂಧಿಯವರ ರಚನಾತ್ಮಕ ಕೆಲಸಗಳನ್ನು ಗಮನದಲ್ಲಿ ಇಟ್ಟುಕೊಂಡು

ನಾವು ಕಾರ್ಯಕ್ರಮಗಳನ್ನು ಹಾಕಿಕೊಂಡರೆ ಬಹುಶಃ ಮುಂದಿನ 10–15 ವರ್ಷಗಳಲ್ಲಿ ಭಾರತವು ಖಂಡಿತವಾಗಿಯೂ ಬಹಳ ಗಟ್ಟಿಕೊಳ್ಳುತ್ತದೆ, ಎಲ್ಲಾ ರೀತಿಯಲ್ಲೂ ಸಜ್ಜಾಗುತ್ತದೆ. ಉತ್ತಮ ಶಿಕ್ಷಣ ನೀತಿ ಕೂಡ ರೂಪಗೊಳ್ಳುತ್ತಿರುವುದರಿಂದ ಅದೂ ಸಹ ಭವಿಷ್ಯದ ಭಾರತಕ್ಕೆ ಉತ್ತಮ ಕೊಡುಗೆ ಕೊಡಬಹುದು ಎನ್ನುವುದು ನನ್ನ ಅನಿಸಿಕೆ.

ಗಾಂಧಿಯವರ ಕಲ್ಪನೆ ಏನಿತ್ತು ಅಂತ ಅಂದರೆ, ನಾವೆಲ್ಲ ಮಿಕ್ಕ ರಾಷ್ಟ್ರಗಳೊಂದಿಗೆ ಸೌಹಾರ್ದತೆಯಿಂದ ಬದುಕಬೇಕು. ನಮ್ಮ ನೆರೆ–ಹೊರೆಯ ರಾಷ್ಟ್ರಗಳ ಜೊತೆ ಮೈತ್ರಿ ಬೆಳೆಸಿಕೊಂಡು, ಯಾರೊಂದಿಗೂ ನಾವು ಹೆಚ್ಚು ಘರ್ಷಣೆ ಮಾಡಿಕೊಳ್ಳದೆ ಹೋದರೆ, ಒಂದು ಅನುಕೂಲವೆಂದರೆ ನಾವು ರಕ್ಷಣೆಯ ವಿಷಯದಲ್ಲಿ ಹೆಚ್ಚು ಖರ್ಚು ಮಾಡುವ ಅವಶ್ಯಕತೆ ಬರುವುದಿಲ್ಲ. ಆ ಹಣವನ್ನೇ ನಮ್ಮ ಜನರ ಅಭ್ಯುದಯಕ್ಕೆ ಖರ್ಚು ಮಾಡಿದರೆ ನಾವು ಇನ್ನೂ ಒಳ್ಳೆಯ ಬದುಕನ್ನು ಬಾಳಬಹುದು. ಆದ್ದರಿಂದ ಅಂತಾರಾಷ್ಟ್ರೀಯ ಮಟ್ಟದಲ್ಲಿ ಎಲ್ಲ ದೇಶಗಳೊಂದಿಗೆ ಸೌಹಾರ್ದ ರೀತಿಯಲ್ಲಿ ನಡೆದುಕೊಂಡು ಹೋಗುವ ಯತ್ನ ಆಗಬೇಕು. ಯುದ್ಧದ ಬಗ್ಗೆ ಯುವಕರಿಗೆ ಸಂದೇಶ ಕೊಡಬಾರದು. ಯುದ್ಧ ಸಾಮಗ್ರಿ ತೆಗೆದುಕೊಂಡು ಅದರ ಬಳಕೆ ಮಾಡದೆ ಹೋದರೆ ಅದು ಹಾಳಾಗಿ ಹೋಗುತ್ತದೆ. ಅದೊಂದು ಚೈನ್ ರಿಯಾಕ್ಷನ್. ಆ ಸಂಕೋಲೆಗೆ ನಾವು ಸಿಕ್ಕಿ ಬಿದ್ದರೆ ನಮ್ಮ ಆರ್ಥಿಕತೆ ಹಿಂದೆ ಉಳಿಯುತ್ತದೆ. ಆ ದೃಷ್ಟಿಯಿಂದ ನಾವು ಎಲ್ಲ ರಾಷ್ಟ್ರಗಳೊಂದಿಗೆ ಪ್ರೀತಿಯಿಂದ, ಅಣ್ಣ–ತಮ್ಮಂದಿರಾಗಿ ಬದುಕುವ ಪ್ರಯತ್ನವನ್ನು ನಾವು ಮಾಡಬೇಕು ಅನ್ನೋದು ನನ್ನ ಕಲ್ಪನೆ; ಅದು ಗಾಂಧೀಜಿಯವರ ಚಿಂತನೆ ಕೂಡ ಆಗಿತ್ತು. ಅದನ್ನು ನಮ್ಮ ಎಲ್ಲ ನೇತಾರರು ಆಲೋಚನೆ ಮಾಡಿ ಮಾಡೋದಾದರೆ ಭವ್ಯ ರಾಷ್ಟ್ರ ನಿರ್ಮಾಣದ ಕಲ್ಪನೆಗೆ ದೊಡ್ಡ ಬಲ ಬರುತ್ತದೆ.

❑

17 ಇಂದಿನ ಆಧುನಿಕ ಜಗತ್ತಿನಲ್ಲಿ, ಈ ಎಲ್ಲ ಆಕರ್ಷಣೆಗಳ ನಡುವೆ ಸರಳ ಜೀವನ ಸಾಧ್ಯವಿದೆಯಾ?

ಖಂಡಿತ ಸಾಧ್ಯವಿದೆ, ಖ್ಯಾತ ತತ್ವಜ್ಞಾನಿಯಾದ ಸಾಕ್ರಟೀಸ್ ಒಂದು ಮಾತನ್ನು ಹೇಳುತ್ತಾನೆ– 'ನನಗೆ ಏನೇನು ವಸ್ತುಗಳು ಬೇಡ ಎನ್ನುವುದನ್ನು ನೋಡಲು ನಾನು ಮಾರ್ಕೆಟಿಗೆ ಹೋಗುತ್ತೇನೆ!'. ಕೊಳ್ಳುಬಾಕುತನ ಎನ್ನುವುದು ಸಂಪೂರ್ಣವಾಗಿ ಮನಸ್ಥಿತಿಗೆ ಹಾಗೂ ಮೌಲ್ಯಗಳಿಗೆ ಸಂಬಂಧಿಸಿದ ವಿಷಯ. ನಾವು ಮೌಲ್ಯಗಳಿಗೆ ಬೆಲೆ ಕೊಡಬೇಕು. ನಮಗೆ ಅತ್ಯಂತ ಅಗತ್ಯವಿರುವುದನ್ನು ಮಾತ್ರ ನಾವು ಹೊಂದುತ್ತೇವೆ ಎನ್ನುವ ಮೌಲ್ಯವನ್ನು ಅಳವಡಿಸಿಕೊಳ್ಳಬೇಕು. ನಮ್ಮ ಆಸೆಗಳಿಗೆ ಒಂದು ಬ್ರೇಕನ್ನು ನಾವು ಹಾಕಲೇಬೇಕಲ್ಲ? ಮೌಲ್ಯಗಳು ಯಾವಾಗಲೂ ನಮ್ಮ ಆಂತರಿಕ

ಸಾಮರ್ಥ್ಯವನ್ನು ಹೆಚ್ಚಿಸುತ್ತವೆ. ಇನ್ನೊಂದು ಪ್ರಮುಖ ವಿಷಯ ನಮ್ಮ ಮನಸ್ಥಿತಿಗೆ ಸಂಬಂಧಿಸಿದ್ದು. ಸಾಮಾನ್ಯವಾಗಿ ನಾವು ನಾವಾಗಿ ಇರಲು ಬಯಸುವುದಿಲ್ಲ, ಬೇರೊಬ್ಬರನ್ನು ಅನುಕರಿಸುತ್ತೇವೆ. ಅವರಂತೆಯೇ ಬದುಕಲು ಬಯಸುತ್ತೇವೆ, ನಮ್ಮದಲ್ಲದ ವ್ಯಕ್ತಿತ್ವವನ್ನು ತೋರಿಸಿಕೊಳ್ಳೋಕೆ ಹೋಗುತ್ತೇವೆ. ಅದರಿಂದ ಎಲ್ಲ ಸಮಸ್ಯೆಗಳೂ ಉದ್ಭವವಾಗುತ್ತವೆ. ಇಲ್ಲಸಲ್ಲದ ಕೊಳ್ಳುಬಾಕುತನ ನಮ್ಮಲ್ಲಿ ಆವರಿಸಿಕೊಳ್ಳುತ್ತದೆ. ಆದ್ದರಿಂದ ನಾವು ನಾವಾಗಿಯೇ ಇರಬೇಕು, ಅದರಲ್ಲಿ ಸಿಗುವ ಸಂತೋಷ ಅಷ್ಟಿಷ್ಟಲ್ಲ.

ನಾನು ಆಗಲೇ ಹೇಳಿದಂತೆ ಗಾಂಧಿಯವರು ಎಂದಿಗೂ ಸಹ ಇನ್ನೊಬ್ಬರನ್ನು ಅನುಕರಣೆ ಮಾಡಲಿಲ್ಲ. ಅವರು ತಮ್ಮದಲ್ಲದ ವ್ಯಕ್ತಿತ್ವವನ್ನು ಪ್ರದರ್ಶನ ಮಾಡಲು ಎಂದಿಗೂ ಪ್ರಯತ್ನಿಸಲಿಲ್ಲ. ಅವರು ಅವರಾಗೇ ಇದ್ದಿದ್ದರಿಂದ ನಮಗೆಲ್ಲ ಅವರು ಅಷ್ಟು ಇಷ್ಟ ಆದರು, ಅಲ್ವೇ?

❑

18 ಗಾಂಧಿಯವರಂತೆಯೇ ತಮ್ಮ ಮೇಲೆ ಪ್ರಭಾವ ಬೀರಿದ ಇನ್ನಿಬ್ಬರು ಮಹಾನ್ ಚೇತನರೆಂದರೆ ಡಾ. ಅಂಬೇಡ್ಕರ್ ಹಾಗೂ ವಿವೇಕಾನಂದ ಅವರು. ಇವರನ್ನು ತಾವು ಹೇಗೆ ವ್ಯಾಖ್ಯಾನಿಸುತ್ತೀರಿ?

ಒಂದು ಬೇಸರದ ವಿಷಯ ಎಂದರೆ ಕೆಲವರು ಅಂಬೇಡ್ಕರ್ ಅವರನ್ನು ಒಬ್ಬ ದಲಿತ ನಾಯಕ ಅಂತ ಹಣೆಪಟ್ಟಿ ಕಟ್ಟಿ ಸೀಮಿತಗೊಳಿಸಿದ್ದಾರೆ. ಆದರೆ ನಿಜಾರ್ಥದಲ್ಲಿ ಅವರೊಬ್ಬ ಸರ್ವ ರೀತಿಯಲ್ಲಿ ಶ್ರೇಷ್ಠ ರಾಷ್ಟ್ರನಾಯಕ. ನವ ಭಾರತದ ನಿರ್ಮಾತೃಗಳಲ್ಲಿ ಅಂಬೇಡ್ಕರ್ ಅವರು ಬಹಳ ಶ್ರೇಷ್ಠ ಪಂಕ್ತಿಯಲ್ಲಿ ನಿಲ್ಲುತ್ತಾರೆ. ಅವರೊಬ್ಬ ರಾಷ್ಟ್ರನಾಯಕರು. ಪ್ರಶ್ನಾತೀತ ರಾಷ್ಟ್ರೀಯ ನಾಯಕರು. ನಾವು ಅವರನ್ನು ದಲಿತ ನಾಯಕ ಅಂತ ಸೀಮಿತಗೊಳಿಸಿದರೆ, ಅದು ಅವರ ವ್ಯಕ್ತಿತ್ವಕ್ಕೆ ಅಗೌರವ ತೋರಿದಂತೆ ಅಂತ ನಾನು ಭಾವಿಸುತ್ತೇನೆ.

ಇನ್ನು ವಿವೇಕಾನಂದರ ಬಗ್ಗೆ ಹೇಳುವುದಾದರೆ ಅವರೊಬ್ಬ ಅಪ್ರತಿಮ ದೇಶಪ್ರೇಮಿ. ವಿವೇಕಾನಂದರು ನನಗೆ ಬಹಳ ವಿಶೇಷ ಎನಿಸುವುದು ಏಕೆಂದರೆ ಅವರು 'ಭಾರತೀಯ ರಾಷ್ಟ್ರೀಯತೆಯ ಪಿತಾಮಹ'. ಗಾಂಧಿಯವರು ಯಾವ ರೀತಿ ದೇಶದ ಪಿತಾಮಹರೋ, ಅಂಬೇಡ್ಕರ್ ಅವರು ಯಾವ ರೀತಿ ಸಂವಿಧಾನದ ಪಿತಾಮಹರೋ, ಅದೇ ರೀತಿ ಭಾರತೀಯ ರಾಷ್ಟ್ರೀಯತೆಯ ಪಿತಾಮಹ ಅಂದರೆ ವಿವೇಕಾನಂದರು. ಮನುಷ್ಯ ನಿರ್ಮಾಣವೇ ನಿಜವಾದ ರಾಷ್ಟ್ರ ನಿರ್ಮಾಣ ಎನ್ನುವ ಸಾರ್ವಕಾಲಿಕ ಕಲ್ಪನೆಯನ್ನು ವಿವೇಕಾನಂದರು ನಮಗೆ ಕೊಟ್ಟರು.

19

ಗಾಂಧಿಯವರು ಮತ್ತು ಅಂಬೇಡ್ಕರ್ ನಡುವೆ ಬಹಳಷ್ಟು ಭಿನ್ನಾಭಿಪ್ರಾಯಗಳು ಇದ್ದವು, ಆದ್ದರಿಂದ ಅವರಿಬ್ಬರೂ ಸೇರಿ ಕೆಲಸ ಮಾಡಲಿಲ್ಲ ಎನ್ನುವ ಬಗ್ಗೆ ಇತ್ತೀಚೆಗೆ ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ಇದರ ಬಗ್ಗೆ ತಾವು ಏನು ಹೇಳುತ್ತೀರಿ?

ದಾಖಲೆಗಳ ಪ್ರಕಾರ ಅವರಿಬ್ಬರ ನಡುವೆ ಭಿನ್ನಾಭಿಪ್ರಾಯಗಳು ಇದ್ದದ್ದು ನಿಜವಾದರೂ ಅದು ಕೇವಲ ವೈಚಾರಿಕ ಭಿನ್ನಾಭಿಪ್ರಾಯ ಮಾತ್ರವಾಗಿತ್ತು, ವೈಯಕ್ತಿಕ ಭಿನ್ನಾಭಿಪ್ರಾಯವಾಗಿರಲಿಲ್ಲ. ಅದಕ್ಕೆ ಕಾರಣವಾದದ್ದು 1931ರಲ್ಲಿ ನಡೆದ ಸೆಕೆಂಡ್ ರೌಂಡ್ ಟೇಬಲ್ ಕಾನ್ಫರೆನ್ಸ್. ಅದರಲ್ಲಿ ಅಂಬೇಡ್ಕರ್ ಅವರು ಗಾಂಧಿಯವರ ಜೊತೆಗೆ ಭಾಗವಹಿಸುತ್ತಾರೆ. ಅಲ್ಲಿ ಗಾಂಧಿಯವರ ಜೊತೆ ಅಂಬೇಡ್ಕರ್ ಅವರಿಗೆ ಒಂದು

ಚಿಕ್ಕ ವೈಚಾರಿಕ ಭಿನ್ನಾಭಿಪ್ರಾಯ ಉಂಟಾಗುತ್ತದೆ. ಇದಕ್ಕೆ ಕಾರಣ ಬ್ರಿಟಿಷರ ಒಡೆದು ಆಳುವ ನೀತಿ. ಇಲ್ಲಿ ನಾನು ಒಂದು ವಿಚಾರವನ್ನು ಹೇಳಲು ಬಯಸುತ್ತೇನೆ. ಗಾಂಧಿಯವರು ಮತ್ತು ಅಂಬೇಡ್ಕರ್ ಅವರ ನಡುವೆ ಅನೇಕ ರಾಷ್ಟ್ರೀಯ ವಿಚಾರಗಳ ಕುರಿತು ಮತಬೇಧಗಳಿದ್ದವು, ಆದರೆ ಯಾವತ್ತೂ ಕೂಡ ಮನ ಬೇಧ ಇರಲಿಲ್ಲ. ಒಬ್ಬರನ್ನೊಬ್ಬರು ಯಾವತ್ತೂ ದ್ವೇಷಿಸಲಿಲ್ಲ. ಎಲ್ಲರೂ ರಾಷ್ಟ್ರಕ್ಕೋಸ್ಕರ ದುಡಿಯಬೇಕು ಎನ್ನುವ ಮನಸ್ಥಿತಿ, ಇಬ್ಬರಲ್ಲೂ ಇತ್ತು.

20 ಭಾರತದ ಸಂವಿಧಾನದ ಬಗ್ಗೆ ಜನಸಾಮಾನ್ಯರಲ್ಲಿ ಹೆಚ್ಚು ಹೆಚ್ಚು ಅರಿವು ಮೂಡಿಸುವ ಅಗತ್ಯವಿದೆ ಎಂದು ಆಗಾಗ ಚರ್ಚೆಯಾಗುತ್ತಿದೆ. ಈ ಬಗ್ಗೆ ತಮ್ಮ ಅಭಿಪ್ರಾಯ...

ನಮ್ಮ ಸಂವಿಧಾನ, ನೂರಾರು ವರ್ಷದ ಸ್ವಾತಂತ್ರ್ಯ ಹೋರಾಟದ ಫಲವಾಗಿ ಇಂದು ನಮಗೆ ದೊರಕಿರುವ ಒಂದು ಮಹತ್ತರವಾದ ಗ್ರಂಥ. ಸಂವಿಧಾನ ರಚನೆ ಮಾಡುವ ಸಂದರ್ಭದಲ್ಲಿ ನಡೆದ ಚರ್ಚೆಗಳನ್ನೆಲ್ಲ ಒಂದು ಕಡೆ ದಾಖಲು ಮಾಡಿದ್ದಾರೆ. ಅವನ್ನೆಲ್ಲ ಓದುವುದೇ ಒಂದು ರೋಚಕ ಅನುಭವ. ನಮ್ಮ ಸಂವಿಧಾನ ರಚನೆಯ ಸಂದರ್ಭದಲ್ಲಿ ಪ್ರಪಂಚದ ಎಲ್ಲಾ ಸಂವಿಧಾನಗಳನ್ನು ಹೋಲಿಕೆ ಮಾಡಿ ಅಧ್ಯಯನ ಮಾಡುತ್ತಾರೆ. ಪ್ರತಿಯೊಂದು ಆರ್ಟಿಕಲ್‌ಗೂ ಬಹಳ ವಿವರವಾಗಿ ಚರ್ಚೆ

ಯಾಗುತ್ತದೆ. ಆಗಿನ ಕಾಲದಲ್ಲಿ ಅತ್ಯುತ್ತಮ ಮೇಧಾವಿಗಳೆಲ್ಲ ಇದರಲ್ಲಿ ತೊಡಗಿಕೊಳ್ಳುತ್ತಾರೆ. ಬಿ.ಆರ್. ಅಂಬೇಡ್ಕರ್, ಕರ್ನಾಟಕದವರಾದ ಬಿ.ಎನ್.ರಾವ್, ನಿಜಲಿಂಗಪ್ಪ, ಕೆಂಗಲ್ ಹನುಮಂತಯ್ಯ ಹೀಗೆ ಹಲವರು ಸಂವಿಧಾನ ರಚನಾ ಸಭೆಯಲ್ಲಿ ತಮ್ಮ ಚಿಂತನೆಗಳನ್ನು ಹಂಚಿಕೊಂಡಿದ್ದಾರೆ. ನಮ್ಮ ಸಂವಿಧಾನವು ಪ್ರಪಂಚದ ಅತಿ ದೊಡ್ಡ ಸಂವಿಧಾನ ಹಾಗೂ ಅತ್ಯುತ್ತಮ ಸಂವಿಧಾನ. ಮನುಷ್ಯನ ಅಸ್ತಿತ್ವಕ್ಕೆ ಗೌರವ ಕೊಡಬೇಕು, ಅವನಿಗೊಂದು ನೆಲೆ ಕೊಡಬೇಕು ಎನ್ನುವ ಆಶೋತ್ತರ ಇಟ್ಟುಕೊಂಡಿರುವ ಸಂವಿಧಾನ; ಅದನ್ನು ನಾವು ಯಾವತ್ತೂ ಕೂಡ ಎತ್ತಿಹಿಡಿಯಬೇಕು, ಗೌರವಿಸಬೇಕು. ನಮ್ಮ ಮುಂದಿನ ಪೀಳಿಗೆ ಸಂವಿಧಾನವನ್ನು ಗಟ್ಟಿಯಾಗಿ ಮುಂದೆ ನಡೆಸಿಕೊಂಡು ಹೋಗುವ ರೀತಿಯಲ್ಲಿ ನಾವೆಲ್ಲ ಮಾಡಬೇಕು. ಅದು ನಮ್ಮೆಲ್ಲರ ಕರ್ತವ್ಯ ಎಂದು ನಾನು ಅಂದುಕೊಂಡಿದ್ದೇನೆ. ಒಂದು ಸಂತೋಷ ಏನು ಎಂದರೆ ಪದವಿ ಕಾಲೇಜುಗಳಲ್ಲಿ ಈಗ ಸಂವಿಧಾನದ ಬಗ್ಗೆ ತರಗತಿಗಳನ್ನು ನಡೆಸಿ ಅರಿವು ಮೂಡಿಸುವ ಕೆಲಸ ಮಾಡುತ್ತಿದ್ದಾರೆ.

ನನ್ನ ಪ್ರಕಾರ, 'ನಮ್ಮ ಸಂವಿಧಾನವು ನಮ್ಮೆಲ್ಲರಿಗೂ ಭಗವದ್ಗೀತೆಯಾಗಬೇಕು, ಕುರಾನ್ ಆಗಬೇಕು ಹಾಗೂ ಬೈಬಲ್ ಆಗಬೇಕು'. ನಮ್ಮ ಧರ್ಮಗಳೆಲ್ಲವೂ ನಮ್ಮ ಖಾಸಗಿ ವಿಚಾರ. ಜಾತಿ ಖಾಸಗಿ ವಿಚಾರ. ಆದರೆ ನಾವು ನಮ್ಮ ಮನೆಯ ಹೊಸ್ತಿಲಿನಿಂದ ಹೊರಗೆ ಬಂದಾಗ ನಾವು ಭಾರತೀಯರು. ಭಗವದ್ಗೀತೆ, ಕುರಾನ್ ಹಾಗೂ ಬೈಬಲ್ ಇವೆಲ್ಲ ಧರ್ಮಗ್ರಂಥ ಗಳಾದರೆ ಸಂವಿಧಾನ ನಮ್ಮ ರಾಷ್ಟ್ರಗ್ರಂಥ. ಆದ್ದರಿಂದ ನಾವು ಮನೆಯ ಹೊಸ್ತಿಲಿಂದ ಹೊರಗೆ ಬಂದಮೇಲೆ ನಮಗೆ ಸಂವಿಧಾನವೇ ಪ್ರಮುಖವಾಗಬೇಕು. ಆದ್ದರಿಂದ ಪ್ರತಿಯೊಬ್ಬ ಭಾರತೀಯನೂ ಸಂವಿಧಾನವನ್ನು ಓದಿ, ಚೆನ್ನಾಗಿ ಅರ್ಥ ಮಾಡಿಕೊಂಡು, ಪಾಲಿಸುವುದು ಅತ್ಯಗತ್ಯ.

❑

21 ಭಾರತವು ಸ್ವಾತಂತ್ರ್ಯದ ಅಮೃತ ಮಹೋತ್ಸವವನ್ನು ಆಚರಿಸಿದೆ. ಈ ಕಾಲಘಟ್ಟದಲ್ಲಿ ಸಂವಿಧಾನದಲ್ಲಿರುವ ಯಾವ ಅಂಶ ನಮಗೆ ಹೆಚ್ಚು ಪ್ರೇರಣೆಯಾಗಬೇಕು ಅಂತ ತಮಗೆ ಅನ್ನಿಸುತ್ತದೆ?

ಈವರೆಗೆ ನಾವು ಸಂವಿಧಾನ ಕೊಟ್ಟಂತಹ ಹಕ್ಕುಗಳ ಬಗ್ಗೆ ಮಾತ್ರ ಪ್ರತಿಪಾದಿಸುತ್ತಾ ಬಂದಿದ್ದೇವೆ. ಕಳೆದ 75 ವರ್ಷಗಳಲ್ಲಿ ನಾವು ಹೆಚ್ಚು ಗಲಾಟೆ ಮಾಡಿದ್ದು ನಮ್ಮ ಹಕ್ಕುಗಳ ಬಗ್ಗೆ. ಆದರೆ ನಮ್ಮ ಸಂವಿಧಾನದಲ್ಲಿ ಆರ್ಟಿಕಲ್ 51 ಎ ಅಂತ ಇದೆ. ಅದರ ಅಡಿಯಲ್ಲಿ ಭಾರತೀಯ ಪ್ರಜೆಗಳ ಕರ್ತವ್ಯಗಳನ್ನು ನಮೂದಿಸಲಾಗಿದೆ, ಅದು ಬಹಳ ಮುಖ್ಯ. ಇಡೀ ಸಂವಿಧಾನದಲ್ಲಿ ಕರ್ತವ್ಯಗಳ ಬಗ್ಗೆ ಬಹಳ ಕಡಿಮೆ ಬರೆದಿದ್ದಾರೆ, ಉಳಿದೆಲ್ಲದರ ಬಗ್ಗೆ ವಿಸ್ತೃತವಾಗಿ ಇದೆ. ಬಹುಶಃ ಇದಕ್ಕೆ ಕಾರಣ

ವೇನೆಂದರೆ, ಸುಮಾರು ಇನ್ನೂರು ವರ್ಷಗಳ ಕಾಲ ಗುಲಾಮಗಿರಿಯಲ್ಲಿ ಇದ್ದಂತ ದೇಶ ನಮ್ಮದು. ಆ ನಂತರ ನಾವು ಸ್ವಾತಂತ್ರ್ಯಕ್ಕೆ ಕಣ್ಣು ಬಿಟ್ಟಂತವರು. ಇಂತಹ ಸಂದರ್ಭದಲ್ಲಿ ನಮ್ಮ ಹಕ್ಕುಗಳ ಬಗ್ಗೆ ನಮಗೆ ಸಹಜವಾಗಿ ಹೆಚ್ಚಿನ ಕಾಳಜಿ ಇರುತ್ತದೆ. ಆದರೆ ಸ್ವಾತಂತ್ರ್ಯ ಬಂದು 75 ವರ್ಷಗಳು ಕಳೆದ ನಂತರ ನಮ್ಮ ಇವತ್ತಿನ ಭಾರತಕ್ಕೆ ಅತ್ಯಂತ ಅವಶ್ಯಕವಾಗಿ ಬೇಕಾಗಿರುವಂತಹದ್ದು ಪ್ರಜೆಗಳ ಕರ್ತವ್ಯ. ನಮ್ಮ ಹಕ್ಕುಗಳಿಗಿಂತ ನಮ್ಮ ಕರ್ತವ್ಯಗಳ ಕಡೆ ನಾವು ಹೆಚ್ಚಿನ ಗಮನ ಹರಿಸಬೇಕು. ನಾನು ಇನ್‌ಸ್ಟಿಟ್ಯೂಷನ್ ಆಫ್ ಇಂಜಿನಿಯರಿಂಗ್ ಅಧ್ಯಕ್ಷನಾಗಿ ಕಾರ್ಯ ನಿರ್ವಹಿಸಿದ್ದೆ. ಅದರ ಆವರಣದಲ್ಲಿ ಸರ್ ಎಂ. ವಿಶ್ವೇಶ್ವರಯ್ಯನವರ ಪ್ರತಿಮೆಯೊಂದು ರಸ್ತೆಗೆ ಮುಖ ಮಾಡಿ ಸ್ಥಾಪಿಸಲಾಗಿದೆ. ಆ ಪ್ರತಿಮೆಯ ಪಕ್ಕದಲ್ಲೇ ನಾವು ಆರ್ಟಿಕಲ್ 51 ಎ ಅನ್ನು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಕಲ್ಲಿನ ಶಿಲೆಯಲ್ಲಿ ಕೆತ್ತಿಸಿದ್ದೆವು. ಸಾಮಾನ್ಯ ಜನರಿಗೆ ನಮ್ಮ ಕರ್ತವ್ಯಗಳ ಬಗ್ಗೆ ಹೆಚ್ಚು ಹೆಚ್ಚು ಅರಿವಾಗಬೇಕು ಎಂದು ಹೀಗೆ ಮಾಡಿದ್ದೆವು.

❑

ಶಿಕ್ಷಣ ಕ್ಷೇತ್ರ

22 ತಾವು ಶಿಕ್ಷಣ ಕ್ಷೇತ್ರಕ್ಕೆ ಪ್ರವೇಶಿಸಲು ಏನು ಪ್ರೇರಣೆ ?

ಶಿಕ್ಷಣ ಕ್ಷೇತ್ರದಲ್ಲಿ ನನಗೆ ಮೂಲತಃ ಪ್ರೇರಣೆ ಬಂದದ್ದು ಸ್ವಾಮಿ ವಿವೇಕಾನಂದರ ಶೈಕ್ಷಣಿಕ ಚಿಂತನೆಗಳಿಂದ. ಪ್ರಾಯಶಃ ಕಳೆದ ನೂರು ವರ್ಷಗಳ ನಮ್ಮ ಭಾರತೀಯ ಇತಿಹಾಸದಲ್ಲಿ ವಿವೇಕಾನಂದರು ಶಿಕ್ಷಣದ ಬಗ್ಗೆ ಕೊಟ್ಟ ಚಿಂತನೆಯನ್ನು ಯಾರೂ ಕೊಟ್ಟಿಲ್ಲ. 'ಒಂದು ದೇಶವನ್ನು ಸುಧಾರಿಸಲು ಶಿಕ್ಷಣ ಬಿಟ್ಟರೆ ಬೇರೆ ಮಾರ್ಗವೇ ಇಲ್ಲ' ಎನ್ನುವ ಮಾತನ್ನು ಅವರು ಹೇಳಿದ್ದರು. ಅವರು 'ಮ್ಯಾನ್ ಮೇಕಿಂಗ್ ಎಜುಕೇಶನ್, ನೇಷನ್ ಬಿಲ್ಡಿಂಗ್ ಎಜುಕೇಶನ್' ಎನ್ನುವ ಮಾತನ್ನು ಬಳಸುತ್ತಾರೆ. ಎಂತಹ ಅದ್ಭುತ ಪದಗಳು ಅವು. ಮನುಷ್ಯ ನಿರ್ಮಾಣದ ಶಿಕ್ಷಣ ಹಾಗೂ ರಾಷ್ಟ್ರ ನಿರ್ಮಾಣದ ಶಿಕ್ಷಣ ಇವತ್ತು ಬಹಳ

ಅವಶ್ಯಕವಾಗಿ ಬೇಕಾಗಿರುವಂತಹದ್ದು, ಎಂದೆಂದಿಗೂ ಬೇಕಾಗಿರುವಂತಹದ್ದು. ವಿವೇಕಾನಂದರು ಬದುಕಿದ್ದು ಕೇವಲ 39 ವರ್ಷ. ಆದರೆ ಅವರಿಗೆ ಎಂತಹ ದೂರದೃಷ್ಟಿ ಇತ್ತು! ಈ ದೇಶದ ಬಗ್ಗೆ, ನಮ್ಮ ಜನರ ಬಗ್ಗೆ ಎಷ್ಟೊಂದು ಅದ್ಭುತ ಕಲ್ಪನೆ ಇತ್ತು! ಶಿಕ್ಷಣದಿಂದಲೇ ಆಮೂಲಾಗ್ರ ಬದಲಾವಣೆ ತರಲು ಸಾಧ್ಯ ಎನ್ನುವ ಕಲ್ಪನೆಯನ್ನು ಅವರು ನಮ್ಮ ಮುಂದೆ ಇಟ್ಟರು. ಅವರ ಚಿಂತನೆಗಳನ್ನು ಓದಿ ನಾನೂ ಸಹ ಪ್ರೇರೇಪಣೆ ಪಡೆದುಕೊಂಡೆ. ಸಮಾಜಕ್ಕೆ ಏನಾದರೂ ನಾವು ಮಾಡುವುದಾದರೆ, ಶಿಕ್ಷಣದ ಮೂಲಕ ಮಾಡಿದರೆ ಹೆಚ್ಚು ಪ್ರಭಾವಶಾಲಿ ಆಗುತ್ತದೆ ಎನ್ನುವುದು ಅವರ ಚಿಂತನೆಯಿಂದ ನನಗೆ ಅರಿವಾಯಿತು. ಆದ್ದರಿಂದ ನಾನು ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡೆ. ಇವತ್ತು ನಾನು ಶೇಷಾದ್ರಿಪುರಂನ ಶಿಕ್ಷಣ ಸಂಸ್ಥೆಯಲ್ಲಿ ಸುಮಾರು ಎರಡು ದಶಕಗಳಿಂದ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ಕಳೆದ 20, 25 ವರ್ಷಗಳಲ್ಲಿ ಶಿಕ್ಷಣ ಕ್ಷೇತ್ರದಿಂದ ನನಗೆ ಸಾಕಷ್ಟು ತೃಪ್ತಿ ಸಿಕ್ಕಿದೆ, ಆನಂದವೂ ಸಿಕ್ಕಿದೆ.

❑

23 **ಇಂದು ಎಲ್ಲ ಕಡೆ ಶಿಕ್ಷಣ ವ್ಯಾಪಾರೀಕರಣ ವಾಗಿದೆ ಎನ್ನುವ ಮಾತು ಕೇಳಿ ಬರುತ್ತಿದೆ. ಇಂತಹ ಸಂದರ್ಭದಲ್ಲಿ ನಿವ್ಮ್ಮ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆ ಯಾವ ರೀತಿ ವಿಭಿನ್ನವಾಗಿ ಕಾರ್ಯನಿರ್ವಹಿಸುತ್ತಿದೆ?**

ನಮ್ಮ ಶೇಷಾದ್ರಿಪುರಂ ವಿದ್ಯಾಸಂಸ್ಥೆ ಸ್ಥಾಪನೆಯಾದದ್ದೇ ಶಿಕ್ಷಣದ ವ್ಯಾಪಾರೀಕರಣ ತಡೆಗಟ್ಟಲು. ನಮ್ಮದು 90 ವರ್ಷ ಇತಿಹಾಸ ಇರುವಂತಹ ಸಂಸ್ಥೆ. ಈ ಸಂಸ್ಥೆಯನ್ನು ಸ್ಥಾಪನೆ ಮಾಡಿದವರು ಆನಂದಮ್ಮ ಮತ್ತು ಸೀತಮ್ಮ ಎನ್ನುವ ಇಬ್ಬರು ಮಹಿಳೆಯರು. ಆ ಕಾಲಕ್ಕೇ ಅವರು ಪದವೀಧರರಂತೆ. 1930ರಲ್ಲಿ ಮಂಗಳೂರು ಹೆಂಚಿನ ಎರಡು ರೂಮಿನಲ್ಲಿ, ಈಗಿರುವ ನಮ್ಮ ಶೇಷಾದ್ರಿಪುರಂ ಮುಖ್ಯ ಕಾಲೇಜಿನ ಕ್ಯಾಂಪಸ್‌ನಲ್ಲಿ, 20 ಮಕ್ಕಳನ್ನು ದಾಖಲೆ ಮಾಡಿಕೊಂಡು ಅವರೊಂದು ಶಾಲೆಯನ್ನು

ಪ್ರಾರಂಭ ಮಾಡುತ್ತಾರೆ. ಆ ಮಕ್ಕಳಿಗೆ ಶಿಕ್ಷಣ ಕೊಡುತ್ತಾ ಬರುತ್ತಾರೆ. ಅದೇ ಸಂಸ್ಥೆ ಇವತ್ತು 24 ಸಾವಿರ ವಿದ್ಯಾರ್ಥಿಗಳಿಗೆ ಶಿಕ್ಷಣ ಕೊಡುತ್ತಿದೆ. 34 ಸಂಸ್ಥೆಗಳ ಮೂಲಕ ಸುಮಾರು ಸಾವಿರದ ಮುನ್ನೂರು ಸಿಬ್ಬಂದಿ ನಮ್ಮಲ್ಲಿದ್ದಾರೆ. ನಾಲ್ಕು ಜಿಲ್ಲೆಗಳಲ್ಲಿ ನಮ್ಮ ಸಂಸ್ಥೆ ಅಸ್ತಿತ್ವ ಹೊಂದಿದೆ. ಮೈಸೂರು, ಮಂಡ್ಯ, ತುಮಕೂರು, ಬೆಂಗಳೂರು ಎಲ್ಲಾ ಕಡೆ ನಮ್ಮ ವಿದ್ಯಾಸಂಸ್ಥೆಗಳಿವೆ. ಇವೆಲ್ಲ ಹೇಗೆ ಸಾಧ್ಯವಾಗಿದ್ದು ಎಂದರೆ ಅವರ ಪ್ರಾಮಾಣಿಕತೆಯಿಂದ. ಅವರು ಸದ್ಭಾವನೆಯಿಂದ ಪ್ರಾರಂಭ ಮಾಡಿದ್ದಕ್ಕೇ ಇವತ್ತು ಈ ಶಿಕ್ಷಣ ಸಂಸ್ಥೆ ಇಷ್ಟು ಎತ್ತರಕ್ಕೆ ಬೆಳೆದಿದೆ. ಎಲ್ಲರಿಗೂ ಕೈಗೆಟಕುವ ಬೆಲೆಯಲ್ಲಿ ಗುಣಮಟ್ಟದ ಶಿಕ್ಷಣ ಕೊಡಬೇಕು ಎನ್ನುವ ಆಶಯದಿಂದ ಅವರು ಈ ಸಂಸ್ಥೆಯನ್ನು ಪ್ರಾರಂಭ ಮಾಡಿದರು. ಸಮಾಜಕ್ಕೆ ಉಪಯುಕ್ತವಾಗುವಂತಹ ನಾಗರಿಕರನ್ನು ತಯಾರು ಮಾಡಬೇಕು ಎನ್ನುವುದು ನಮ್ಮ ಶಿಕ್ಷಣ ಸಂಸ್ಥೆಯ ಮುಖ್ಯ ಉದ್ದೇಶ. ಸಮಾಜಕ್ಕೆ ಅವರಿಂದ ಸ್ವಲ್ಪವೂ ಪ್ರಯೋಜನ ಆಗದಿದ್ದರೆ ಅವರು ಶಿಕ್ಷಣ ಪಡೆದು ಏನು ಪ್ರಯೋಜನ? ಶಿಕ್ಷಣ ಎಂದರೆ ಪದವಿ ಪಡೆದುಕೊಂಡು, ಉದ್ಯೋಗ ಗಿಟ್ಟಿಸಿಕೊಂಡು ಬದುಕುವುದು ಅಷ್ಟೇ ಅಲ್ಲ, ಸಮಾಜದಲ್ಲಿ ಅವರನ್ನು ಗುರುತಿಸಬೇಕು; ಅವರು ಇಂಥ ಕಡೆ ಓದಿದ್ದರು ಎನ್ನಬೇಕು. ಆತ ರೈತನಾಗಬಹುದು, ವ್ಯಾಪಾರಿಯಾಗಬಹುದು, ಶಿಕ್ಷಕನಾಗಬಹುದು ಅಥವಾ ಮ್ಯಾನೇಜರ್ ಆಗಬಹುದು. ಮುಖ್ಯವಾಗಿ ಅವನೊಬ್ಬ ಒಳ್ಳೆಯ ವ್ಯಕ್ತಿ ಎನಿಸಿಕೊಳ್ಳಬೇಕು, ಆಗಲೇ ಸಮಾಜ ಆತನನ್ನು ಗುರುತಿಸೋದು. ಆ ರೀತಿ ವಿದ್ಯಾರ್ಥಿಗಳನ್ನು ತಯಾರು ಮಾಡಬೇಕು ಎನ್ನುವುದು ನಮ್ಮ ಧ್ಯೇಯ. ವಿದ್ಯಾರ್ಥಿಗಳು ಮುಂದೆ ಏನಾಗುತ್ತಾರೆ ಎನ್ನುವುದು ಅವರಿಗೆ ಬಿಟ್ಟಿದ್ದು, ಅವರವರ ಸಾಮರ್ಥ್ಯಕ್ಕೆ ಬಿಟ್ಟಿದ್ದು. ಆದರೆ ಅವರ ಮೂಲಭೂತ ಶಿಕ್ಷಣ ಮೌಲ್ಯಯುತವಾಗಿರಬೇಕು ಅನ್ನುವಂಥದ್ದು ನಮ್ಮ ಉದ್ದೇಶ.

❑

24 ತಾವು ಪ್ರಧಾನ ಕಾರ್ಯದರ್ಶಿಯಾಗಿ ಬಂದಮೇಲೆ ನಿಮ್ಮ ಶಿಕ್ಷಣ ಸಂಸ್ಥೆ ಸಾಕಷ್ಟು ಅಭಿವೃದ್ಧಿಯನ್ನು ಕಂಡಿದೆ. ಶಿಕ್ಷಣ ಸಂಸ್ಥೆಯ ಅಭಿವೃದ್ಧಿಯ ನಿಮ್ಮ ಫಾರ್ಮುಲಾ ಎನು?

ನಮ್ಮಲ್ಲಿ ವಿದ್ಯಾರ್ಥಿ ಶುಲ್ಕ ಏರಿಕೆ ಮಾಡುವುದಕ್ಕೆ ಮೊದಲು ನಾವು ಬಹಳಷ್ಟು ಚಿಂತನೆ ಮಾಡುತ್ತೇವೆ. ಹಲವಾರು ಮೀಟಿಂಗ್‌ಗಳನ್ನು ಮಾಡುತ್ತೇವೆ. ಏಕೆಂದರೆ ಶುಲ್ಕ ಏರಿಕೆ ಯಾವ ರೀತಿ ಇರಬೇಕು ಎಂದರೆ ಪಾಲಕರಿಗೆ ಹಾಗೂ ಮಕ್ಕಳಿಗೆ ಅದು ಹೊರೆಯಾಗಬಾರದು. ಅದೇ ಸಮಯಕ್ಕೆ ನಮಗೆ ಶಿಕ್ಷಣ ಸಂಸ್ಥೆ ನಡೆಸಲೂ ಸಹ ಕೊರತೆ ಆಗಬಾರದು. ನಮ್ಮದು ಲಾಭಕ್ಕೋಸ್ಕರ ನಡೆಸುವ ಸಂಸ್ಥೆಯಲ್ಲ. ಕಾನೂನಿನ ಪ್ರಕಾರ ಎಲ್ಲ ಖರ್ಚುವೆಚ್ಚಗಳನ್ನು ತೆಗೆದು, 25% ಹೆಚ್ಚಿಗೆ ಹಣವನ್ನು ಶುಲ್ಕವಾಗಿ

ತೆಗೆದುಕೊಳ್ಳಬಹುದು. ಶಿಕ್ಷಣ ಸಂಸ್ಥೆಯ ಅಭಿವೃದ್ಧಿ, ನಿರ್ವಹಣೆ ಆಗಬೇಕಲ್ಲ? ಇದನ್ನು ನಾವು ಚಾಚೂ ತಪ್ಪದೆ ಪಾಲಿಸಿಕೊಂಡು ಬಂದಿದ್ದೇವೆ. ಹಾಗಾಗಿ ನಮ್ಮಲ್ಲಿ ಸಾಮಾನ್ಯವಾಗಿ ಒಂದೇ ಒಂದು ಸೀಟು ಕೂಡ ಖಾಲಿ ಇರುವುದಿಲ್ಲ. ಎಲ್ಲಾ ವಿದ್ಯಾಸಂಸ್ಥೆಗಳು ಫುಲ್ ಆಗಿರುತ್ತವೆ. ಇದಕ್ಕೆ ಕಾರಣ ಎಟಕುವ ಬೆಲೆಯಲ್ಲಿ ಶಿಕ್ಷಣ ಕೊಡುವ ನೀತಿಯನ್ನು ನಾವು ಪಾಲಿಸುತ್ತಿರುವುದು. ಜನರನ್ನು ನಾವು ಸುಲಿಗೆ ಮಾಡುತ್ತಾ ಹೋದರೆ ಏನು ಪ್ರಯೋಜನ? ಒಳ್ಳೆಯ ಶಿಕ್ಷಣ ಸಂಸ್ಥೆ ಕಟ್ಟಲು ಪಂಚತಾರಾ ಮೂಲಸೌಕರ್ಯದ ಅವಶ್ಯಕತೆ ಇಲ್ಲ. ದೊಡ್ಡ ದೊಡ್ಡ ಆಕರ್ಷಕ ಕಟ್ಟಡಗಳನ್ನು ಕಟ್ಟಿಬಿಟ್ಟರೆ ಅತ್ಯುತ್ತಮ ಶಿಕ್ಷಣ ಸಂಸ್ಥೆ ನಿರ್ಮಾಣವಾಗುವುದಿಲ್ಲ. ಒಂದು ಉತ್ತಮ ಶಿಕ್ಷಣ ಸಂಸ್ಥೆಯ ಮೂಲ ಅವಶ್ಯಕತೆ ಎಂದರೆ ಗುಣಮಟ್ಟದ ಶಿಕ್ಷಕರು. ಅಂತಹ ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡಿ, ಅವರಿಗೆ ಕೆಲಸ ಮಾಡಲು ಹಿತಕರ ವಾತಾವರಣ ಕಲ್ಪಿಸಿ, ಅವರಿಂದ ಉತ್ತಮ ಕೆಲಸ ತೆಗೆಸುವುದು ಶಿಕ್ಷಣ ಸಂಸ್ಥೆಯವರ ಕರ್ತವ್ಯ. ನಾವು ಆ ಕೆಲಸವನ್ನು ಮಾಡುತ್ತಿದ್ದೇವೆ ಎನ್ನುವುದು ನನ್ನ ಭಾವನೆ. ಏಕೆಂದರೆ ನಮ್ಮಲ್ಲಿ ಹಲವರು ತುಂಬಾ ವರ್ಷಗಳಿಂದ ಕೆಲಸ ಮಾಡುತ್ತಿದ್ದಾರೆ. ನಮ್ಮ ಸಂಸ್ಥೆಯನ್ನು ಬಿಟ್ಟು ಹೋಗುವವರ ಪ್ರಮಾಣ ತುಂಬಾ ಕಡಿಮೆ ಇದೆ. ನಮ್ಮ ಸಂಸ್ಥೆಯ ಅಧ್ಯಕ್ಷರಾಗಿದ್ದ ಕೆ.ಎಂ.ನಂಜಪ್ಪನವರು ಯಾವಾಗಲೂ ಒಂದು ಮಾತು ಹೇಳುತ್ತಿದ್ದರು– 'ಕೃಷ್ಣ ಅವರೇ, ಇರುವವರನ್ನು ಸಂತೋಷದಿಂದ ಇರಿಸಿ. ಹೋಗುವವರನ್ನು ಸಂತೋಷದಿಂದ ಕಳಿಸಿಕೊಡಿ'. ಶಿಕ್ಷಕರು ಸಂತೋಷವಾಗಿದ್ದರೆ ಸಂಸ್ಥೆ ಚೆನ್ನಾಗಿರುತ್ತದೆ. ಒಬ್ಬ ಸಂತೋಷವಾಗಿರುವ ಶಿಕ್ಷಕ, ಒಂದು ಸಂಸ್ಥೆಯನ್ನು ಸಂತೋಷವಾಗಿಡಬಲ್ಲ.

ಇನ್ನೊಂದು ಬಹಳ ಮುಖ್ಯ ವಿಷಯ ಅಂದರೆ, ನಾವು ಮ್ಯಾನೇಜ್‌ಮೆಂಟಿನವರು ದಿನನಿತ್ಯದ ಅಕಾಡೆಮಿಕ್ ವಿಷಯಗಳಲ್ಲಿ ತಲೆ ಹಾಕುವುದಿಲ್ಲ. ಏನಾದರೂ ಸಮಸ್ಯೆ ಬಂದರೆ ಮಾತ್ರ ನಾವು ಮಧ್ಯ ಪ್ರವೇಶಿಸುತ್ತೇವೆ. ಏಕೆಂದರೆ ಶಿಕ್ಷಕ ವೃತ್ತಿಗೆ ಅದರದ್ದೇ ಆದ ಗೌರವವಿದೆ. ಅವರನ್ನು ನಾವು ಗೌರವಿಸಬೇಕು. ಅವರ ಸ್ವಾತಂತ್ರ್ಯಕ್ಕೆ ನಾವು ಅಡ್ಡಿ ತರಬಾರದು ಎನ್ನುವುದು ನನ್ನ ಭಾವನೆ. ಏಕೆಂದರೆ ನಾನೂ ಕೂಡ ಎರಡು ವರ್ಷ ಶಿಕ್ಷಕನಾಗಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಪಾಠ ಮಾಡಿದ್ದೆ. ಆದ್ದರಿಂದ ಶಿಕ್ಷಕರ ಮನಸ್ಥಿತಿ ನನಗೆ ಗೊತ್ತಿದೆ.

ನಮ್ಮ ಶಿಕ್ಷಣ ಸಂಸ್ಥೆಯ ವ್ಯವಸ್ಥೆ ಸಂಪೂರ್ಣವಾಗಿ ಪಾರದರ್ಶಕವಾಗಿದೆ. ನಾವು ಒಂದು ರೂಪಾಯಿಯನ್ನೂ ಸಹ ಕ್ಯಾಶ್ ರೂಪದಲ್ಲಿ ಸ್ವೀಕರಿಸುವುದಿಲ್ಲ. ಪ್ರತಿಯೊಂದು ರೂಪಾಯಿ ಹಣವನ್ನೂ ಸರಿಯಾಗಿ ಲೆಕ್ಕ ಇಡುತ್ತೇವೆ. ಇದು ನಮ್ಮ ಶಿಕ್ಷಣ ಸಂಸ್ಥೆಯಲ್ಲಿ ಎಲ್ಲರಿಗೂ ಗೊತ್ತಿರುವ ವಿಚಾರ. ಅದರಿಂದ ಯಾರೂ ಕೂಡ ಆಡಳಿತ ಮಂಡಳಿಯನ್ನು ಸಂದೇಹದಿಂದ ನೋಡುವ ಪ್ರಮೇಯವೇ ಉದ್ಭವಿಸುವುದಿಲ್ಲ. ನಾವೆಲ್ಲ ಒಂದು ಕುಟುಂಬದ ರೀತಿಯಲ್ಲಿ ಸಂಸ್ಥೆಯನ್ನು ನಡೆಸಿಕೊಂಡು ಹೋಗುತ್ತಿದ್ದೇವೆ. ವರ್ಷಕ್ಕೊಮ್ಮೆ ನಾವು ಸ್ನೇಹ ಸಮ್ಮಿಲನ ಎನ್ನುವ ಒಂದು ಕಾರ್ಯಕ್ರಮ ಮಾಡುತ್ತೇವೆ. ಮ್ಯಾನೇಜ್ಮೆಂಟು, ಇಡೀ ಸ್ಟಾಫ್ ಎಲ್ಲರೂ ಕೂಡ ಒಂದು ಕಡೆ ಸೇರುತ್ತೇವೆ. ಬೆಳಿಗ್ಗೆಯಿಂದ ಮಧ್ಯಾಹ್ನದವರೆಗೆ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ, ಒಟ್ಟಿಗೇ ಊಟ ಮಾಡುತ್ತೇವೆ. ನಾನು ಯಾಕೆ ಈ ವಿಷಯ ಹೇಳುತ್ತಿದ್ದೇನೆ ಎಂದರೆ, ಈ ರೀತಿಯಾದಂತಹ ಒಂದು ಕೌಟುಂಬಿಕ ವಾತಾವರಣ ಬೆಳೆಸೋದು ಸಂಸ್ಥೆಯು ಉತ್ತಮವಾಗಿ ಕೆಲಸ ಮಾಡಲು ಬಹಳ ಅವಶ್ಯ. □

25 ನಿಮ್ಮ ಶೇಷಾದ್ರಿಪುರಂ ವಿದ್ಯಾಸಂಸ್ಥೆ ಯಾವ ರೀತಿ ವಿಭಿನ್ನವಾಗಿದೆ ಅಂತ ನಿಮಗೆ ಅನ್ನಿಸುತ್ತದೆ? ನಿಮ್ಮ ಪ್ರಮುಖ ವಿಶೇಷತೆಗಳೇನು?

ಧರ್ಮಸ್ಥಳದ ಧರ್ಮಾಧಿಕಾರಿ ಡಾ. ವೀರೇಂದ್ರ ಹೆಗ್ಗಡೆಯವರು ನಮ್ಮ ಪ್ರೌಢಶಾಲೆಯ ಹಳೆಯ ವಿದ್ಯಾರ್ಥಿಗಳು. ರಾಮಕೃಷ್ಣ ಮಠದ ಹಿರಿಯ ಸಂತರು, ಉಪಾಧ್ಯಕ್ಷರಾದ ಸ್ವಾಮಿ ಗೌತಮಾನಂದರು ನಮ್ಮ ಹಳೆಯ ವಿದ್ಯಾರ್ಥಿಗಳು. ಬರೀ ಆಧ್ಯಾತ್ಮ ಒಂದೇ ಅಲ್ಲ, ಎಲ್ಲಾ ಕ್ಷೇತ್ರಗಳಲ್ಲೂ ನಮ್ಮ ವಿದ್ಯಾರ್ಥಿಗಳಿದ್ದಾರೆ. ಕಾರಣ ಏನು ಅಂದರೆ, ನಾವು ಅವರಿಗೆ ನಾಯಕತ್ವ ಗುಣ ಬೆಳೆಸುವುದಕ್ಕೆ ಸಹಾಯ ಮಾಡುತ್ತಿದ್ದೇವೆ. ವಿದ್ಯಾರ್ಥಿಗಳು ಬರಿ ಪದವೀಧರರಾಗಿ ಹೊರ ಹೋಗುವುದು ನಮ್ಮ ಗುರಿ

ಅಲ್ಲ. ವಿಶ್ವದೃಷ್ಟಿಯನ್ನು ಅವರು ಬೆಳೆಸಿಕೊಳ್ಳಬೇಕು. ಅವರು ಗ್ಲೋಬಲ್ ಸಿಟಿಜನ್ ಆಗಬೇಕು. ಅವರು ಯಾವುದೇ ಪ್ರದೇಶಕ್ಕೆ ಹೋದರೂ, ಯಾವುದೇ ಸಂಸ್ಕೃತಿಗೆ, ಯಾವುದೇ ವ್ಯವಸ್ಥೆಗೆ ಹೋದರೂ ಅವರು ಅಲ್ಲಿ ಮಿಂಚಬೇಕು. ಆ ರೀತಿ ಅವರನ್ನು ತಯಾರು ಮಾಡಬೇಕೆನ್ನುವುದು ನಮ್ಮ ಗುರಿ.

ಎರಡನೆಯ ಪ್ರಮುಖ ವಿಷಯ ಎಂದರೆ, ಅವಕಾಶಗಳನ್ನು ತಮಗೆ ತಾವೇ ಸೃಷ್ಟಿ ಮಾಡಿಕೊಳ್ಳುವ ಮನಸ್ಥಿತಿಯನ್ನು ವಿದ್ಯಾರ್ಥಿಗಳಲ್ಲಿ ಬೆಳೆಸಬೇಕು. ಇವತ್ತು ನೋಡಿ ಎಲ್ಲರೂ ನೌಕರಿ ಬೇಕು, ನಾನು ಅಲ್ಲಿ ಹೋಗಬೇಕು, ಆ ಕೆಲಸಕ್ಕೆ ಸೇರಬೇಕು, ಈ ಕೆಲಸಕ್ಕೆ ಸೇರಬೇಕು; ಇದೇ ತರಹದ ಮಾತುಗಳನ್ನು ಆಡುತ್ತಾರೆ, ಇದೂ ಸಹ ಮುಖ್ಯವೇ. ಆದರೆ ನಾವು ಅವಕಾಶಗಳನ್ನು ತಮಗೆ ತಾವೇ ಸೃಷ್ಟಿ ಮಾಡಿಕೊಳ್ಳುವ ವಿದ್ಯಾರ್ಥಿಗಳನ್ನು ಬೆಳೆಸುವುದಕ್ಕೆ ಹೆಚ್ಚು ಒತ್ತು ಕೊಡುತ್ತೇವೆ. 'ನಾನು ಇನ್ನೊಬ್ಬರ ಬಳಿ ಉದ್ಯೋಗ ಅರಸಿ ಹೋಗುವುದಲ್ಲ. ನನ್ನನ್ನು ಜನ ಹುಡುಕಿಕೊಂಡು ಬರಬೇಕು. ನನಗೆ ಕೆಲಸ ಕೊಡು ಎಂದು ಬರಬೇಕು' ಎನ್ನುವ ಮನೋಭಾವವನ್ನು ಯುವಕರಲ್ಲಿ ಬೆಳೆಸಬೇಕು ಎಂಬ ಆಸೆ ನಮ್ಮದು. ನಾಯಕತ್ವ ಗುಣ ಬೆಳೆಸಲು ಬೇಕಾಗುವ ಎಲ್ಲಾ ಕಾರ್ಯಕ್ರಮಗಳಿಗೆ ನಮ್ಮ ಆಡಳಿತ ಮಂಡಳಿ ಪ್ರೇರಣೆ ಕೊಡುತ್ತಿದೆ. ಅವರಿಗೆ ಎಲ್ಲ ಸಹಕಾರ ಕೊಡುತ್ತಿದೆ. ನಾನು ಈಗಾಗಲೇ ಹೇಳಿದಂತೆ ಸಮಾಜಕ್ಕೆ ಉಪಯೋಗವಾಗುವ ನಾಗರಿಕರನ್ನು ತಯಾರು ಮಾಡಬೇಕು ಎನ್ನುವ ದೊಡ್ಡ ಉದ್ದೇಶವನ್ನು ನಾವು ಇಟ್ಟುಕೊಂಡಿದ್ದೇವೆ. ಆ ನಿಟ್ಟಿನಲ್ಲಿ ನಮ್ಮ ಸಂಸ್ಥೆಗಳು ಕೆಲಸ ಮಾಡುತ್ತಿವೆ.

❑

26 ಶೇಷಾದ್ರಿಪುರಂ ಶಿಕ್ಷಣ ದತ್ತಿಯ ಅಡಿಯಲ್ಲಿ ಕೆಲಸ ಮಾಡುವ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥರಿಗೆ ಯಾವ ರೀತಿ ತಾವು ಮಾರ್ಗದರ್ಶನ ನೀಡುತ್ತೀರಿ ?

ಮಾರ್ಗದರ್ಶನ ಎನ್ನುವುದಕ್ಕಿಂತ ನಾವು ಅವರಿಗೆ ಉತ್ತಮ ಕೆಲಸ ಮಾಡಲು ಬಿಟ್ಟುಬಿಡುತ್ತೇವೆ. ನಾವು ಅವರ ಜೊತೆ ಚರ್ಚಿಸಿ, ಸಹಕಾರ ನೀಡುತ್ತೇವೆ. ಆದರೆ ಒಂದು ಪ್ರಮುಖ ವಿಷಯ ಎಂದರೆ ಸಂಸ್ಥೆಯ ಆಡಳಿತ ದೃಷ್ಟಿಯಿಂದ ಕೆಲ ಚೌಕಟ್ಟುಗಳಿವೆ. ಅವುಗಳನ್ನು ಎಲ್ಲ ಶಿಕ್ಷಣ ಸಂಸ್ಥೆಯ ಮುಖ್ಯಸ್ಥರು ಪಾಲಿಸಬೇಕು. ಆ ವಿಷಯದಲ್ಲಿ ಮಾತ್ರ ನಾವು ಕಟ್ಟುನಿಟ್ಟಾಗಿರುತ್ತೇವೆ. ನಮ್ಮ ಎಲ್ಲ ಶಿಕ್ಷಣ ಸಂಸ್ಥೆಗಳೂ ಉತ್ತಮ ಫಲಿತಾಂಶ ನೀಡುತ್ತಿವೆ. ನಮ್ಮ ಸಂಸ್ಥೆಯಲ್ಲಿ ಕಲಿತು ಹೊರಹೋದ ವಿದ್ಯಾರ್ಥಿಗಳು ಕೊಡುವ ಫೀಡ್ ಬ್ಯಾಕ್ ಇದೆಯಲ್ಲ, ಅದು ನಮಗೆ ತೃಪ್ತಿಯನ್ನು ತಂದುಕೊಡುತ್ತದೆ.

27 ಶೇಷಾದ್ರಿಪುರಂ ವಿದ್ಯಾ ಸಂಸ್ಥೆಯಲ್ಲಿ ಇಷ್ಟು ವರ್ಷದಿಂದ ಕಾರ್ಯ ನಿರ್ವಹಿಸುತ್ತಿದ್ದೀರಿ. ಈ ಶಿಕ್ಷಣ ಸಂಸ್ಥೆಗೆ ಸಂಬಂಧಿಸಿದಂತೆ ತಮ್ಮದೇನಾದರೂ ಕನಸಿದೆಯಾ?

ನನಗೊಂದು ಆಸೆಯಿದೆ. ನಮ್ಮ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳಲ್ಲಿ ಯಾರಾದರೂ ಒಬ್ಬರು ಅತ್ಯುನ್ನತ ಪ್ರಶಸ್ತಿ ತೆಗೆದುಕೊಂಡರೆ, ಆ ದಿವಸ ನಾನು ಕಾರ್ಯದರ್ಶಿಯಾಗಿರುವುದಕ್ಕೆ ನಿಜವಾದ ಸಂತೋಷವಾಗುತ್ತದೆ. ಆ ಮಟ್ಟಕ್ಕೆ ನಮ್ಮ ಮಕ್ಕಳು ಬೆಳೆಯಬೇಕು. ನೋಡೋಣ, ಮುಂದಿನ ದಿನಗಳಲ್ಲಿ ಇದು ಸಾಧ್ಯವಾದರೂ ಆಗಬಹುದು.

28 ನಮ್ಮ ವಿದ್ಯಾರ್ಥಿ ಸಮೂಹವನ್ನು ಗಮನಿಸಿದಾಗ ತಮಗೆ ಏನು ಕೊರತೆ ಕಂಡುಬರುತ್ತದೆ ?

ನಾನೊಮ್ಮೆ ಚೀನಾಕ್ಕೆ ಹೋಗಿದ್ದೆ. ಆಗ ಅಲ್ಲಿಯ ವಿದ್ಯಾರ್ಥಿಗಳನ್ನು ಗಮನಿಸಿದಾಗ ಅವರಲ್ಲಿ ಕಂಡ ಬಹಳ ದೊಡ್ಡ ಶಕ್ತಿ ಎಂದರೆ ರಾಷ್ಟ್ರೀಯತೆ. ನಾವು ಅಂತಹ ರಾಷ್ಟ್ರೀಯತೆಯನ್ನು ನಮ್ಮ ಮಕ್ಕಳಲ್ಲಿ ಬೆಳೆಸಬೇಕು. ನಾನು ವಿಶ್ವಾಸದಿಂದ ಹೇಳುತ್ತೇನೆ, ನಮ್ಮ ವಿದ್ಯಾರ್ಥಿಗಳೂ ಯಾವುದಕ್ಕೂ ಕಡಿಮೆ ಇಲ್ಲ. ಅವರಲ್ಲಿ ಜ್ಞಾನದ ಕೊರತೆ ಇಲ್ಲ, ಸಂಸ್ಕಾರದ ಕೊರತೆ ಇಲ್ಲ. ಅವರಲ್ಲಿ ರಾಷ್ಟ್ರೀಯತೆ ಎನ್ನುವುದು ಬರಬೇಕು. ನಾವು ಏನು ಮಾಡಿದರೂ ಕೂಡ ರಾಷ್ಟಕ್ಕೆ ಕೊಡುಗೆಯನ್ನು ಕೊಡಬೇಕು ಎಂಬ ಕಲ್ಪನೆಯನ್ನು ಅವರು ಮನಸ್ಸಿನಲ್ಲಿ ಇಟ್ಟುಕೊಂಡು ಕೆಲಸ ಮಾಡಿದರೆ ಅದೇ ಒಂದು ಪ್ರೇರಕ ಶಕ್ತಿ ಆಗುತ್ತದೆ. ಈ ದೇಶಕ್ಕೆ ಅದೇ ದೊಡ್ಡ ಶಕ್ತಿ

ಆಗುತ್ತದೆ. ನಮ್ಮ ಹೊಸ ಶಿಕ್ಷಣ ನೀತಿಯಲ್ಲಿ ಕೂಡ ರಾಷ್ಟ್ರೀಯತೆ ಬೆಳೆಸುವ ಆಶೋತ್ತರ ಕೂಡ ಇದೆ ಎನ್ನುವಂತಹದ್ದು ನೋಡಿ ನನಗೆ ತುಂಬಾ ಸಂತೋಷವಾಯಿತು. ರಾಷ್ಟ್ರೀಯತೆ ಎನ್ನುವುದು ಮಕ್ಕಳಲ್ಲಿ ಚಿಕ್ಕ ವಯಸ್ಸಿನಲ್ಲೇ ಬೆಳೆಯಬೇಕು. ಅದು ಪ್ರತಿ ಮಗುವಿನ ಕಣಕಣದಲ್ಲಿ ಸೇರಿಕೊಂಡು ಬಿಟ್ಟರೆ ಖಂಡಿತವಾಗಿಯೂ ನಾವು ಯಾವ ರಾಷ್ಟ್ರಕ್ಕಿಂತಲೂ, ಯಾವುದಕ್ಕೂ ಕಡಿಮೆ ಇಲ್ಲ. ವಿವೇಕಾನಂದರ ಸದೃಢ ಭಾರತ ನಿರ್ಮಾಣದ ಕನಸು ಈಡೇರುತ್ತದೆ. ಅಷ್ಟೇ ಅಲ್ಲ ಭಾರತ ವಿಶ್ವಗುರು ಆಗುವುದರಲ್ಲಿ ಯಾವುದೇ ಸಂದೇಹವೂ ಇಲ್ಲ. ❑



29 ಕೇಂದ್ರ ಸರ್ಕಾರ ರೂಪಿಸಿರುವ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಬಗ್ಗೆ ತಮ್ಮ ಅಭಿಪ್ರಾಯವೇನು?

ಹೊಸ ಶಿಕ್ಷಣ ನೀತಿಯನ್ನು ನಾನು ಬಹಳ ಗೌರವದಿಂದ ಸ್ವಾಗತ ಮಾಡುತ್ತೇನೆ. 1986 ರಲ್ಲಿ ನಮ್ಮ ರಾಷ್ಟ್ರೀಯ ಶಿಕ್ಷಣ ನೀತಿ ರೂಪುಗೊಂಡಿತು. ಈಗ ಇಷ್ಟು ವರ್ಷಗಳ ನಂತರ ಅದರ ಪರಿಣಾಮಗಳನ್ನು ವಿಮರ್ಶೆ ಮಾಡುವಂತಹ ಒಂದು ಕಾಲಘಟ್ಟ ಇದು. ಬದಲಾಗುತ್ತಿರುವ ಯುಗದಲ್ಲಿ ನಾವು ಹೇಗೆ ಭಾರತವನ್ನು ಕೊಂಡೊಯ್ಯಬೇಕು, ನಮ್ಮ ಯುವಕರನ್ನು ಮುಂದಿನ ಸವಾಲುಗಳಿಗೆ ಹೇಗೆ ತಯಾರು ಮಾಡಬೇಕು ಎನ್ನುವ ದೃಷ್ಟಿಕೋನದಲ್ಲಿ ಈ ಶಿಕ್ಷಣ ನೀತಿಯನ್ನು ತಯಾರಿಸಿದ್ದಾರೆ.

ಬಹಳ ದೊಡ್ಡ ಮಹತ್ವಾಕಾಂಕ್ಷೆ ಹೊಂದಿರುವ ಶಿಕ್ಷಣ ನೀತಿ ಇದು. ವಿದ್ಯಾರ್ಥಿಗಳಿಗೆ ಕೊಡುವ

ಶಿಕ್ಷಣ ಅವರ ಬದುಕಿಗೆ ಪೂರಕವಾಗಿರಬೇಕು ಎನ್ನುವಂತಹ ಆಶಯವನ್ನು ಈ ಶಿಕ್ಷಣ ನೀತಿ ಹೊಂದಿದೆ. ಕೌಶಲ್ಯಕ್ಕೆ ಹೆಚ್ಚು ಒತ್ತು ಕೊಡುವಂತಹ ಹಾಗೂ ಮೌಲ್ಯಗಳಿಗೆ ಹೆಚ್ಚು ಒತ್ತು ಕೊಡುವಂತಹ ನೀತಿ ಇದು. ಜೊತೆಗೆ ಕ್ರಿಯಾಶೀಲತೆ ಮತ್ತು ಸಂಶೋಧನಾ ಮನಸ್ಥಿತಿಯನ್ನು ಪ್ರಾಥಮಿಕ ಹಂತದಲ್ಲಿ ಬೆಳೆಸುವಂತಹ ಮಹತ್ವಾಕಾಂಕ್ಷಿ ಯೋಜನೆಗಳನ್ನು ಹಾಕಿಕೊಂಡಿದ್ದಾರೆ. ಇದು ನಿಜಕ್ಕೂ ಆಗಬೇಕಾದ ಕೆಲಸ.

ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯು ವೃತ್ತಿ ಮತ್ತು ಪ್ರವೃತ್ತಿಯಲ್ಲಿ ಸಮನ್ವಯತೆ ಸಾಧಿಸುವುದಕ್ಕೆ ಒತ್ತು ನೀಡುತ್ತಿದೆ. ಅಂದರೆ, ವಿದ್ಯಾರ್ಥಿಯೊಬ್ಬ ವೃತ್ತಿ ಶಿಕ್ಷಣದ ಜೊತೆ, ತನ್ನ ಆಸಕ್ತಿಯ ಪ್ರವೃತ್ತಿ ಶಿಕ್ಷಣವನ್ನೂ ಸೇರಿಸಿಕೊಂಡು ಪದವಿಯನ್ನು ತೆಗೆದುಕೊಳ್ಳಬಹುದು. ಉದಾಹರಣೆಗೆ ವಾಣಿಜ್ಯ ಓದುವ ವಿದ್ಯಾರ್ಥಿಯೊಬ್ಬನಿಗೆ ಸಂಗೀತದಲ್ಲಿ ಆಸಕ್ತಿ ಇದ್ದರೆ ಆತ ಸಂಗೀತವನ್ನೂ ಸಹ ಒಂದು ಆಯ್ಕೆಯ ವಿಷಯವನ್ನಾಗಿ ತೆಗೆದುಕೊಳ್ಳಬಹುದು. ಮುಂದೆ ಆತ ವೃತ್ತಿ ಮತ್ತು ಪ್ರವೃತ್ತಿ ಎರಡರಲ್ಲೂ ಸಮಾನ ಸಾಧನೆ ಮಾಡಲು ಇದರಿಂದ ಸಾಧ್ಯವಾಗುತ್ತದೆ. ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಯ ದೃಷ್ಟಿಯಿಂದ ಇದೊಂದು ಅತ್ಯುತ್ತಮ ಅಂಶ ಎನ್ನುವುದು ನನ್ನ ಅಭಿಪ್ರಾಯ. ಇದರಿಂದ ಶಿಕ್ಷಣದ ಪರಿಪೂರ್ಣತೆ ಸಾಧ್ಯವಾಗುತ್ತದೆ.

ಆದರೆ ನನ್ನದು ಒಂದು ಅಭಿಪ್ರಾಯ, ಏನು ಎಂದರೆ ಶಿಕ್ಷಕರೆಲ್ಲರೂ ಕೂಡ ಹಳೆಯ ಪದ್ಧತಿಯಲ್ಲಿ ಬಂದವರು. ಈಗ ಅವರಿಗೆ ಹೊಸ ಕ್ರಮಕ್ಕೆ ತಕ್ಕಂತೆ ತರಬೇತಿ ಕೊಡಬೇಕಾಗುತ್ತದೆ, ಅವರನ್ನು ತಯಾರು ಮಾಡಬೇಕಾಗುತ್ತದೆ. ಬದಲಾಗುತ್ತಿರುವ ಶಿಕ್ಷಣ ನೀತಿಗೆ ಹೊಂದಾಣಿಕೆ ಮಾಡಿಕೊಂಡು ಹೋಗುವ ಮಹತ್ವದ ಜವಾಬ್ದಾರಿ ಶಿಕ್ಷಕರ ಮೇಲೂ ಇದೆ. ❑



30 ಶಿಕ್ಷಣದಲ್ಲಿ ರಚನಾತ್ಮಕತೆ ಇರಬೇಕು, ವಿದ್ಯಾರ್ಥಿಗಳು ಪರಾಮರ್ಶೆಯ ಮನೋಭಾವ ಬೆಳೆಸಿಕೊಳ್ಳಬೇಕು ಎನ್ನುವ ಮಾತುಗಳನ್ನು ನಾವು ಆಗಾಗ ಅಲ್ಲಲ್ಲಿ ಕೇಳುತ್ತೇವೆ. ಈ ಬಗ್ಗೆ ತಮ್ಮ ವಿಚಾರಗಳೇನು ?

ಪ್ರಶ್ನಿಸದೆ ಏನನ್ನೂ ಒಪ್ಪಬೇಡಿ ಅಂತ ಡಾ. ಹೆಚ್. ನರಸಿಂಹಯ್ಯನವರು ಹೇಳಿದ್ದರು. ನನಗೆ ಅವರ ಒಡನಾಟ ಬಹಳ ಇತ್ತು. ಒಳ್ಳೆಯ ವೈಜ್ಞಾನಿಕ ಆಲೋಚನೆಯನ್ನು ಅವರು ಇಟ್ಟುಕೊಂಡಿದ್ದರು. ಇವತ್ತಿನ ದಿನದಲ್ಲಿ ಈ ರೀತಿಯ ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳುವ ಅವಶ್ಯಕತೆ ತುಂಬಾ ಇದೆ. ಏಕೆಂದರೆ ಈಗ ಸಾಮಾಜಿಕ ಜಾಲತಾಣಗಳಲ್ಲಿ ಅನೇಕ ವಿಷಯಗಳನ್ನು ಹರಿಬಿಡುತ್ತಾರೆ. ಇದು ಆರೋಗ್ಯಕರ ಬೆಳವಣಿಗೆಯ ಸೂಚನೆಯಲ್ಲ ಅಂತ

ನನ್ನ ಭಾವನೆ. ಆದ್ದರಿಂದ ನಾನೂ ಸಹ ಯುವ ಸಮುದಾಯದಲ್ಲಿ ಕೇಳಿಕೊಳ್ಳುವುದೇನೆಂದರೆ, ದಯಮಾಡಿ ಯಾವುದನ್ನೂ ಪ್ರಶ್ನಿಸದೆ ಏನನ್ನೂ ಒಪ್ಪಿಕೊಳ್ಳಬೇಡಿ. ಯಾವುದೇ ಮಾಹಿತಿ ಬರಲಿ, ಅದನ್ನು ಪರಾಮರ್ಶೆ ಮಾಡುವ ಸಾವಧಾನ, ಟೆಂಪರ್‌ಮೆಂಟ್ ಬೆಳೆಸಿಕೊಳ್ಳಬೇಕು. ಈ ಪರಾಮರ್ಶೆಯ ಗುಣವನ್ನು ಬೆಳೆಸಿಕೊಳ್ಳದೆ ಹೋದರೆ ನಮ್ಮ ಬದುಕು ಬಹಳ ಕಷ್ಟ ಆಗುತ್ತೆ. ಗಾಂಧೀಜಿಯ ಬಗ್ಗೆ ಕೂಡ ಹಲವು ಕೆಟ್ಟದಾದ ವಿಚಾರಗಳನ್ನು ನಾನು ಸಾಮಾಜಿಕ ಜಾಲತಾಣಗಳಲ್ಲಿ ನೋಡುತ್ತೇನೆ. ಅಂಥ ಯುವಕರಿಗೆ ನಾನು ಹೇಳೋದು ಇಷ್ಟೆ, ದುರುದ್ದೇಶದಿಂದ ಯಾರು ಏನು ಮಾಡ್ತಾರೋ ಮಾಡಿಕೊಳ್ಳಲಿ. ಆದರೆ ನೀವು ಮಾತ್ರ ಆಳವಾಗಿ ಅಧ್ಯಯನ ಮಾಡಿ. ಮೊದಲು ಗಾಂಧಿಯವರ ಬಗ್ಗೆ ಅಧ್ಯಯನ ಮಾಡಿ, ಆಮೇಲೆ ಗಾಂಧಿಯವರ ಸಿದ್ಧಾಂತಗಳನ್ನು ಪ್ರಶ್ನೆ ಮಾಡಿ. ಆಗಲೂ ನಿಮಗೆ ತೃಪ್ತಿಯಾಗದಿದ್ದರೆ ಗಾಂಧಿಯವರ ಸಿದ್ಧಾಂತಕ್ಕೆ ಸವಾಲು ಹಾಕಿ. ಗಾಂಧಿಯವರೇನೂ ಪ್ರಶ್ನಾತೀತರಲ್ಲ. ಅದನ್ನು ಅವರೂ ಹೇಳಿದ್ದಾರೆ. ಅವರ ವಿಪುಲವಾದ ಸಾಹಿತ್ಯ ಇವತ್ತಿಗೂ ದೊರೆಯುತ್ತದೆ. ಎಲ್ಲರಿಗೂ ಕೈಗೆಟಕುವ ರೀತಿಯಲ್ಲಿ ದೊರೆಯುತ್ತದೆ. ಅದನ್ನು ಓದಿ, ಓದದೇ ಒಬ್ಬರ ಬಗ್ಗೆ ಮಾತನಾಡುವುದು, ಟೀಕೆ ಮಾಡುವುದು ಸರಿಯಲ್ಲ. ಯುವಕರು ವೈಜ್ಞಾನಿಕ ಮನೋಭಾವ ಬೆಳೆಸಿಕೊಳ್ಳಬೇಕು. ನಮ್ಮ ಹೊಸ ಶಿಕ್ಷಣ ನೀತಿಯಲ್ಲಿ ರಿಸರ್ಚ್ ಆಟಿಡ್ಯೂಡ್ ಬಗ್ಗೆ ಸೇರಿಸಲಾಗಿದೆ. ಯಾವಾಗ ವಿದ್ಯಾರ್ಥಿಗಳಿಗೆ ಪರಾಮರ್ಶೆಯ ಗುಣ ಬರುತ್ತೋ ಆಗ ಅವರು ಸ್ವಂತವಾಗಿ ಆಲೋಚಿಸಲು ಪ್ರಾರಂಭಿಸುತ್ತಾರೆ. ಯಾರೋ ಹೇಳಿದ್ದನ್ನು ಅಷ್ಟು ಸುಲಭವಾಗಿ ಸ್ವೀಕಾರ ಮಾಡುವುದಿಲ್ಲ. ಅಂಥ ಸ್ಥಿತಿ ಬೇಗ ಬರಲಿ ಎನ್ನುವಂತಹದ್ದೆ ನನ್ನ ಆಶಯ. ಆ ನಿಟ್ಟಿನಲ್ಲಿ ನಮ್ಮ ಶಿಕ್ಷಣ ಕೂಡ ಪೂರಕವಾಗಿ ಇರಬೇಕು. ❑

31 ಶಿಕ್ಷಣ ಕ್ಷೇತ್ರದಲ್ಲಿನ ನಿಮ್ಮ ಕೆಲಸ ನಿಮಗೆ ಎಷ್ಟು ತೃಪ್ತಿ ತಂದಿದೆ ?

ನನಗೆ ಶಿಕ್ಷಣ ಕ್ಷೇತ್ರದಲ್ಲಿನ ಕೆಲಸ ಬಹಳ ಸಮಾಧಾನ ತಂದುಕೊಟ್ಟಿದೆ ಎಂದೇ ಹೇಳುತ್ತೇನೆ. ಏಕೆಂದರೆ ನಮ್ಮ ಶೇಷಾದ್ರಿಪುರಂ ಶಿಕ್ಷಣ ಸಂಸ್ಥೆಯಲ್ಲಿ 19 ಕಾಲೇಜುಗಳಿವೆ, ಪಿಯು ಮತ್ತು ಡಿಗ್ರಿ ಕಾಲೇಜುಗಳು. ಪ್ರತಿಯೊಂದು ಕಾಲೇಜಿನಲ್ಲೂ ಅಂಬೇಡ್ಕರ್ ಅಧ್ಯಯನ ಕೇಂದ್ರ, ಗಾಂಧಿ ಅಧ್ಯಯನ ಕೇಂದ್ರ, ಬಸವ ಅಧ್ಯಯನ ಕೇಂದ್ರ ಹಾಗೂ ವಿವೇಕಾನಂದ ಅಧ್ಯಯನ ಕೇಂದ್ರಗಳನ್ನು ನಾವು ಸ್ಥಾಪನೆ ಮಾಡಿದ್ದೇವೆ. ಮಕ್ಕಳಿಗೆ ಇಂಥ ಮಹಾನ್ ರಾಷ್ಟ್ರ ನಿರ್ಮಾಪಕರ ಚಿಂತನೆಗಳನ್ನು ಹೇಳಬೇಕು ಎನ್ನುವ ಕಾರಣಕ್ಕೆ ಈ ಕೇಂದ್ರಗಳನ್ನು ಸ್ಥಾಪನೆ ಮಾಡಲಾಗಿದೆ. ನಾನು ಈ ಮೊದಲೇ ಹೇಳಿದಂತೆ ನನ್ನ ಬಹಳ ದೊಡ್ಡ ಆಸೆ ಏನು ಅಂದರೆ ನಮ್ಮ

ರಾಷ್ಟ್ರೀಯತೆಯನ್ನು ಗಟ್ಟಿಗೊಳಿಸಬೇಕು. ಇಂತಹ ಮಹಾನ್ ವ್ಯಕ್ತಿಗಳ ಚಿಂತನೆಯನ್ನು ವಿದ್ಯಾರ್ಥಿಗಳಿಗೆ ತಲುಪಿಸಿದ ತಕ್ಷಣ ಎಲ್ಲರಲ್ಲೂ ರಾಷ್ಟ್ರೀಯತೆಯ ಭಾವನೆ ಜಾಗೃತವಾಗಿಬಿಡುತ್ತದೆ ಎನ್ನುವ ಕಲ್ಪನೆ ನನಗಿಲ್ಲ. ಆದರೆ ಕೆಲವಷ್ಟು ಜನರಿಗಾದರೂ ವಿಚಾರ ತಲುಪಿಸಿದರೆ ಅವರು ಮುಂದೆ ಸಮಾಜದಲ್ಲಿ ಬದಲಾವಣೆ ತರಬಲ್ಲರು ಎನ್ನುವ ಕಲ್ಪನೆಯೊಂದಿಗೆ ನನ್ನ ಇತಿಮಿತಿಯಲ್ಲಿ ಈ ಕೆಲಸ ಮಾಡುತ್ತಿದ್ದೇನೆ. ಈ ಕೆಲಸ ನನಗೆ ಸ್ವಲ್ಪ ಸಮಾಧಾನ, ಸಂತೋಷ, ತೃಪ್ತಿ ತಂದಿದೆ.

□

ವೈವಿಧ್ಯಮಯ ಜವಾಬ್ದಾರಿಗಳು



32 ತಾವು ಆರ್ಬಿಟ್ರೇಟರ್ ಆಗಿ ಸಹ ಕಾರ್ಯ ನಿರ್ವಹಿಸುತ್ತಿದ್ದೀರಿ. ಆದರೆ ಇದರ ಬಗ್ಗೆ ನಮ್ಮ ಜನರಿಗೆ ಅಷ್ಟೊಂದು ಮಾಹಿತಿ ಇಲ್ಲ. ಏನಿದು ಆರ್ಬಿಟ್ರೇಷನ್, ಸ್ವಲ್ಪ ವಿವರಿಸಿ ಹೇಳಬಹುದಾ?

ವ್ಯಾಜ್ಯಗಳನ್ನು ಪರಿಹಾರ ಮಾಡಿಕೊಳ್ಳಲು ನ್ಯಾಯಾಲಯಕ್ಕೆ ಪರ್ಯಾಯವಾಗಿ ಇರುವ ವ್ಯವಸ್ಥೆ ಇದು. ಕೋರ್ಟ್‌ಗಳ ಮೂಲಕ ನಾವು ವ್ಯಾಜ್ಯಗಳನ್ನು ಪರಿಹಾರ ಮಾಡಿಕೊಳ್ಳಲು ಹೋದಂತಹ ಸಂದರ್ಭದಲ್ಲಿ ಸಾಮಾನ್ಯವಾಗಿ ಬಹಳ ಸಮಯ ತೆಗೆದುಕೊಳ್ಳುತ್ತದೆ, ವರ್ಷಾನುಗಟ್ಟಲೆ ಎಳೆಯುತ್ತದೆ. ಅದರ ಬದಲು ಅದಕ್ಕೊಂದು ಪರ್ಯಾಯ ವ್ಯವಸ್ಥೆ ಇದು. ಉದಾಹರಣೆಗೆ ಯಾರೋ ಒಂದು ಅಗ್ರಿಮೆಂಟ್ ಮಾಡಿಕೊಂಡಿರುತ್ತಾರೆ. ಅದನ್ನು

ಯಾವುದೋ ಒಂದು ಪಾರ್ಟಿ ಮುರಿದಿರುತ್ತದೆ ಎಂದಿಟ್ಟುಕೊಳ್ಳಿ, ಇನ್ನೊಬ್ಬರು ಅದರ ಬಗ್ಗೆ ತಗಾದೆ ತೆಗೆಯುತ್ತಾರೆ. ಅಂತ ಸಂದರ್ಭದಲ್ಲಿ ಅವರಿಬ್ಬರ ನಡುವೆ ಆದ ಒಪ್ಪಂದದಲ್ಲಿ ಆರ್ಬಿಟ್ರೇಟರ್ ಬಗ್ಗೆ ಪ್ರಸ್ತಾಪವಿದ್ದರೆ, ಅವರಿಬ್ಬರೂ ತಮ್ಮ ವಿವಾದವನ್ನು ಆರ್ಬಿಟ್ರೇಷನ್ ಮೂಲಕ ಬಗೆಹರಿಸಿಕೊಳ್ಳಲು ಬರುತ್ತಾರೆ. ಒಬ್ಬ ಪಾರ್ಟಿ ಒಬ್ಬ ಆರ್ಬಿಟ್ರೇಟರ್‌ನ ನೇಮಕ ಮಾಡ್ತಾರೆ. ಇನ್ನೊಬ್ಬ ಇನ್ನೊಬ್ಬರನ್ನು ನೇಮಕ ಮಾಡುತ್ತಾರೆ. ನೇಮಕ ಮಾಡಿದ ಅವರಿಬ್ಬರು ಸೇರಿ ಮೂರನೇ ಆರ್ಬಿಟ್ರೇಟರ್ ನೇಮಕ ಮಾಡ್ತಾರೆ. ಹಾಗೆ ಮೂರು ಜನ ಆರ್ಬಿಟ್ರೇಟರ್ಸ್ ಕೂತು ಆ ಕೇಸಿನ ನಿರ್ಣಯ ಮಾಡ್ತಾರೆ. ಇದು ಒಂದು ತರಹ ಖಾಸಗಿ ನ್ಯಾಯಾಲಯದ ತರಹ. ಹೆಚ್ಚು ಕಮ್ಮಿ ಕೋರ್ಟ್‌ನಂತೆಯೇ ಎಲ್ಲಾ ವ್ಯವಹಾರಗಳು ನಡೆಯುತ್ತವೆ. ಎಲ್ಲವೂ ಮುಚ್ಚಿದ ಬಾಗಿಲ ಒಳಗೆ ನಡೆಯುತ್ತದೆ. ಕೋರ್ಟ್‌ನಲ್ಲಿ ಜಡ್ಜಮೆಂಟ್ ಅಂತ ಕೊಡುತ್ತಾರೆ. ಆದ್ರೆ ಇಲ್ಲಿ ನಾವು ಕೊಡೋದು ಅವಾರ್ಡ್ ಅಂತ.

❑

33 ಅಂದರೆ ಎಲ್ಲ ಪ್ರಕಾರದ ಕೇಸುಗಳಿಗೂ ಇಲ್ಲಿ ಅವಕಾಶವಿದೆಯಾ?

ಇಲ್ಲ, ಕೇವಲ ಒಪ್ಪಂದಕ್ಕೆ ಸಂಬಂಧಪಟ್ಟ ಕೇಸುಗಳು ಮಾತ್ರ ಆರ್ಬಿಟ್ರೇಷನ್‌ಗೆ ಬರುತ್ತವೆ. ನಮಗೆ ಕಾಂಟ್ರಾಕ್ಟ್ ಅಗ್ರಿಮೆಂಟ್ ಇರುವ ಕಟ್ಟಲೆಯನ್ನು ಮಾತ್ರ ಇತ್ಯರ್ಥ ಮಾಡುವುದಕ್ಕೆ ಅಧಿಕಾರವಿದೆ, ಬೇರೆ ಯಾವ ರೀತಿಯ ಅಧಿಕಾರವೂ ಇಲ್ಲ. ಉಳಿದ ವಿಷಯಗಳಿಗೆ ಮುಖ್ಯವಾಹಿನಿಯ ನ್ಯಾಯಾಲಯ ಗಳು ಇದ್ದೇ ಇವೆ. ಎರಡೂ ಪಾರ್ಟಿಗಳು ಸಹಕಾರ ಕೊಟ್ಟರೆ ಇಲ್ಲಿ ಶೀಘ್ರವಾಗಿ ಕೇಸುಗಳನ್ನು ಇತ್ಯರ್ಥ ಮಾಡಿಕೊಳ್ಳಬಹುದು. ಕೋರ್ಟಿನ ತರಹ ಇಲ್ಲಿ ವರ್ಷಾನುಗಟ್ಟಲೆ ಕೇಸು ನಡೆಯುವುದಿಲ್ಲ. ಒಂದು ತಿಂಗಳು, ಎರಡು ತಿಂಗಳು, ಮೂರು ತಿಂಗಳು, ಕೆಲವೊಮ್ಮೆ ಹತ್ತು ದಿನದಲ್ಲಿ, ಇನ್ನು ಕೆಲವೊಮ್ಮೆ ಮೊದಲನೇ ಮೀಟಿಂಗ್‌ನಲ್ಲಿಯೇ ಇತ್ಯರ್ಥವಾದ

ಎಷ್ಟೋ ಉದಾಹರಣೆಗಳಿವೆ. 'Arbitration and Conciliation Act- 1996' ಅಡಿಯಲ್ಲಿ ಈ ಒಂದು ವ್ಯವಸ್ಥೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ. ನಾನು ಸುಮಾರು 12 ವರ್ಷಗಳಿಂದ ಆರ್ಬಿಟ್ರೇಷನ್‌ನಲ್ಲಿ ಕೆಲಸ ಮಾಡುತ್ತಿದ್ದೇನೆ. ಇಡೀ ಭಾರತದಿಂದ ನಮಗೆ ಕೇಸುಗಳು ಬರುತ್ತವೆ. ಅದಕ್ಕಾಗಿ ನಾನು ಭಾರತಾದ್ಯಂತ ಪ್ರಯಾಣ ಮಾಡುತ್ತಿರುತ್ತೇನೆ. ಇದು ನನಗೆ ತೃಪ್ತಿ ಕೊಡುತ್ತದೆ. ವೃತ್ತಿಯಲ್ಲಿ ಒಂದು ಘಟ್ಟ ಮುಟ್ಟಿದೆನಲ್ಲ ಎನ್ನುವ ಒಂದು ಸಮಾಧಾನ ಕೂಡ ಇದೆ.

❑



34 ಈ ವಿಷಯುವನ್ನು ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಜನರ ಬಳಿ ತೆಗೆದುಕೊಂಡು ಹೋಗಬೇಕು, ಜನರಿಗೆ ಇದು ಇನ್ನಷ್ಟು ಹತ್ತಿರವಾಗಬೇಕು, ಅಲ್ವಾ?

ಖಂಡಿತ ಹೌದು. ಕೇಂದ್ರ ಸರ್ಕಾರ ಕೂಡ ಈಗೀಗ ಆರ್ಬಿಟ್ರೇಷನ್‌ಗೆ ಬಹಳ ಒತ್ತು ಕೊಡುತ್ತಿದೆ. ಭಾರತವು ಮುಂದಿನ ದಿನಗಳಲ್ಲಿ ಆರ್ಬಿಟ್ರೇಷನ್‌ನ ಪ್ರಮುಖ ಸ್ಥಾನವಾಗಲಿದೆ ಎನ್ನುವ ಮಾತನ್ನು ಪ್ರಧಾನಮಂತ್ರಿಗಳು ಪದೇ ಪದೇ ಹೇಳುತ್ತಿದ್ದಾರೆ. ಇದರಿಂದ ನಮ್ಮ ಆರ್ಥಿಕ ಕ್ಷೇತ್ರಕ್ಕೂ ಬಹಳ ಅನುಕೂಲವಾಗುತ್ತದೆ. ವ್ಯಾಜ್ಯಗಳು ಬೇಗ ಬೇಗ ಇತ್ಯರ್ಥವಾದರೆ, ಅದು ನಮ್ಮ ವಾಣಿಜ್ಯ ಚಟುವಟಿಕೆಗೂ ಕೂಡ ಅನುಕೂಲವಾಗುತ್ತದೆ. ದೇಶದ ಆರ್ಥಿಕತೆಗೆ ಒಂದು ಸುಸ್ಥಿರತೆ ತರಲು ಸಾಧ್ಯವಾಗುತ್ತದೆ.

ಇದು ಒಂದು ಅರ್ಥದಲ್ಲಿ ಗಾಂಧಿ ತತ್ವ ಕೂಡ. ಗಾಂಧೀಜಿ ದೊಡ್ಡ ಲಾಯರ್ ಆಗಿದ್ದರು. ಆದರೂ ಕೂಡ ಕೋರ್ಟಿನ ಹೊರಗೆ ಸಮಸ್ಯೆಯ ಇತ್ಯರ್ಥಕ್ಕೆ ಅವರು ಹೆಚ್ಚಿನ ಒಲವು ತೋರುತ್ತಿದ್ದರು. ಜನಗಳ ಕಷ್ಟದ ಮೇಲೆ ನಾವು ಬದುಕಬಾರದು ಎನ್ನುವ ಮಾತನ್ನು ಅವರು ಹೇಳುತ್ತಿದ್ದರು. ಅವರ ಕಷ್ಟವನ್ನು ಇತ್ಯರ್ಥ ಮಾಡೋಕೆ ನಾವು ಲಾಯರ್ ಆದೋರು ಸಹಕಾರ ಕೊಡಬೇಕು ಎನ್ನುತ್ತಿದ್ದರು. ಅವರ ಕ್ಲೈಂಟ್‌ಗಳು ಏನು ಕೊಡ್ತಾರೋ ಅಷ್ಟಕ್ಕೇ ತೃಪ್ತರಾಗುತ್ತಿದ್ದರು.

❑



35 ತಾವು ಇಂಡಿಯನ್ ರೆಡ್ ಕ್ರಾಸ್ ಸಂಸ್ಥೆಯಲ್ಲೂ ಸಹ ಸಕ್ರಿಯವಾಗಿ ಭಾಗಿಯಾಗಿ, ಅನೇಕ ಜವಾಬ್ದಾರಿಗಳನ್ನು ನಿಭಾಯಿಸಿದ್ದೀರಿ. ತಮಗೆ ರೆಡ್ ಕ್ರಾಸ್ ಸಂಪರ್ಕ ಹೇಗೆ ಬಂತು? ಅಲ್ಲಿ ತಮ್ಮ ಸೇವೆಯ ವ್ಯಾಪ್ತಿ ಏನಾಗಿತ್ತು?

ಕೆ. ಎಂ. ನಂಜಪ್ಪನವರು ಅಂತ ಒಬ್ಬ ಹಿರಿಯರಿದ್ದರು. ಅವರು ಕರ್ನಾಟಕದಲ್ಲಿ ರೆಡ್ ಕ್ರಾಸ್ ಸಂಸ್ಥೆಯನ್ನು ಕಟ್ಟಿ ಬೆಳೆಸಿದ ಧೀಮಂತ ವ್ಯಕ್ತಿ. ಅವರು ಬೆಂಗಳೂರಿನ ಮಹಾಪೌರರು ಕೂಡ ಆಗಿದ್ದರು. 1984 ರಲ್ಲಿ ನಾನು ಇಂಜಿನಿಯರಿಂಗ್ ಓದುತ್ತಿರುವ ಸಂದರ್ಭದಲ್ಲಿ ನಮ್ಮ ಅಣ್ಣನವರು ಅವರ ಹತ್ತಿರ ಕರೆದುಕೊಂಡು ಹೋಗಿದ್ದರು. ಆ ಸಂದರ್ಭದಲ್ಲಿ ಅವರೊಂದು ಫಾರ್ಮ್ ಕೊಟ್ಟು ರೆಡ್ ಕ್ರಾಸ್ ಸದಸ್ಯರಾಗಿ ಎಂದರು. ನಾನು ಫಾರ್ಮ್ ತುಂಬಿ ಸದಸ್ಯನಾದೆ. 'ನಿಮಗೆ ರೆಡ್ ಕ್ರಾಸ್ ಮೂಲಕ ಮುಂದೆ

ಒಳ್ಳೆಯ ಸೇವೆ ಮಾಡುವ ಅವಕಾಶವಿದೆ' ಅಂತ ಅವರು ಆ ದಿನ ಹೇಳಿದ್ದರು. ಆದರೆ ಮುಂದೆ ಒಂದು ದಿನ ಅವರ ಜಾಗದಲ್ಲೇ ಕುಳಿತು, ಅವರಷ್ಟೇ ಪದವಿ ತೆಗೆದುಕೊಂಡು, ಅವರ ಮಟ್ಟಕ್ಕೆ ಏರುತ್ತೀನಿ ಎಂದು ನಾನು ಎಂದೂ ಊಹಿಸಿರಲಿಲ್ಲ. ಇದರ ಮೂಲಕ ನಾನು ಹೇಳೋದೇನೆಂದರೆ, ಯುವಕರಿಗೆ ನಾವು ಶಕ್ತಿ ತುಂಬಬೇಕು. ಯಾರಲ್ಲಿ ಏನಿದೆ ಎಂಬುದನ್ನು ಹೇಳಲಿಕ್ಕೆ ಬರುವುದಿಲ್ಲ. ಆವತ್ತು ಅವರು ಕೊಟ್ಟಂತಹ ಪ್ರೇರಣೆಯಿಂದ ನಾನು ರೆಡ್ ಕ್ರಾಸ್‌ನಲ್ಲಿ ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ, ಎಲ್ಲ ಹಂತಗಳಲ್ಲೂ ಕೆಲಸ ಮಾಡುವುದಕ್ಕೆ ಅವಕಾಶವಾಯಿತು.

ರೆಡ್ ಕ್ರಾಸ್‌ನಲ್ಲಿ ಕೆಲಸ ಮಾಡುವುದು ದೇವರು ಕೊಟ್ಟಂತಹ ಸದಾವಕಾಶ ನನಗೆ. ಏಕೆಂದರೆ ಭಾರತೀಯ ರೆಡ್ ಕ್ರಾಸ್ ಸಂಸ್ಥೆಯಂತಹ ಒಂದು ಸೇವಾ ಸಂಸ್ಥೆ ಈ ದೇಶದಲ್ಲಿ ಇನ್ನೊಂದು ಇಲ್ಲ. 'ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ಆಕ್ಟ್–1920' ಅಡಿಯಲ್ಲಿ ಅದನ್ನು ಸ್ಥಾಪನೆ ಮಾಡಲಾಗಿದೆ. ರಾಷ್ಟ್ರಪತಿಗಳು ಅದರ ರಾಷ್ಟ್ರ ಅಧ್ಯಕ್ಷರು. ರಾಜ್ಯಮಟ್ಟದಲ್ಲಿ ರಾಜ್ಯಪಾಲರುಗಳು ಅದರ ಅಧ್ಯಕ್ಷರು. ಜಿಲ್ಲಾಮಟ್ಟದಲ್ಲಿ ಜಿಲ್ಲಾಧಿಕಾರಿಗಳು ಅದರ ಅಧ್ಯಕ್ಷರು. ಇಡೀ ದೇಶದಲ್ಲಿ ಇರುವಂತಹ ಒಂದು ಸೇವಾ ಸಂಸ್ಥೆ ಅದು. ಅದು ಸರ್ಕಾರದ ಹಣದಿಂದ ನಡೆಯುವ ಸಂಸ್ಥೆಯಲ್ಲ. ಸರ್ಕಾರ ಕೇವಲ ಬೆನ್ನೆಲುಬಾಗಿ ನಿಂತಿರುತ್ತದೆ. ಸಂಸ್ಥೆ ನಡೆಯುವುದು ಸ್ವಯಂ ಸೇವಕರಿಂದ, ಅವರ ಸಹಾಯದಿಂದ. ಜನರಿಂದ ನೆರವು ಪಡೆದು, ಜನರಿಗೆ ನೆರವು ಕೊಡುವುದು ಅದರ ತತ್ವ. ನನ್ನ ಸುದೈವ, ನಾನು ಕರ್ನಾಟಕದ ಸ್ಟೇಟ್ ಕಮಿಟಿಯಲ್ಲಿ ಕೆಲಸ ಮಾಡಿದೆ. ರಾಜ್ಯ ರೆಡ್ ಕ್ರಾಸ್‌ನ ಕೋಶಾಧ್ಯಕ್ಷನಾಗಿದ್ದೆ, ಉಪಾಧ್ಯಕ್ಷನಾಗಿದ್ದೆ. ನಂತರ ರಾಷ್ಟ್ರೀಯ ಕಾರ್ಯಕಾರಣಿಯಲ್ಲಿ ಕೂಡ ನಾನು ಸದಸ್ಯನಾಗಿ ಕೆಲಸ ಮಾಡಿದೆ. ಇದೆಲ್ಲವೂ ಕೂಡ ಒಂದು ಸುಯೋಗ ಎಂದು ನಾನು ಭಾವಿಸಿಕೊಳ್ಳುತ್ತೇನೆ. ರಾಷ್ಟ್ರಮಟ್ಟದಲ್ಲಿ ಕೆಲಸ ಮಾಡುವಾಗ ಅದರ ಅಗಾಧತೆ, ವಿಸ್ತಾರ ನೋಡಿ ಬೆರಗಾಗಿದ್ದೆ. □

36 ರೆಡ್ ಕ್ರಾಸ್ ಸಂಸ್ಥೆಯಲ್ಲಿ ತಮಗೆ ಅತ್ಯಂತ ಸಮಾಧಾನ ಕೊಟ್ಟ ಸಂದರ್ಭಗಳೇನಾದರೂ ಇವೆಯಾ?

ರೆಡ್ ಕ್ರಾಸ್‌ನಲ್ಲಿ ಮುಖ್ಯವಾಗಿ ನಮಗೆ ಸಮಾಧಾನ ತಂದುಕೊಟ್ಟದ್ದು ಎಂದರೆ, ವಿಪತ್ತು ನಿರ್ವಹಣೆ ಕಾರ್ಯ. ನೆರೆ ಸಂತ್ರಸ್ತರಿಗೆ ಇರಬಹುದು, ಬೆಂಕಿಗಾಹುತಿಯಾದಂತಹ ಸಂದರ್ಭದಲ್ಲಿ ಇರಬಹುದು. ರೆಡ್ ಕ್ರಾಸ್ ಧಾವಿಸಿ ಹೋಗಿ ಮಾಡುವಂತಹ ಒಂದು ಸೇವೆ ಇದೆಯಲ್ಲ, ಅದು ನಿಮಗೆ ಬಹಳ ಸಮಾಧಾನ ತಂದುಕೊಡುತ್ತದೆ. 2008ರಲ್ಲಿ ಉತ್ತರ ಕರ್ನಾಟಕ ನೆರೆ ಹಾವಳಿ ಅನುಭವಿಸಿದಾಗ ಪರಿಸ್ಥಿತಿ ಭೀಕರವಾಗಿತ್ತು. ಯಾಕೆಂದರೆ ಜನ ಎಂದೂ ಕಾಣದಂತ ನೆರೆಯನ್ನು ಮೊದಲ ಬಾರಿ ಕಂಡರು. ಅಂಥ ಒಂದು ತೊಂದರೆಯಾದಾಗ ಜನರಿಗೆ ಏನು ಕಳಿಸಬೇಕು, ಎಷ್ಟು ಕಳಿಸಬೇಕು ಎಂಬುದು ಗೊತ್ತಿರುವುದಿಲ್ಲ. ಎಲ್ಲವೂ ಅಸ್ಪಷ್ಟ ಆಗಿದ್ದ ಸಂದರ್ಭ. ಆಗ ನಾವು ರೆಡ್ ಕ್ರಾಸ್‌ನಿಂದ ಸಹಾಯಕ್ಕೆ ಧಾವಿಸಿದ್ದೆವು. ಅದು ನನಗೆ ತುಂಬಾ ನೆಮ್ಮದಿ ತಂದುಕೊಟ್ಟಂತಹ ಸಂದರ್ಭ.

❑



37 ರೆಡ್ ಕ್ರಾಸ್ ಸಂಸ್ಥೆಯಿಂದ ತಾವು ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಭಾರತವನ್ನು ಪ್ರತಿನಿಧಿಸಿದ್ದೀರಿ ಅಂತ ತಿಳಿದುಬಂತು. ಅದರ ಬಗ್ಗೆ ವಿವರಿಸಬಹುದಾ?

ಇಂಟರ್‌ನ್ಯಾಷನಲ್ ಹ್ಯುಮಾನಿಟೇರಿಯನ್ ಲಾ ಅಂತ ಇದೆ. ಅಂತಾರಾಷ್ಟ್ರೀಯ ಮಾನವೀಯತೆಯ ಕಾನೂನು ಅಂತ ಅದನ್ನು ನಾವು ಬೇಕಾದರೆ ಕರೆಯಬಹುದು. ಯುದ್ಧದ ಸಂದರ್ಭದಲ್ಲಿ ಅಥವಾ ಇನ್ನಿತರ ಸಂದರ್ಭಗಳಲ್ಲಿ ನಾವು ಬೇರೆ ದೇಶದ ಗಾಯಾಳುಗಳನ್ನು ಹೇಗೆ ನೋಡುತ್ತೇವೆ ಎನ್ನುವುದನ್ನು ನಿರ್ಧರಿಸುವ ಕಾನೂನು ಅದು. ಎಲ್ಲ ದೇಶದವರೂ ಸೇರಿ ಮಾನವೀಯ ಕಾನೂನುಗಳನ್ನು ಒಪ್ಪಿ ಜಾರಿಗೆ ತಂದಿರುವಂತಹ ಒಂದು ವ್ಯವಸ್ಥೆ. ಕಾಮನ್ವೆಲ್ತ್ ಇಂಟರ್‌ನ್ಯಾಷನಲ್ ಹ್ಯುಮಾನಿ

ಟೇರಿಯನ್ ಲಾ ಕಾನ್ಫರೆನ್ಸ್ 2007ರಲ್ಲಿ ನ್ಯೂಜಿಲ್ಯಾಂಡ್‌ನಲ್ಲಿ ಮತ್ತು 2010ರಲ್ಲಿ ಮಲೇಷಿಯಾದಲ್ಲಿ ನಡೆದಿತ್ತು. ಇವೆರಡೂ ಸಮಾವೇಶಕ್ಕೆ ಭಾರತವನ್ನು ಪ್ರತಿನಿಧಿಸಿ ನಾನು ಹೋಗಿದ್ದೆ. ಭಾರತೀಯ ರೆಡ್ ಕ್ರಾಸ್ ಮತ್ತು ಇಂಟರ್‌ನ್ಯಾಷನಲ್ ರೆಡ್ ಕ್ರಾಸ್ ಸಮಿತಿಯವರು ನನ್ನನ್ನು ನೇಮಕ ಮಾಡಿದ್ದರು. ಅಲ್ಲಿ ಸುಮಾರು 138 ದೇಶದವರು ಸಮಾಗಮಗೊಳ್ಳುತ್ತಾರೆ. ಅಂತಾರಾಷ್ಟ್ರೀಯ ಕಾನೂನುಗಳನ್ನು ಹೇಗೆ ಅವರವರ ದೇಶದಲ್ಲಿ ಸ್ಥಳೀಯ ಕಾನೂನಿನ ಮೂಲಕ ಜಾರಿಗೊಳಿಸಬೇಕು ಎಂಬುದರ ಬಗ್ಗೆ ಅಲ್ಲಿ ಚಿಂತನೆ ನಡೆಯುತ್ತದೆ, ವಿಸ್ತಾರವಾದ ಚಿಂತನೆ ನಡೆಯುತ್ತದೆ. ಅಲ್ಲಿ ಕೈಗೊಂಡಂತಹ ನಿರ್ಣಯಗಳನ್ನು ಎಲ್ಲ 138 ರಾಷ್ಟ್ರಗಳು ಕೂಡ ಕಾರ್ಯಗತಗೊಳಿಸುತ್ತವೆ. ಅದೊಂದು ತುಂಬಾ ನಿರ್ಣಾಯಕ ವೇದಿಕೆ. ಅದರಲ್ಲಿ ಭಾಗಿಯಾಗಿದ್ದು ನನಗೆ ತುಂಬ ಸಂತೋಷ ತಂದಿದೆ.

❑

38 ತಾವು ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸದಸ್ಯರಾಗಿಯೂ ಕೆಲಸ ಮಾಡಿದ್ದೀರಿ. ಅದರ ಬಗ್ಗೆ ಹೇಳಬಹುದಾ?

2004ರಲ್ಲಿ ಸುನಾಮಿ ಆಯ್ತು ನೋಡಿ. ಸುನಾಮಿ ದುರಂತದ ನಂತರ ಕೇಂದ್ರ ಸರ್ಕಾರ ತೀರ್ಮಾನ ಮಾಡಿ, ಒಂದು ನ್ಯಾಷನಲ್ ಡಿಸಾಸ್ಟರ್ ಮ್ಯಾನೇಜ್ಮೆಂಟ್ ಅಥಾರಿಟಿ ಅನ್ನೋದನ್ನ ಮಾಡಿ, ಎಲ್ಲಾ ರಾಜ್ಯಗಳಲ್ಲೂ ಕೂಡ ವಿಪತ್ತು ನಿರ್ವಹಣಾ ಪ್ರಾಧಿಕಾರ ಸ್ಥಾಪನೆ ಮಾಡಿದರು. ಅದು ಬಂದಮೇಲೆ ಎಲ್ಲೆಲ್ಲಿ ವಿಪತ್ತು ಬರಲಿಕ್ಕೆ ಸಾಧ್ಯವಿದೆ ಎನ್ನುವುದನ್ನು ಊಹೆ ಮಾಡಿ, ಅದಕ್ಕೆ ಸಾಕಷ್ಟು ತಯಾರಿ ಸಿದ್ಧತೆ, ಮಾಡಿಕೊಳ್ಳುವಂತಹ ಪ್ರಕ್ರಿಯೆ, ಕಳೆದ ಹತ್ತು ಹನ್ನೆರಡು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ನಡೆದಿದೆ. ಅದು ಒಂದು ಆರೋಗ್ಯಕರ ಬೆಳವಣಿಗೆ ಅಂತ ಅಂದುಕೊಂಡಿದ್ದೇನೆ.

ಈ ವಿಪತ್ತು ನಿರ್ವಹಣಾ ಪ್ರಾಧಿಕಾರದಲ್ಲಿ ಕೂಡ ನಾನು ಕೆಲಸ ಮಾಡಿದೆ. ಫಸ್ಟ್ ಡಿಸಾಸ್ಟರ್ ಸ್ಟೇಟ್ ಪ್ಲಾನ್ ಅಂತ ಮಾಡಿದ್ದರು. ಅದನ್ನು ಅನುಮೋದಿಸುವ ಸಂದರ್ಭದಲ್ಲಿ ಕೂಡ ನಾನು ಇದ್ದೆ. 2009ರಿಂದ 2011ರವರೆಗೆ ನಾನು ಅದರಲ್ಲಿ ಇದ್ದೆ. ಈಗ ಅದರಲ್ಲಿ ನಮ್ಮಂತ ಖಾಸಗಿ ಸದಸ್ಯರು ಯಾರೂ ಇಲ್ಲ. ಬರೀ ಸಚಿವರುಗಳೇ ಈಗ ಅದರ ಸದಸ್ಯರಾಗಿದ್ದಾರೆ. ವಿಪತ್ತನ್ನು ನಿರ್ವಹಿಸಬೇಕಾದ ಸಂದರ್ಭದಲ್ಲಿ ನಾನಾ ಇಲಾಖೆಗಳ ಸಹಕಾರ ಬೇಕಾಗುತ್ತದೆ. ಆಯಾ ಮಂತ್ರಿಗಳೇ ಸದಸ್ಯರಾಗಿದ್ದರೆ ಇನ್ನೂ ಅರ್ಥಪೂರ್ಣವಾಗಿ ಮಾಡಬಹುದು ಎನ್ನುವ ದೃಷ್ಟಿಯಿಂದ ಹಾಗೆ ಮಾಡಿದ್ದಾರೆ.

❑

39 ಇಂಟರ್‌ನೆಟ್‌ನಲ್ಲಿ ತಮ್ಮ ಬಗ್ಗೆ ಹುಡುಕಿದಾಗ ತಾವು ಭಾರತೀಯ ಕ್ಷಯರೋಗ ಸಂಸ್ಥೆಯ ಸದಸ್ಯರೂ ಹೌದು ಎನ್ನುವುದು ತಿಳಿದುಬಂತು. ಆ ಸಂಸ್ಥೆಯ ಬಗ್ಗೆ ತಿಳಿಸಬಹುದಾ?

ಭಾರತೀಯ ಕ್ಷಯರೋಗ ಸಂಸ್ಥೆ, 1939ರಲ್ಲಿ ರೂಪುಗೊಂಡ ಭಾರತದಾದ್ಯಂತ ಉಪಸ್ಥಿತಿಯನ್ನು ಹೊಂದಿದ ಒಂದು ಪ್ರತಿಷ್ಠಿತ ಸಂಸ್ಥೆ. ಭಾರತದ ರಾಷ್ಟ್ರಪತಿಗಳು ಇದರ ಪೋಷಕರು. ಇದೊಂದು ಅತ್ಯಂತ ಹಳೆಯ ಮತ್ತು ಅತಿ ದೊಡ್ಡ ಸ್ವಯಂಸೇವಾ ಸಂಸ್ಥೆಯಾಗಿದ್ದು, ರಾಜ್ಯ ಮತ್ತು ಕೇಂದ್ರ ಸರ್ಕಾರಗಳೊಂದಿಗೆ ನಿಕಟ ಸಂಬಂಧದಲ್ಲಿ ಟಿಬಿಯನ್ನು ಕೊನೆಗೊಳಿಸಲು ಎಲ್ಲಾ ಹಂತಗಳಲ್ಲಿ ಶ್ರಮಿಸುತ್ತಿದೆ. ಅದು ಸ್ಥಾಪನೆಯಾದ ಸಮಯದಲ್ಲಿ ಕ್ಷಯರೋಗ ತುಂಬಾ ಮಾರಕವಾಗಿತ್ತು. ಲಕ್ಷಾಂತರ

ಜನ ರೋಗದಿಂದ ಸಾಯುತ್ತಿದ್ದರು. ಬಹಳಷ್ಟು ಜನ ಪೌಷ್ಠಿಕಾಂಶದ ಕೊರತೆಯಿಂದ ಸಾಯುತ್ತಿದ್ದರು. ಬಡತನದ ಕಾರಣ ಸರಿಯಾದ ಊಟ ಕೂಡ ಜನರಿಗೆ ಸಿಗುತ್ತಿರಲಿಲ್ಲ. ಇದರ ಪರಿಹಾರಕ್ಕೆ ಏನಾದರೂ ಮಾಡಬೇಕು ಎಂದು ಸ್ಥಾಪಿಸಲಾದ ಸಂಸ್ಥೆಯಿದು. ದಾನಿಗಳನ್ನು ಪ್ರೇರೇಪಿಸಿ ಅವರಿಂದ ಹಣ ಸಂಗ್ರಹ ಮಾಡಿ, ಈ ಒಂದು ಕಾಯಿಲೆಯ ನಿಯಂತ್ರಣಕ್ಕೆ ಪ್ರಯತ್ನಿಸುವುದು ಸಂಸ್ಥೆಯ ಕೆಲಸ. ನನ್ನ ಸುದೈವ, ನಾನು ರಾಷ್ಟ್ರೀಯ ಕೇಂದ್ರ ಸಮಿತಿಯಲ್ಲಿ ಇದ್ದೇನೆ, ಕಾರ್ಯಕಾರಣಿ ಸಮಿತಿಯಲ್ಲಿ ಕೆಲಸ ಮಾಡುತ್ತಿದ್ದೇನೆ. 2008ರಿಂದ ನಾನು ಇಲ್ಲಿಯವರೆಗೆ ಕೆಲಸ ಮಾಡುತ್ತಿದ್ದೇನೆ. ಇದು ತುಂಬಾ ಸಂತೋಷ ತಂದುಕೊಡುತ್ತದೆ. ❑

40 ಭಾರತ್ ಸೇವಾ ದಳದಲ್ಲಿನ ತಮ್ಮ ಸೇವೆ ಹಾಗೂ ಅದರಲ್ಲಿ ತಾವು ಕಂಡುಕೊಂಡ ಸಾರ್ಥಕತೆಯ ಬಗ್ಗೆ ತಿಳಿಸಬಹುದಾ?

ಭಾರತ್ ಸೇವಾದಳದ ಮೂಲ ಹೆಸರು ಹಿಂದುಸ್ತಾನಿ ಸೇವಾದಳ. ಆ ನಂತರ ಅದು ಭಾರತ ಸೇವಾದಳವಾಗಿ ಬದಲಾಯಿತು. 1923ರಲ್ಲಿ ಡಾಕ್ಟರ್ ನಾರಾಯಣ ಸುಬ್ಬರಾವ್ ಹರ್ಡೇಕರ್ ಅವರಿಂದ ಸ್ಥಾಪಿತವಾದ ಸಂಸ್ಥೆ ಅದು. ಅಂದರೆ ಬಹುತೇಕ ನೂರು ವರ್ಷಗಳ ಹಿಂದೆ ಸ್ಥಾಪನೆಯಾದ ಸಂಸ್ಥೆ. ಆ ಸಮಯದಲ್ಲಿ ಭಾರತದಲ್ಲಿ ಸ್ವಾತಂತ್ರ್ಯ ಚಳವಳಿ ಉತ್ತುಂಗದಲ್ಲಿತ್ತು. ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗವಹಿಸಿದ್ದ ಅನೇಕ ಯುವಕರನ್ನು ಬ್ರಿಟಿಷರು ಬಂಧಿಸುತ್ತಿದ್ದರು. ಆದರೆ ಬಹಳ ಜನ ಯುವಕರು ಜೈಲಿನಲ್ಲಿ ಇರಲಾರದೆ, ಕ್ಷಮಾಪಣೆ ಪತ್ರಗಳನ್ನು ಬರೆದುಕೊಟ್ಟು ಬಿಡುಗಡೆಯಾಗಿ ಬರುತ್ತಿದ್ದರು. ಆ

ನಂತರ ಅವರು ಸ್ವಾತಂತ್ರ್ಯ ಹೋರಾಟದಿಂದ ವಿಮುಖವಾಗುತ್ತಿದ್ದರು. ಇದನ್ನು ತಡೆಗಟ್ಟಿ, ಯುವಕರಲ್ಲಿ ಧೈರ್ಯ ಸಾಹಸದ ಆತ್ಮಬಲ ತುಂಬಬೇಕು ಎನ್ನುವ ಕಾರಣದಿಂದ ಈ ಸೇವಾದಳವನ್ನು ಕಟ್ಟುತ್ತಾರೆ. ಶಿಸ್ತುಬದ್ಧ ಸ್ವಯಂಸೇವಕರ ಪಡೆಯನ್ನು ತಯಾರಿಸಲು ಸೇವಾದಳವನ್ನು ಕಟ್ಟಿದರು. ಸ್ವಾತಂತ್ರ್ಯದ ನಂತರ ಹರ್ಡೀಕರ್ ಅವರಿಗೆ ಇದು ಕಾಂಗ್ರೆಸ್‌ನ ಭಾಗವಾಗಬಾರದು, ಒಂದು ರಾಜಕೀಯ ಪಕ್ಷದೊಂದಿಗೆ ಗುರುತಿಸಬಾರದು, ಪ್ರತ್ಯೇಕವಾಗಿ ರಾಜಕೀಯೇತರ ಸಂಸ್ಥೆ ಆಗಬೇಕು ಎನ್ನುವ ಆಶಯವಿತ್ತು. ಅದರಂತೆ ಕರ್ನಾಟಕದ ಹಾಸನದಲ್ಲಿ 1950ರಲ್ಲಿ ಅದನ್ನು ಭಾರತ ಸೇವಾದಳ ಎಂದು ರೂಪ ಕೊಟ್ಟು ಮರುಸ್ಥಾಪನೆ ಮಾಡುತ್ತಾರೆ. ಯುವಕರಲ್ಲಿ ದೇಶಪ್ರೇಮವನ್ನು, ಶಿಸ್ತನ್ನು ಬೆಳೆಸಿ, ಅವರನ್ನು ದೇಶದ ಕೆಲಸಗಳಿಗೆ ಸಜ್ಜುಗೊಳಿಸುವಂತ ಕೆಲಸವನ್ನು ಭಾರತ ಸೇವಾದಳ ಮಾಡುತ್ತ ಬಂದಿದೆ.

ನನ್ನ ಸುದೈವ, ನಾನೂ ಸಹ ಭಾರತ ಸೇವಾ ದಳದ ಜೊತೆ ಗುರುತಿಸಿಕೊಳ್ಳಲು ಸಾಧ್ಯವಾಯಿತು. ಐ.ಎನ್.ಐ. ರಾಮರಾಯರು ಅಂತ ತಾವು ಕೇಳಿರಬೇಕು. ಸುಭಾಷ್ ಚಂದ್ರ ಬೋಸ್ ಅವರು ಸ್ಥಾಪಿಸಿದ ಇಂಡಿಯನ್ ನ್ಯಾಷನಲ್ ಆರ್ಮಿಯಲ್ಲಿ ಇದ್ದ ಕನ್ನಡಿಗರು ಅವರು. ಅವರು ಸ್ವಾತಂತ್ರ್ಯ ನಂತರ ಸೇವಾದಳದ ಚುಕ್ಕಾಣಿಯನ್ನು ಹಿಡಿಯುತ್ತಾರೆ. ಅವರ ಆಹ್ವಾನದ ಮೇಲೆ ನಾನು ಅದರ ಸದಸ್ಯನಾದೆ. ಕೇಂದ್ರ ಸಮಿತಿ ಸದಸ್ಯನಾಗಿ ಸುಮಾರು ಹತ್ತು ವರ್ಷಗಳ ಕಾಲ ನಾನು ಕೆಲಸ ಮಾಡಿದ್ದೇನೆ. ಕೋಶಾಧ್ಯಕ್ಷ ಕೂಡ ಆಗಿದ್ದೆ. ನನಗೆ ಒಂದು ಸಮಾಧಾನ ಏನು ಎಂದರೆ, ನಾವು ಅನೇಕ ಶಿಕ್ಷಕರನ್ನು ರಾಜ್ಯಾದ್ಯಂತ ತರಬೇತಿ ಮಾಡಿದ್ದೇವೆ. ಯುವಕರ ಮನಸ್ಸನ್ನು ಕಟ್ಟುವ ಕೆಲಸದಲ್ಲಿ ನಾನೂ ತೊಡಗಿದ್ದಕ್ಕೆ ನನಗೆ ತುಂಬ ಸಮಾಧಾನವಿದೆ. ❑

41

ತಮಗೆ ಹಲವಾರು ಪ್ರಶಸ್ತಿಗಳು, ಗೌರವಗಳು ಬಂದಿವೆ. ರಾಜ್ಯೋತ್ಸವ ಪ್ರಶಸ್ತಿ, ರಾಷ್ಟ್ರಪತಿಗಳ ಚಿನ್ನದ ಪದಕ, ನಾಡೋಜ ಗೌರವ ಹೀಗೆ ಹತ್ತಾರು ಗೌರವಗಳಿಗೆ ತಾವು ಪಾತ್ರರಾಗಿದ್ದೀರಿ. ತಾವು ಪ್ರಶಸ್ತಿಗಳನ್ನು ಯಾವ ದೃಷ್ಟಿಕೋನದಲ್ಲಿ ನೋಡುತ್ತೀರಿ?

ನಾನು ಈ ಮೊದಲೇ ಹೇಳಿದಂತೆ, ನಮ್ಮ ಕೆಲಸ ನಾವು ಮಾಡುತ್ತಾ ಹೋಗಬೇಕು. ನಮ್ಮ ಶ್ರದ್ಧೆಯೆಲ್ಲ ಕೆಲಸದ ಮೇಲೆ ಇರಬೇಕು. ಏಕೆಂದರೆ ಕೆಲಸ ಸರಿಯಾಗಿದ್ದರೆ ಉಳಿದಿದ್ದೆಲ್ಲವೂ ಸಹಜವಾಗಿ ಹಿಂದೆ-ಹಿಂದೆ ಬರುತ್ತವೆ. 2004ರ ಇಸ್ವಿಯ ಒಂದು ದಿನ ಮಧ್ಯಾಹ್ನದ ಸಮಯದಲ್ಲಿ ನಾನು ಮನೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದೆ. ಆಗ ನಾನು ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿರುವುದು ಟಿವಿಯಲ್ಲಿ ಬಂತಂತೆ. ನಾನು ಟಿವಿ ನೋಡುತ್ತಿರಲಿಲ್ಲ. ನಮ್ಮ ಸಂಸ್ಥೆಯ ಪ್ರಾಂಶುಪಾಲರಾದ ಪ್ರೊ. ಎಸ್. ಉಮಾಶಂಕರ್ ಫೋನ್ ಮಾಡಿ ಹೇಳಿದರು. ಆವತ್ತು ಸಂಜೆ ಕನ್ನಡ

ಮತ್ತು ಸಂಸ್ಕೃತಿ ಇಲಾಖೆಯವರು ನನ್ನ ಬಯೋಡೇಟಾ ತರಿಸಿಕೊಂಡರು. ಮರುದಿನ ಕಾರ್ಯಕ್ರಮಕ್ಕೆ ಹೋಗಿ ಬಂದೆ. ನಾನು ಹೇಳುವುದು ಇಷ್ಟೇ. ನಮ್ಮ ಕೆಲಸವನ್ನು ನಾವು ಮಾಡೋಣ. ನಾವು ಇದಕ್ಕಾಗಿ ಹಾತೊರೆಯುವುದು ಬೇಡ, ಹಪಹಪಿಸುವುದು ಬೇಡ.

ಆಮೇಲೆ ರಾಷ್ಟ್ರಪತಿಗಳ ಚಿನ್ನದ ಪದಕ ಅಂದ್ರಲ್ಲ, ಅದರ ಬಗ್ಗೆ ನಾನು ಸ್ವಲ್ಪ ಬೆಳಕು ಚೆಲ್ಲಬೇಕು. ಯಾಕೆಂದರೆ ಅದನ್ನು ಪಡೆದುಕೊಂಡವರು ಬಹಳ ಪ್ರತಿಷ್ಠಿತ ಜನ. ಮದರ್ ತೆರೇಸಾ ಅವರು ಅದನ್ನು ಪಡೆದುಕೊಂಡಿದ್ದಾರೆ, ಅವರನ್ನು ನಾನು ಭೇಟಿ ಸಹ ಮಾಡಿದ್ದೆ. ನಮ್ಮ ಕರ್ನಾಟಕದಲ್ಲಿ ಕೆ.ಎಂ. ನಂಜಪ್ಪನವರು, ಪದ್ಮಶ್ರೀ ಪುರಸ್ಕೃತರಾದ ಬಿ.ಎಲ್.ಎಸ್. ಮೂರ್ತಿಯವರು ಕೂಡ ಪದಕವನ್ನು ಪಡೆದುಕೊಂಡಿದ್ದರು. ಇದರ ಆಯ್ಕೆ ಸಮಿತಿ ಬಹಳ ಕಠಿಣವಾಗಿದೆ. ಅತ್ಯುತ್ತಮ ಮಾನವೀಯ ಕೆಲಸ ಮಾಡಿದವರಿಗೆ ಮಾತ್ರ ಆ ಪ್ರಶಸ್ತಿ ಸಿಗುತ್ತದೆ. ಕೇವಲ ಕೆಲಸವನ್ನು ಆಧರಿಸಿ ಕೊಡುವ ಪ್ರಶಸ್ತಿ ಅದು. ತುಂಬಾ ಸುಲಭವಾಗಿ ಸಿಗುವುದಿಲ್ಲ. ವರ್ಷದಲ್ಲಿ ಕೇವಲ ಇಬ್ಬರಿಗೆ ಈ ಪ್ರಶಸ್ತಿಯನ್ನು ಕೊಡುತ್ತಾರೆ. ಯಾವುದಾದರೂ ವರ್ಷ ಅರ್ಹರು ಇಲ್ಲ ಅಂದರೆ ಆ ವರ್ಷ ಪ್ರಶಸ್ತಿಯನ್ನೇ ಕೊಡುವುದಿಲ್ಲ. ಆ ರೀತಿ ಆದಂತಹ ಒಂದು ವ್ಯವಸ್ಥೆ ಅಲ್ಲಿದೆ. ಅದ್ದರಿಂದ ಇದೊಂದು ಬಹಳ ವಿರಳವಾದ, ತೂಕವಾದ ಗೌರವ. ಅದನ್ನು ಪಡೆದಿದ್ದರ ಬಗ್ಗೆ ನನಗೆ ಖಂಡಿತವಾಗಲೂ ಸಂತೋಷವಿದೆ. ಪ್ರಶಸ್ತಿಯ ವಿಷಯದಲ್ಲಿ ಇನ್ನೊಂದು ಮಾತನ್ನು ನಾನು ಹೇಳಲೇಬೇಕು. ನನ್ನ ಪ್ರಕಾರ ಪ್ರಶಸ್ತಿಗಳು ಅಕಸ್ಮಾತಾಗಿ ಬಂದುಬಿಡುತ್ತವೆ. ಅಂದರೆ ಉತ್ತಮ ಕೆಲಸ ಮಾಡಿದ ಎಲ್ಲರಿಗೂ ಪ್ರಶಸ್ತಿಗಳು ಬರಲೇಬೇಕು ಎಂದೇನಿಲ್ಲ. ತುಂಬಾ ಜನ ಉತ್ತಮ ಕೆಲಸದ ಹೊರತಾಗಿಯೂ ಪ್ರಶಸ್ತಿ ಪಡೆಯದವರು ನಮ್ಮಲ್ಲಿದ್ದಾರೆ. ಆದ್ದರಿಂದ ನಾವು ಪ್ರಶಸ್ತಿಯನ್ನು ಅಪೇಕ್ಷಿಸುತ್ತಾ ಕೆಲಸ ಮಾಡಬಾರದು. ಕೆಲಸ ಮಾಡುವಾಗ ಖುಷಿ ಕೊಡುತ್ತದಲ್ಲ, ಆ ಖುಷಿಗೆ ಬೆಲೆ ಕಟ್ಟಲು ಆಗುತ್ತಾ? ❑

42 ತಾವು ಮದರ್ ಥೆರೆಸಾ ಅವರನ್ನು ಭೇಟಿ ಆಗಿದ್ದೆ ಅಂತ ಹೇಳಿದಿರಿ. ಆ ಬಗ್ಗೆ ಸ್ವಲ್ಪ ಹೇಳಬಹುದಾ?

ಹೌದು, ರೆಡ್ ಕ್ರಾಸ್ ಸಂಸ್ಥೆಯ ಕೆಲಸ ಮಾಡುವಾಗ ನಾನು ಅವರನ್ನು ನೋಡಿದ್ದೆ. ಅವರು ಪಶ್ಚಿಮ ಬಂಗಾಳದ ರೆಡ್ ಕ್ರಾಸ್‌ನ ಪ್ರತಿನಿಧಿಯಾಗಿ ಭಾರತೀಯ ರೆಡ್ ಕ್ರಾಸ್‌ನ ನ್ಯಾಷನಲ್ ಮ್ಯಾನೇಜಿಂಗ್ ಕಮಿಟಿಯಲ್ಲಿ ಇರುತ್ತಿದ್ದರು. ಅವರು ಮೀಟಿಂಗ್‌ಗಳಿಗೆಲ್ಲ ಬರುತ್ತಿದ್ದರು. ಅವರ ಬಗ್ಗೆ ಒಂದು ವಿಶೇಷವನ್ನು ನಾನಿಲ್ಲಿ ಹೇಳಲೇಬೇಕು. ನಮ್ಮ ಮೀಟಿಂಗ್‌ಗಳಲ್ಲಿ ಸಾಮಾನ್ಯವಾಗಿ ಎಲ್ಲರಿಗೂ ಬಿಸ್ಕಿಟ್, ಗೋಡಂಬಿ ಕೊಡುತ್ತಿದ್ದರು. ಕೆಲವರು ಅದನ್ನು ತಿನ್ನದೇ ಹಾಗೇ ಬಿಡುತ್ತಿದ್ದರು. ಮೀಟಿಂಗ್ ಮುಗಿದ ಮೇಲೆ ಥೆರೆಸಾ ಅವರು ಎಲ್ಲವನ್ನೂ ಒಂದು ಕವರಿನಲ್ಲಿ ತುಂಬಿಕೊಂಡು ಹೋಗುತ್ತಿದ್ದರು. ಬಡ ಜನರಿಗೆ ಕೊಡಲು ಇದನ್ನು ಅವರು ತೆಗೆದುಕೊಂಡು ಹೋಗುತ್ತಿದ್ದರು.

❑



43 ತಾವು ಅನೇಕ ವರ್ಷಗಳಿಂದ ಸಾಮಾಜಿಕ ಸೇವಾ ಕಾರ್ಯಗಳಲ್ಲಿ ಗುರುತಿಸಿ ಕೊಂಡವರು. ತಮ್ಮ ಪ್ರಕಾರ ನೈಜ ಸಮಾಜಸೇವೆ ಹೇಗಿರಬೇಕು ?

ನಾನು ಸಾಮಾಜಿಕ ಕೆಲಸವನ್ನು ಮೂರು ದಶಕಗಳಿಂದ ಮಾಡಿಕೊಂಡು ಬಂದಿದ್ದೇನೆ. ನಾನು ಗಮನಿಸಿದಂತೆ ಸಾಮಾಜಿಕ ಕೆಲಸ ಮಾಡಲು ಬರುವ ಅನೇಕ ಜನ ಏನಾದರೂ ಒಂದು ಬೇರೆ ಉದ್ದೇಶ ಇಟ್ಟುಕೊಂಡು ಬರುತ್ತಾರೆ. ಪ್ರಚಾರದ ಆಸೆಗೋ ಅಥವಾ ಮನ್ನಣೆಯ ಆಸೆಗೋ ಸಮಾಜ ಸೇವೆಗೆ ಬರುತ್ತಾರೆ. ನನ್ನ ಅನಿಸಿಕೆ ಏನೆಂದರೆ ಸಮಾಜಸೇವೆ ಅನ್ನುವುದು ಜೀವನದ ವಿಧಾನ ಆಗಬೇಕು. ಏನಾದರೂ ಗುರಿ ಇಟ್ಟುಕೊಂಡು ಸಮಾಜಸೇವೆ ಮಾಡಲು ಸಾಧ್ಯವಿಲ್ಲ. ಆಯಾ ಸಂದರ್ಭಕ್ಕೆ ಸೂಕ್ತವಾಗಿ

ಸ್ಪಂದಿಸುವುದೇ ಸಮಾಜಸೇವೆ. ನಾನು ಎಷ್ಟೆಲ್ಲ ಕೆಲಸ ಮಾಡಿದೆ, ನನಗೆ ಏನೂ ಸಿಗಲಿಲ್ಲ ಎಂದು ಕೊರಗುವವರನ್ನು ನಾನು ನೋಡಿದ್ದೇನೆ. ಇದು ಸಮಾಜಸೇವೆಯಲ್ಲ. ಕೇವಲ ಪ್ರಶಸ್ತಿಗೋಸ್ಕರವೇ ಕೆಲಸ ಮಾಡುವ ಸಮಾಜಸೇವಕರ ತಂಡವೊಂದಿದೆ. ಅಂಥವರು ಯಾವಾಗಲೂ ಇರುತ್ತಾರೆ. ಅಂತವರನ್ನು ಸಮಾಜ ಕೂಡ ಗುರುತಿಸುವುದಿಲ್ಲ. ಯಾರು ನಿಜವಾಗಿಯೂ ಶ್ರದ್ಧೆಯಿಂದ ನಿಷ್ಠೆಯಿಂದ ಕೆಲಸ ಮಾಡುತ್ತಾರಲ್ಲ, ಜನರು ಅಂತವರನ್ನೇ ಗುರುತಿಸುತ್ತಾರೆ, ಗೌರವಿಸುತ್ತಾರೆ. ಇನ್ನೊಂದು ಪ್ರಮುಖ ವಿಷಯ ಅಂದರೆ ಸಮಾಜಸೇವೆಗೆ ನಾವು ಬೇಸಿಕಲಿ ಮನಸನ್ನ ಸಿದ್ಧತೆ ಮಾಡಿಕೊಳ್ಳಬೇಕು. ಮನಸ್ಸು ಸಿದ್ಧತೆಯಾಗದಿದ್ದರೆ ಕಷ್ಟ. ಯಾಕೆಂದರೆ ಸಮಾಜಸೇವೆಯಲ್ಲಿ ನಾವು ಅಂದುಕೊಂಡಿದ್ದು ಎಲ್ಲವೂ ಸಾಧ್ಯವಾಗುವುದಿಲ್ಲ. ಎಲ್ಲರೂ ಸಹಕಾರ ಕೊಡುತ್ತಾರೆ ಎಂದು ಎಣಿಸಲು ಆಗುವುದಿಲ್ಲ. ಇವೆಲ್ಲದಕ್ಕೂ ನಾವು ಮಾನಸಿಕವಾಗಿ ಸಿದ್ಧರಿರಬೇಕು. ಯಾವುದೇ ನಿರೀಕ್ಷೆ ಇಲ್ಲದೆ ಕೆಲಸ ಮಾಡಬೇಕು. ನಾವು ಕೊಡುವ ಕೈ ಎನ್ನುವ ಭಾವನೆಯಿಂದ ಕೆಲಸ ಮಾಡಿದರೆ ಖಂಡಿತವಾಗಿಯೂ ಸಮಾಜಸೇವೆಯಲ್ಲಿ ಒಳ್ಳೆಯ ಸಾಧನೆ ಮಾಡಬಹುದು ಅಂತ ನನಗೆ ಅನಿಸುತ್ತದೆ.

❑

ವೈಯಕ್ತಿಕ ಜೀವನ



44 ತಾವು ಇಷ್ಟೊಂದು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿದ್ದೀರಿ. ಇದಕ್ಕೆ ಪ್ರೇರಣೆ ಏನು ?

ಒಂದು ಜನಪ್ರಿಯ ಉಕ್ತಿ ಇದೆ. 'A rolling stone does not gather mass' ಅಂತ. ಯಾವುದಾದರೂ ಒಂದು ಕ್ಷೇತ್ರಕ್ಕೆ ಅಂಟಿಕೊಂಡು ಇರದವರು ಏನು ಮಾಡಲೂ ಆಗುವುದಿಲ್ಲ ಅಂತ. ಅದೇ ತರಹದ್ದು ಇನ್ನೊಂದು ಉಕ್ತಿ ಇದೆ. ಅದೇನೆಂದರೆ, "Variety is the spice of life, that gives it all its flavour." ಅಂದರೆ ವೈವಿಧ್ಯತೆಯು ಜೀವನವನ್ನು ಹೆಚ್ಚು ಆಸಕ್ತಿ ದಾಯಿಕವಾಗಿ ಮಾಡುತ್ತದೆ. ಎರಡೂ ಯುಕ್ತಿಗಳೂ ಸಹ ಸಮಂಜಸವಾಗಿಯೇ ಇವೆ. ಆದರೆ ನಾನು ಆಯ್ಕೆ ಮಾಡಿಕೊಂಡಿದ್ದು ಎರಡನೇ ಉಕ್ತಿಯನ್ನು. ವೈವಿಧ್ಯತೆಯನ್ನು ನಾನು ಆಯ್ಕೆ ಮಾಡಿಕೊಂಡೆ.

ಯಾಕೆಂದರೆ ಇರುವುದು ಒಂದು ಜನ್ಮ. ಎಷ್ಟು ಸಾಧ್ಯವೋ ಅಷ್ಟು ಕ್ಷೇತ್ರಗಳಲ್ಲಿ ಕೈಲಾದ ಕೆಲಸವನ್ನು ಮಾಡೋಣ ಎನ್ನುವ ಒಂದು ಅಭಿರುಚಿಯಿಂದ ನಾನು ಹಲವು ಕ್ಷೇತ್ರಗಳಲ್ಲಿ ನಾನು ಕೈಲಾದ ಕೆಲಸಗಳನ್ನು ಮಾಡಿಕೊಂಡು ಬಂದಿದ್ದೇನೆ. ಅದು ಆನಂದವನ್ನು ತಂದುಕೊಟ್ಟಿದೆ. ತೃಪ್ತಿಯನ್ನು ತಂದುಕೊಟ್ಟಿದೆ. ಹಾಗಾಗಿ ವಿಭಿನ್ನತೆಯಲ್ಲಿ ಕೂಡ ವಿಶೇಷತೆಯನ್ನು ಕಾಣುವ ಪ್ರವೃತ್ತಿ ನನ್ನದು.

❑



45 ಇಷ್ಟೊಂದು ಕೆಲಸಗಳನ್ನು ಮಾಡಲು ತಮಗೆ ಆಯಾಸ ಎನ್ನಿಸಿವುದಿಲ್ಲವಾ?

ನಿಜ ಹೇಳಬೇಕೆಂದರೆ ಯಾವಾಗಲೂ ಕೆಲಸ ಮಾಡುತ್ತಾ ಇರುವುದರಲ್ಲೇ ನನಗೆ ಸಂತೋಷವಿದೆ. ಬ್ಯುಸಿಯಾಗಿದ್ದರೆ ನನಗೆ ಆಯಾಸ ಅಂತ ಅನಿಸುವುದಿಲ್ಲ. ಕೆಲಸವಿಲ್ಲದಿದ್ದರೆ ನನಗೆ ಬಹಳ ಸಂಕಟವಾಗುತ್ತದೆ. ಏನೂ ಕೆಲಸವಿಲ್ಲವಲ್ಲ ಅನ್ನಿಸುತ್ತದೆ. ಅದರಿಂದ ನನಗೆ ಚಟುವಟಿಕೆ ಚೈತನ್ಯವನ್ನು ತುಂಬುತ್ತದೆ.

46 ಇಷ್ಟೆಲ್ಲ ಜವಾಬ್ದಾರಿಗಳನ್ನು ನಿಭಾಯಿಸಲು ನಿಮಗೆ ಸಮಯದ ಕೊರತೆ ಆಗುವುದಿಲ್ಲವೇ?

ಸಮಯದ ಸರಿಯಾದ ಬಳಕೆ ಮಾಡಿದರೆ ಯಾವುದಕ್ಕೂ ಕೊರತೆ ಆಗುವುದಿಲ್ಲ. ಪ್ರತಿ ನಿಮಿಷಕ್ಕೂ ನಾವು ಪ್ರಾಮುಖ್ಯತೆ ಕೊಡಬೇಕು. ಜೊತೆಗೆ ಸಮಯವನ್ನು ಸರಿಯಾಗಿ ಹಂಚಿಕೊಳ್ಳಬೇಕು. ಕೆಲಸಗಳ ಒಂದು ಲಿಸ್ಟ್ ಮಾಡಿಕೊಳ್ಳಬೇಕು. ಆದ್ಯತೆಯ ಆಧಾರದ ಮೇಲೆ ಯಾವುದು ಮೊದಲು, ಯಾವುದು ಆಮೇಲೆ, ಈ ರೀತಿ ಮಾಡಿಕೊಂಡು ಹೋದರೆ ಖಂಡಿತವಾಗಿ ನಾವು ನಮ್ಮ ಎಲ್ಲ ಜವಾಬ್ದಾರಿಗಳನ್ನು ನಿಭಾಯಿಸಬಹುದು. ಅದೇನು ಅಷ್ಟು ಕಷ್ಟವಲ್ಲ.

❑

47 ಹಾಗಾದರೆ ಸಾಮಾನ್ಯವಾಗಿ ನಿಮ್ಮ ದಿನಚರಿ ಹೇಗಿರುತ್ತದೆ ?

ಬೆಳಿಗ್ಗೆ ಎದ್ದಾಗಿನಿಂದ ನಾವು ರಾತ್ರಿ ಮಲಗುವವರಿಗೆ ನನ್ನದೊಂದು ಫಾರ್ಮುಲಾ ಇದೆ. ನಾನು ಬೆಳಗ್ಗೆ ಸುಮಾರು 8 ಗಂಟೆಗೆ ತಿಂಡಿ ತಿನ್ನುತ್ತೇನೆ. ಸುಮಾರು ಒಂದು ಗಂಟೆಗೆ ಮಧ್ಯಾಹ್ನದ ಊಟ ಮಾಡುತ್ತೇನೆ. ಸಂಜೆ ಸುಮಾರು ಎಂಟು ಗಂಟೆಗೆ ಡಿನ್ನರ್ ಮಾಡುತ್ತೇನೆ. 8–1–8 ಎನ್ನುವ ಫಾರ್ಮುಲಾ ಇಟ್ಟುಕೊಂಡಿದ್ದೇನೆ.

ನಾನು ದಿನಕ್ಕೆ 8 ಗಂಟೆ ನಿದ್ದೆ ಮಾಡುತ್ತೇನೆ, ಒಂಬತ್ತಕ್ಕೆ ಮಲಗಿದರೆ 5ಕ್ಕೆ ಎದ್ದೇಳುತ್ತೇನೆ. ಹತ್ತಕ್ಕೆ ಮಲಗಿದರೆ ಆರಕ್ಕೆ ಎದ್ದೇಳುತ್ತೇನೆ. ಯಾಕೆಂದರೆ ಎಂಟು ತಾಸಿನ ನಿದ್ರೆ ನಮ್ಮ ದೇಹಕ್ಕೆ ತುಂಬ ಉತ್ತಮ ಔಷಧಿ. ಅದರಂತ ಮೆಡಿಸಿನ್ ಇನ್ನೊಂದು ಇಲ್ಲ.

ನಮ್ಮ ಇಡೀ ದೇಹ ಪುನರುಜ್ಜೀವನಗೊಳ್ಳುವುದಕ್ಕೆ ಎಂಟು ಗಂಟೆಯ ನಿದ್ರೆ ಬೇಕೇ ಬೇಕು. ನಾನು ದಿನದ ಮಧ್ಯದಲ್ಲಿ ಮಲಗಲು ಹೋಗುವುದಿಲ್ಲ. ನಿರಂತರ ಚಟುವಟಿಕೆ ಮಾಡೋದಕ್ಕೆ ಎನರ್ಜಿ ಬೇಕಾದರೆ, ದೇಹಕ್ಕೆ ಎಂಟು ಗಂಟೆಯ ವಿಶ್ರಾಂತಿ ಬೇಕೇ ಬೇಕು.

ವಿಶ್ವೇಶ್ವರಯ್ಯನವರು ಹಾಗೆ ಮಾಡುತ್ತಿದ್ದರಂತೆ. ಎಂಟು ತಾಸು ನಿದ್ರೆ ಮಾಡುತ್ತಿದ್ದರಂತೆ. 8–8–8 ಎನ್ನುವುದು ಅವರ ಫಾರ್ಮುಲಾ ಆಗಿತ್ತು. ಅಂದರೆ ಎಂಟು ತಾಸು ನಿದ್ರೆ, ಎಂಟು ತಾಸು ಖಾಸಗಿ ಕೆಲಸ, ಎಂಟು ತಾಸು ಕಛೇರಿ ಕೆಲಸ. ಜಪಾನಿಗೆ ಹೋದಾಗ ಕೂಡ ಅವರು ಅಲರಾಂ ಸೆಟ್ ಮಾಡಿಕೊಂಡು ತಲೆದಿಂಬಿನ ಕೆಳಗೆ ಇಟ್ಟು ಮಲಗುತ್ತಿದ್ದರಂತೆ. ಸರಿಯಾಗಿ ಎಂಟು ಗಂಟೆಯ ನಂತರ ಅಲಾರಾಂ ಹೊಡೆದಾಗ ಎದ್ದೇಳುತ್ತಿದ್ದರು. ಅಂದರೆ ಅವರು ಅಷ್ಟು ಶಿಸ್ತಿನಿಂದ ಬದುಕಿದ್ದರು. ಅದರಂತೆ ಆರೋಗ್ಯ ಕೂಡ ಇತ್ತು. ಶಿಸ್ತಿನ ಜೊತೆ ಆರೋಗ್ಯ ಕೂಡ ನಾವು ಕಾಪಾಡಿಕೊಳ್ಳಬೇಕು.

❑

48 ನಿಮ್ಮ ಶ್ರೀಮತಿಯವರ ಬಗ್ಗೆ, ಅವರ ಸಹಕಾರದ ಬಗ್ಗೆ ವಿವರವನ್ನು ಹಂಚಿಕೊಳ್ಳಬಹುದಾ?

ನನ್ನ ಶ್ರೀಮತಿಯವರು ನನಗೆ ಪೂರಕವಾಗಿ ನಿಂತುಕೊಂಡು ತುಂಬಾ ಸಹಕಾರ ಕೊಡುತ್ತಾರೆ. ಮದುವೆಯಾದಾಗ ಅವರು ಬಿ.ಎಸ್.ಸಿ. ಪದವೀಧರೆ ಆಗಿದ್ದರು. ಈಗ ನನ್ನ ಸಹವಾಸದಿಂದ ಅವರೂ ಕೂಡ ಎಂ.ಬಿ.ಎ ಮಾಡಿದರು, ಮ್ಯಾನೇಜ್‌ಮೆಂಟ್‌ನಲ್ಲಿ ಪಿಎಚ್‌ಡಿ ಮಾಡಿದರು. ಶಾರದಾ ಮಠ ನಡೆಸುವಂತಹ ಒಂದು ಕನ್ನಡ ಪ್ರಾಥಮಿಕ ಶಾಲೆಯಲ್ಲಿ ಇವತ್ತಿಗೂ ಕೂಡ ಅವರು ಮಕ್ಕಳಿಗೆ ಗೌರವ ಶಿಕ್ಷಕಿಯಾಗಿ ಪಾಠ ಮಾಡುತ್ತಾರೆ. ಬೋಧನೆಯ ವೃತ್ತಿ ಅವರಿಗೆ ತುಂಬ ಸಂತೋಷ ಕೊಟ್ಟಿದೆ. ಜೊತೆಗೆ ನನಗೂ ಪೂರಕವಾಗಿ ಎಲ್ಲ ರೀತಿಯಲ್ಲೂ

ಸಪೋರ್ಟ್ ಮಾಡುತ್ತಾರೆ. ಅದು ಸುಯೋಗ ಅನ್ನಿಸುತ್ತೆ. ಹಾಗೆಯೇ ಅವರು ಉತ್ತಮ ಮ್ಯಾನೇಜರ್. ಅವರು ನನ್ನನ್ನು ಮ್ಯಾನೇಜ್ ಮಾಡುತ್ತಾರೆ! ನಾನು ಉಳಿದದ್ದನ್ನು ಮ್ಯಾನೇಜ್ ಮಾಡುತ್ತೇನೆ! ಎಲ್ಲದರ ಹಿಂದೆ ನಾನು ಒಬ್ಬನೇ ಇದೀನಿ ಅಂತಾ ಹೇಳಿಕೊಳ್ಳಲು ಹೋಗುವುದಿಲ್ಲ. ಇಡೀ ನನ್ನ ಕುಟುಂಬ, ನನ್ನ ಎಲ್ಲ ಸ್ನೇಹಿತರು, ಸಹೋದ್ಯೋಗಿಗಳು, ಎಲ್ಲರೂ ಜೊತೆಯಲ್ಲಿ ಇರೋದ್ರಿಂದ ನಾನು ಒಂದು ರೂಪವಾಗಿ ನಿಮಗೆ ಕಾಣುತ್ತಾ ಇದ್ದೀನಿ, ಅಷ್ಟೇ.

❑

49 ನಿಮ್ಮ ಜೀವನ ನೀವು ಹಾಕಿಕೊಂಡ ರೋಡ್ ಮ್ಯಾಪಿನಲ್ಲಿಯೇ ಚಲಿಸಿದೆ ಎನ್ನುವ ತೃಪ್ತಿ ನಿಮಗಿದೆಯಾ?

ಇಲ್ಲಿಯವರೆಗೂ ನಾನು ರೋಡ್ ಮ್ಯಾಪ್ ಹಾಕಿಕೊಂಡು ಅಲ್ಲಿಗೇ ಹೋಗಬೇಕು ಎಂದು ಹೊರಟವನಲ್ಲ. ಸಮಯದ ಸಂಪೂರ್ಣ ಪ್ರಯೋಜನ ಮಾಡಿಕೊಂಡರೆ, ತಾನಾಗಿಯೇ ಎಲ್ಲ ಸಾಧನೆಗಳೂ, ಎಲ್ಲ ಕೆಲಸಗಳು ಆಗುತ್ತವೆ ಅಂತ ನಾನು ಅಂದುಕೊಂಡಿದ್ದೇನೆ. ನನ್ನ ಪ್ರಕಾರ ಈವರೆಗಿನ ನನ್ನ ಒಂದು ದೊಡ್ಡ ಸಾಧನೆ ಎಂದರೆ ನಾನು ಯಾವತ್ತೂ ನನ್ನ ಸಮಯವನ್ನು ಹಾಳು ಮಾಡಿಲ್ಲ. ಸರ್ ಎಂ. ವಿಶ್ವೇಶ್ವರಯ್ಯನವರು ಒಂದು ಮಾತನ್ನು ಹೇಳುತ್ತಾರೆ: ನಾವು ಯಾವಾಗಲೂ ಒಂದೋ ನಮ್ಮ ಕೆಲಸದಲ್ಲಾದರೂ ತೊಡಗಿರಬೇಕು, ಇಲ್ಲ ಇನ್ನೊಬ್ಬರ ಕೆಲಸದಲ್ಲಾದರೂ ತೊಡಗಿರಬೇಕು. ಒಟ್ಟಾರೆಯಾಗಿ

ಕೆಲಸದಲ್ಲಿ ತೊಡಗಿರಬೇಕು. ನಿರಂತರ ಚಟುವಟಿಕೆ ನಮಗೆ ಒಳ್ಳೆಯ ಆರೋಗ್ಯವನ್ನು ಕೊಡುತ್ತದೆ, ದೀರ್ಘಾಯಸ್ಸನ್ನು ಕೊಡುತ್ತದೆ. ನಾನು ಈ ಮಾತಿನಲ್ಲಿ ಬಹಳ ನಂಬಿಕೆ ಇಟ್ಟಿದ್ದೇನೆ. ನನಗೆ ಈ ಸೇವೆ ಎನ್ನುವಂತಹದ್ದು ಒಂದು ಹಾದಿಯೇ ಹೊರತು ಗುರಿಯಲ್ಲ. ಆ ಹಾದಿಯಲ್ಲಿ ನಾನು ಹೋಗ್ತಾ ಇದ್ದೀನಿ. ಯಾಕೆಂದರೆ ಈ ಸೇವಾ ಕ್ಷೇತ್ರ ಇದೆಯಲ್ಲ ಇದು ಆಕಾಶದಷ್ಟೇ ಅಗಲವಾದದ್ದು, ಎತ್ತರವಾದದ್ದು. ಇದು ನನ್ನ ಕೆಲಸ, ಇದು ಇನ್ನೊಬ್ಬರ ಕೆಲಸ ಅಂತ ನನಗೇನೂ ಇಲ್ಲ. ನನಗೆ ಯಾವ ಕೆಲಸದಲ್ಲಿ ಪ್ರೀತಿ ಇದೆಯೋ, ಯಾವುದು ಸಂತೋಷವನ್ನು ಕೊಡುತ್ತದೆಯೋ, ಆ ಕೆಲಸವನ್ನು ನಾನು ಮಾಡುತ್ತಾ ಹೋಗುತ್ತೇನೆ. ಅದು ನನ್ನನ್ನು ಇಲ್ಲಿಯವರೆಗೆ ತಂದು ಮುಟ್ಟಿಸಿದೆ. ❑



50 ಇಂದಿನ ಯುವ ಪೀಳಿಗೆಗೆ ನಿಮ್ಮ ಕಿವಿಮಾತು ಏನು?

ನಾವು ಗಾಂಧಿ, ಅಂಬೇಡ್ಕರ್, ವಿವೇಕಾನಂದರ ಆದರ್ಶಗಳನ್ನು, ಚಿಂತನೆಗಳನ್ನು ನಮ್ಮೊಳಕ್ಕೆ ಬಿಟ್ಟುಕೊಂಡರೆ ನಿಜಕ್ಕೂ ನಾವು ಅಂತರಂಗವಾಗಿ, ಬಹಿರಂಗವಾಗಿ ಬೆಳೆಯುತ್ತೇವೆ; ಇದು ನಮ್ಮ ವ್ಯಕ್ತಿತ್ವದ ಸರ್ವತೋಮುಖ ಬೆಳವಣಿಗೆಗೆ ಕಾರಣವಾಗುತ್ತದೆ. ಅವರ ತಾತ್ವಿಕತೆ, ಆಧ್ಯಾತ್ಮ ನಮ್ಮ ಬದುಕಿಗೆ ಹೊಸಬೆಳಕನ್ನು ನೀಡುವ ದಾರಿದೀಪವಾಗುತ್ತದೆ.

❑

ನಾಡೋಜ ಡಾ. ವೂಡೇ ಪಿ. ಕೃಷ್ಣ

ಮುಖಾಮುಖಿ

ಸಂದರ್ಶನ-ಅಂತರಂಗ ದರ್ಶನ

ಬಹುಪಾಲು ಸಂದರ್ಶನಗಳು ವ್ಯಕ್ತಿಯ ಬಾಹ್ಯ ವ್ಯಕ್ತಿತ್ವವನ್ನಷ್ಟೇ ಪರಿಚಯಿಸುತ್ತವೆ. ಆದರೆ ಕೆಲವು ಸಂದರ್ಶಗಳು ಆ ವ್ಯಕ್ತಿಯ ಅಂತರಂಗವನ್ನು ಅತ್ಯಂತ ಸೂಕ್ಷ್ಮವಾಗಿ ಶೋಧಿಸುತ್ತವೆ, ಅವರ ಒಳಗನ್ನೆಲ್ಲಾ ಅನಾವರಣ ಮಾಡುತ್ತವೆ. ಅಂಥ ಅಪರೂಪದ ಸಂದರ್ಶನ ಬಹುಶ್ರುತ ವಿದ್ವಾಂಸ, ಶಿಕ್ಷಣಶಿಲ್ಪಿ, ನಾಡೋಜ ಡಾ. ವೂಡೇ ಪಿ. ಕೃಷ್ಣ ಅವರನ್ನು ಕುರಿತ 'ಸಂದರ್ಶನ-ಅಂತರಂಗ ದರ್ಶನ'ದಲ್ಲಿ ಒಡಮೂಡಿದೆ.

ಒಬ್ಬ ವ್ಯಕ್ತಿ ಪರಿಪೂರ್ಣ ವ್ಯಕ್ತಿಯಾಗಿ ರೂಪುಗೊಳ್ಳುವ ಹಿನ್ನಲೆಯಲ್ಲಿ ಅನೇಕ ಚೇತನಗಳು, ಪ್ರಭಾವಗಳು, ಪ್ರೇರಣೆಗಳು ಕೆಲಸ ಮಾಡಿರುತ್ತವೆ. ಅಸ್ತಿತ್ವದಲ್ಲಿ ಇಲ್ಲದ ತಮ್ಮ ಮೂಲ ಗ್ರಾಮದ ಅಸ್ಮಿತೆಯನ್ನು ತಮ್ಮ ಹೆಸರಿನೊಂದಿಗೆ ಜೀವಂತವಾಗಿಟ್ಟುಕೊಂಡಿರುವ ಬೆಂಗಳೂರಿನ ಪ್ರತಿಷ್ಠಿತ 'ವೂಡೇ ಮನೆತನ'ದ ಕುಡಿಯೇ 'ವೂಡೇ' ಕೃಷ್ಣ. ಸತ್ಯವ್ರತಿ ಗಾಂಧಿಯವರ ನೈತಿಕ ಶಕ್ತಿ, ವೀರ ಸನ್ಯಾಸಿ ವಿವೇಕಾನಂದರ ಆಧ್ಯಾತ್ಮಿಕ ಶಕ್ತಿ, ಪ್ರಖರ ಜ್ಞಾನಿ ಅಂಬೇಡ್ಕರ್ ಅವರ ಕಾನೂನು ಶಕ್ತಿ- ಇವೆಲ್ಲಾ ಮುಪ್ಪುರಿಗೊಂಡಂತೆ ಅವರೊಡನೆ ಹೆಣೆದುಕೊಂಡು ಒಬ್ಬ ಅಪರೂಪದ ಶಿಕ್ಷಣ ತಜ್ಞನನ್ನಾಗಿ ರೂಪಿಸಿವೆ, ಇಡೀ ತಮ್ಮ ಬದುಕನ್ನೇ ಸಾರ್ವಜನಿಕ ಸೇವೆಗೆ ಮುಡಿಪಾಗಿಟ್ಟಿರುವ ಅನನ್ಯ ವ್ಯಕ್ತಿತ್ವ ಕೃಷ್ಣ ಅವರದು. ಈ ಶರೀರ ಇರುವುದೇ ಪರೋಪಕಾರಕ್ಕೆ ಎಂಬ ಸಿದ್ಧಾಂತ ಅವರದ್ದು. ಸಂದರ್ಶನದಲ್ಲಿ ಅವರ ಸೇವಾಕ್ಷೇತ್ರದ ವಿರಾಟ್ ದರ್ಶನವಾಗುತ್ತದೆ.

ಸಂದರ್ಶನದಲ್ಲಿನ ಪ್ರಶ್ನೋತ್ತರಗಳು ಕೃಷ್ಣ ಅವರ ವೈಯಕ್ತಿಕ ಜೀವನ ಮತ್ತು ಶಿಕ್ಷಣ ಕ್ಷೇತ್ರದ ಕಥನವನ್ನು ಅಪರೋಕ್ಷವಾಗಿ ಅನಾವರಣ ಮಾಡುತ್ತಲೇ ಒಂದು ಆದರ್ಶ ವ್ಯಕ್ತಿತ್ವ ಹೇಗಿರಬೇಕೆಂಬುದಕ್ಕೆ ರೂಪಕವೂ, ಮೌಲ್ಯಾಧಾರಿತ ಜೀವನಕ್ಕೆ ಒಂದು ನಿದರ್ಶನವೂ ಆಗಿವೆ. ಅವರ ಪರಿಪಕ್ವ ಮುನ್ನೋಟವೇ ಬೃಹತ್ ಹಡಗಿನಂತಹ ಶೇಷಾದ್ರಿಪುರಂ ಶಿಕ್ಷಣ ದತ್ತಿಯನ್ನು ಯಶಸ್ವಿಯಾಗಿ ಮುನ್ನಡೆಸುತ್ತಿರುವ ಗುಟ್ಟುಗಳು ಇದರಲ್ಲಿವೆ.

ಪ್ರೊ. ಎಂ.ಜಿ. ರಂಗಸ್ವಾಮಿ

ಪಟೇಲ್ ಪಬ್ಲಿಕೇಷನ್ಸ್
ಬೆಂಗಳೂರು